ಕನ್ನಡ ಭಾಷಾವಿಜ್ಞಾನ ಗ್ರಂಥಸೂಚಿ

ಯುಜಿಸಿ ಗೆ ಸಾದರಪಡಿಸಿದ ಸಂಶೋಧನಾ ಯೋಜನಾ ವರದಿ – ೨೦೨೦

Biblography of Kannada Linguistics

UGC Major Project Report – 2020

ಬಸವರಾಜ ಕೋಡಗುಂಟಿ

ಕನ್ನಡ ವಿಭಾಗ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರಗಿ–೫೮೫೩೬೭

ಕನ್ನಡ ಭಾಷಾವಿಜ್ಞಾನ ಗ್ರಂಥಸೂಚಿ: ಪ್ರವೇಶ

ಕನ್ನಡ ವ್ಯಾಕರಣ ಪರಂಪರೆ

ಕನ್ನಡ ಭಾಷಾವಿಜ್ಞಾನದ ಇತ್ತೀಚಿನ ಸಂಶೋಧನೆಗಳು

ಗ್ರಂಥಸೂಚಿ:

1. ಅನುವಾದ – Translation Studies
2. ಇತರ – Other
3. ಇತಿಹಾಸವಿಜ್ಞಾನ – Historiography
4. ಐತಿಹಾಸಿಕ ಭಾಷಾವಿಜ್ಞಾನ – Historical Linguistics
5. ಕಂಪ್ಯೂಟರ್ ಭಾಷಾವಿಜ್ಞಾನ – Computational Linguistics
6. ಗ್ರಂಥಸೂಚಿ – Bibliography
7. ತೌಲನಿಕ ಭಾಷಾವಿಜ್ಞಾನ Comparative Linguistics
8. ನಾಮ ಅಧ್ಯಯನ – Name Studies
9. ನಿಘಂಟು – Dictionary
10. ನಿಘಂಟುವಿಜ್ಞಾನ – Lexicography
11. ಪದವಿಜ್ಞಾನ – Lexical Studies
12. ಭಾಷಾಪಾಲಸಿ – Language Planning
13. ಮನೋಭಾಷಾವಿಜ್ಞಾನ – Psycholinguistics
14. ವರ್ಣನಾತ್ಮಕ ಭಾಷಾವಿಜ್ಞಾನ – Descriptive Linguistics
15. ವ್ಯಾಕರಣ – Grammar
16. ಶಿಕ್ಷಣ ಭಾಷಾವಿಜ್ಞಾನ – Educational Linguistics
17. ಶೈಲಿವಿಜ್ಞಾನ – Stylistics
18. ಸಂಕೀರ್ಣ – Mixed
19. ಸಮಾಜಭಾಷಾವಿಜ್ಞಾನ – Sociolinguistics
20. ಸಾಮಾನ್ಯ ಭಾಷಾವಿಜ್ಞಾನ – General Linguistics

ಕನ್ನಡ ಭಾಷಾವಿಜ್ಞಾನ ಗ್ರಂಥಸೂಚಿ: ಪ್ರವೇಶ

ಕನ್ನಡ ಬಾಶೆ ಸುಮಾರು ಹನ್ನೊಂದು ನೂರು ವರುಶಗಳ ವ್ಯಾಕರಣ ಇಲ್ಲವೆ ಬಾಶೆಯ ಅದ್ಯಯನದ ಇತಿಹಾಸವನ್ನು ಹೊಂದಿದೆ. ಇಂತಾ ಬಹು ಉದ್ದನೆಯ ಬಾಶಾದ್ಯಯನದ ಇತಿಹಾಸವನ್ನು ಹೊಂದಿರುವ ಜಗತ್ತಿನ ಕೆಲವೆ ಬಾಶೆಗಳಲ್ಲಿ ಕನ್ನಡವೂ ಒಂದಾಗಿದೆ. ಬಾಶೆ ಸಮಾಜದ ಬಾಗವಾಗಿರುವುದರಿಂದ ಮತ್ತು ಮನುಶ್ಯ ಬದುಕಿನ ಮತ್ತು ಸಮಾಜದ ಬಹುತೇಕ ವ್ಯಾಪಾರಗಳು ಬಾಶೆಯ ಮೂಲಕ ನಡೆಯುವುದರಿಂದ ಬಾಶೆಯ ಅದ್ಯಯನ ಮನುಶ್ಯ ಬದುಕಿಗೆ ಮತ್ತು ಸಮಾಜಕ್ಕೆ ಬಹು ಮಹತ್ವದ ವಿಚಾರವಾಗುತ್ತದೆ. ಆದುನಿ ಕಾಲದಲ್ಲಿ ಬಾಶೆಯ ಅದ್ಯಯನದ ಹಲವಾರು ಆಯಾಮಗಳು ತೆರೆದುಕೊಂಡಿದ್ದು ಕನ್ನಡದಲ್ಲಿಯೂ ಹಲವು ಆಯಾಮಗಳಲ್ಲಿ ಅದ್ಯಯನಗಳು ನಡೆದಿದೆ. ಸಾವಿರಾರು ಸಂಕೆಯಲ್ಲಿ ಪುಸ್ತಕ, ಪ್ರಬಂದ, ಲೇಕನ ಮೊದಲಾದವು ಬಂದಿವೆ. ಅದೆ ವೇಳೆಗೆ ಕನ್ನಡದ ಮೇಲೆ ಮತ್ತು ಕನ್ನಡಕ್ಕೆ ಸಂಬಂದಿಸಿ ಇನ್ನೂ ಹಲವಾರು ಅದ್ಯಯನಗಳು ಬರಬೇಕಿವೆ. ಇದುವರೆಗೆ ಬಂದಿರುವ ಅದ್ಯಯನಗಳನ್ನು ತಿಳಿದುಕೊಂಡಿದ್ದರೆ ಮುಂದಿನ ಅದ್ಯಯನದ ಹಾದಿ ತುಸು ಸುಗಮವಾಗುತ್ತದೆ. ಇದುವರೆಗೆ ಬಂದಿರುವ ಅದ್ಯಯನಗಳು ಮತ್ತು ಬರಬೇಕಾದ ಅದ್ಯಯನಗಳು, ಇದುವರೆಗೆ ಬಂದಿರುವ ಅದ್ಯಯನಗಳು ಆಯಾಮಗಳು ಮತ್ತು ಮುಂದೆ ಅದ್ಯಯನ ಮಾಡಬೇಕಿರುವ ಆಯಾಮಗಳು ಸ್ಪಶ್ಟವಾಗಬೇಕು. ಅದರಿಂದ ಹೊಸ ಅದ್ಯಯನಗಳಿಗೆ ದಾರು ಸುಗಮವಾಗುತ್ತದೆ. ಅಲ್ಲದೆ ಹೊಸ ಅದ್ಯಯನಗಳಿಗೆ ಹಳೆಯ ಅದ್ಯಯನಗಳು ಆಕರಗಳಾಗಿರುತ್ತದೆ. ಈ ಆಕರಗಳ ಮಾಹಿತಿ ಒಂದೆಡೆ ದೊರೆತರೆ ಹೊಸ ಅದ್ಯಯನಗಳ ವೇಗ ಹೆಚ್ಚುತ್ತದೆ. ಮುಕ್ಯವಾಗಿ ಹೊಸದಾಗಿ ಅದ್ಯಯನಕ್ಕೆ ಬರುವ ಮತ್ತು ಇತರ ಕ್ಶೇತ್ರಗಳಲ್ಲಿನ ವಿದ್ವಾಂಸರು ಬಾಶಾವಿಗ್ನಾನದ ಅದ್ಯಯನಗಳನ್ನು ಬಳಸಿಕೊಳ್ಳುವಾಗ ಇದುವರೆಗಿನ ಅದ್ಯಯನಗಳ ಮಾಹಿತಿ ಒಂದೆಡೆ ದೊರಕುವುದು ಬಹು ಅವಶ್ಯ ಮತ್ತು ಇದು ಹೆಚ್ಚು ಉಪಯೋಗವೂ ಆಗಿದೆ. ವ್ಯಾಪಕವಾದ ಕನ್ನಡ ಅದ್ಯಯನಗಳನ್ನು ಒಂದೆಡೆ ಗ್ರಂತಸೂಚಿ ರೂಪದಲ್ಲಿ ಕೊಡುವುದು ಈ ಆಶಯಗಳನ್ನು ಈಡೇರಿಸಿದಂತೆ ಆಗುತ್ತದೆ.

ಕನ್ನಡ ಅದ್ಯಯನಗಳು ಸಾವಿರ ವರುಶಗಳಶ್ಟು ವ್ಯಾಪಕವಾದ ಕಾಲಗಟ್ಟದಲ್ಲಿ, ಹತ್ತಾರು ಗ್ನಾನಶಾಕೆಗಳು, ಅವುಗಳೊಳಗಿನ ಹಲವಾರು ಒಳಶಾಕೆಗಳಲ್ಲಿ, ಕನ್ನಡ, ಇಂಗ್ಲೀಶು ಮೊದಲ್ಗೊಂಡು ಹಲವಾರು ಬಾರತೀಯ ಮತ್ತು ವಿದೇಶಿ ಬಾಶೆಗಳಲ್ಲಿ, ಕರ್ನಾಟಕದ ಹಳ್ಳಿಗಾಡಿನಿಂದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯುಗಳಿಂದ ಕನ್ನಡ ಅದ್ಯಯನಗಳು ಬಂದಿವೆ. ಹಲವಾರು ನಿಟ್ಟಿನಲ್ಲಿ ವ್ಯಾಪಕತೆಯನ್ನು ತೋರಿಸುವ, ಸಂಕ್ಯಾತ್ಮವಾಗಿಯೂ ಬ್ರುಹತ್ತಾಗಿರುವ ಕನ್ನಡ ಅದ್ಯಯನಗಳ ಗ್ರಂತಸೂಚಿ ಇಲ್ಲಿ ಒಂದೆಡೆ ಸಂಯೋಜಿಸಿ ಕೊಡಲಾಗಿದೆ.

ಕನ್ನಡ ಬಾಶಾದ್ಯಯನಗಳನ್ನು ಈ ಕೆಳಗಿನಂತೆ ಸ್ತೂಲವಾಗಿ ವಿಬಾಸಿಕೊಂಡಿದೆ.

1. ಅನುವಾದ – Translation Studies (34)
2. ಇತರ – Other (399)

3. ಇತಿಹಾಸವಿಜ್ಞಾನ – Historiography (55)
4. ಐತಿಹಾಸಿಕ ಭಾಷಾವಿಜ್ಞಾನ – Historical Linguistics (295)
5. ಕಂಪ್ಯೂಟರ್ ಭಾಷಾವಿಜ್ಞಾನ – Computational Linguistics (11)
6. ಗ್ರಂಥಸೂಚಿ – Bibliography (04)
7. ತೌಲನಿಕ ಭಾಷಾವಿಜ್ಞಾನ Comparative Linguistics (602)
8. ನಾಮ ಅಧ್ಯಯನ – Name Studies (275)
9. ನಿಘಂಟು – Dictionary (54)
10. ನಿಘಂಟುವಿಜ್ಞಾನ – Lexicography (254)
11. ಪದವಿಜ್ಞಾನ – Lexical Studies (437)
12. ಭಾಷಾಪಾಲಸಿ – Language Planning (54)
13. ಮನೋಭಾಷಾವಿಜ್ಞಾನ – Psycholinguistics (96)
14. ವರ್ಣನಾತ್ಮಕ ಭಾಷಾವಿಜ್ಞಾನ – Descriptive Linguistics (1493)
15. ವ್ಯಾಕರಣ – Grammar (322)
16. ಶಿಕ್ಷಣ ಭಾಷಾವಿಜ್ಞಾನ – Educational Linguistics (203)
17. ಶೈಲಿವಿಜ್ಞಾನ – Stylistics (199)
18. ಸಂಕೀರ್ಣ – Mixed (70)
19. ಸಮಾಜಭಾಷಾವಿಜ್ಞಾನ – Sociolinguistics (180)
20. ಸಾಮಾನ್ಯ – General (1083)

    ಒಟ್ಟು ೬೧೨೦

ಈ ವರ್ಗೀಕರಣಕ್ಕೆ ಮೊದಲು ಕನ್ನಡ ಬಾಶೆಯ ಅಧ್ಯಯನಕ್ಕೆ ಸಂಬಂದಿಸಿ ಕೆಲವು ಮಹತ್ವದ ವಿಚಾರಗಳನ್ನು ಚರ್ಚಿಸಿದೆ. ಇದರಲ್ಲಿ ಪಾರಂಪರಿಕ ಬಾಶಾಧ್ಯಯನಗಳನ್ನು ಕುರಿತು ಮತ್ತು ಆದುನಿಕ ಅಧ್ಯಯನಗಳನ್ನು ಕುರಿತು ಎರಡು ಬಾಗಗಳಲ್ಲಿ ಚರ್ಚಿಸಿದೆ. ಆ ಮೂಲಕ ಕನ್ನಡ ಬಾಶಾಧ್ಯಯನ ಪರಂಪರೆಯ ಲಕ್ಶಣಗಳನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿದೆ. ಈ ಅಧ್ಯಯನಗಳು ಇನ್ನಶ್ಟು ಬರಬೇಕಿದೆ.

ಈ ಗ್ರಂತಸೂಚಿಯಲ್ಲಿ ಸುಮಾರು ಆರು ಸಾವಿರದಶ್ಟು ನೊಂದಣಿಗಳನ್ನು ಕಲೆ ಹಾಕಿದೆ. ಇದರಲ್ಲಿ ಹೆಚ್ಚಾಗಿ ಕನ್ನಡ ಮತ್ತು ಇಂಗ್ಲೀಶು ಬಾಶೆಯಲ್ಲಿ ಅಲ್ಲದೆ ಇನ್ನು ಕೆಲವು ಇತರ ಬಾಶೆಗಳಲ್ಲಿಯೂ ಇವೆ. ಇದರಲ್ಲಿ ನೊಂದಣಿಯೊಂದರ ಮಾಹಿತಿ ಕೊಡುವಾಗ ಅನುಸರಿಸಿದ ಅನುಕ್ರಮ ಹೀಗಿದೆ.

ಪುಸ್ತಕ: ಲೇಕಕ. ಪ್ರಕಟಣೆ ವರುಶ. ಪುಸ್ತಕದ ಹೆಸರು. ಪ್ರಕಾಶನ.

ಸಂಪಾದಿತ ಪುಸ್ತಕದಲ್ಲಿನ ಲೇಕನ: ಲೇಕಕ. ಪ್ರಕಟಣೆ ವರುಶ. ಲೇಕನದ ಹೆಸರು. ಪುಸ್ತಕದ ಹೆಸರು. ಸಂಪಾದಕರು. ಪ್ರಕಾಶನ. ಪುಟ ಸಂಕೆ.

ಪತ್ರಿಕೆಯಲ್ಲಿನ ಲೇಕನ: ಲೇಕಕ. ಪ್ರಕಟಣೆ ವರುಶ. ಪತ್ರಿಕೆ ಹೆಸರು. ಸಂಪುಟ–ಸಂಚಿಕೆ. ಪುಟ ಸಂಕೆ.

ಕನ್ನಡ ವ್ಯಾಕರಣ ಪರಂಪರೆ: ಕೆಲವು ಅಲಕ್ಷಿತ ಆಯಾಮಗಳು

೧. ಕನ್ನಡ ಪಾರಂಪರಿಕ ವ್ಯಾಕರಣಗಳನ್ನು ಪರಿಚಯಿಸುವ, ವಿಮರ್ಶಿಸುವ ಹಲವಾರು ಪುಸ್ತಕ, ಲೇಕನಗಳು ಈಗಾಗಲೆ ಬಂದಿವೆ. ಆದ್ದರಿಂದ ಈ ಲೇಕನದಾಗ ಕನ್ನಡ ವ್ಯಾಕರಣ ಪರಂಪರೆಯನ್ನು ಕೆಲವು ಬಿನ್ನ ಆಯಾಮಗಳಿಂದ ನೋಡುವ ಮತ್ತು ಅವಶ್ಯವಾಗಿ ಆಗಬೇಕಿರುವ ಕೆಲವು ಕೆಲಸಗಳು ಮತ್ತು ಅವುಗಳ ಮಹತ್ವ ಕುರಿತು ಪರಿಚಯಿಸುವ ಪ್ರಯತ್ನ ಮಾಡಿದೆ.

೨. ಬಾಶೆಯ ಅದ್ಯಯನಕ್ಕೆ ಕನ್ನಡ ಸಾವಿರ ವರುಶಗಳಿಗೂ ಹೆಚ್ಚು ಕಾಲದ ಇತಿಹಾಸವನ್ನು ಹೊಂದಿದೆ. ಜಗತ್ತಿನ ಕೆಲವೆ ಬಾಶೆಗಳು ಇಶ್ಟು ಸುದೀರ್ಗವಾದ ಇತಿಹಾಸವನ್ನು ಹೊಂದಿವೆ. ಬಾರತದ ಸಂದರ್ಬದಲ್ಲಿ ಸಂಸ್ಕ್ರುತ, ಪ್ರಾಕ್ರುತ(ಗಳು), ತಮಿಳು ಹೊರತುಪಡಿಸಿದರೆ ಬೇರೆ ಯಾವ ಬಾಶೆಗಳಿಗೂ ಸಾವಿರಕ್ಕೂ ಹೆಚ್ಚು ವರುಶಗಳ ಬಾಶಾದ್ಯಯನ ಇತಿಹಾಸ ಇಲ್ಲ. ಹಾಗಾಗಿ ಕನ್ನಡ ಬಾಶೆಯ ವ್ಯಾಕರಣ ಪರಂಪರೆ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಇದುವರೆಗೆ ಹೆಚ್ಚು ಮಂದಿಗೆ ತಿಳಿದಿರುವಂತೆ ಕನ್ನಡದ ದೊರೆತ ಅತಿ ಹಳೆಯ ಕ್ರುತಿ ೯ನೆ ಶತಮಾನದ ಕವಿರಾಜಮಾರ್ಗ, ಒಂದು ಲಾಕ್ಶಣಿಕ ಗ್ರಂತ. ಇದು ಕನ್ನಡ ವ್ಯಾಕರಣ ಚರ್ಚೆಗೆ ಪರಿಗಣಿಸುವಶ್ಟು ಜಾಗವನ್ನು ಕೊಟ್ಟಿದೆ. ಇದರಲ್ಲಿ ವಿವಿದ ವ್ಯಾಕರಣ ವಿಚಾರಗಳನ್ನು ಅಲ್ಲಲ್ಲಿ ಚರ್ಚಿಸಲಾಗಿದೆ. ಈ ಚರ್ಚೆಯ ರೀತಿಯನ್ನು ಗಮನಿಸಿದಾಗ ವ್ಯಾಕರಣ ವಿಚಾರಗಳು, ಪರಿಕಲ್ಪನೆಗಳು, ಪರಿಬಾಶೆಗಳು ಕನ್ನಡಕ್ಕೆ ಅದಾಗಲೆ ಬಹುಸರಳವಾಗಿ ಒಗ್ಗಿಕೊಂಡಿರುವಂತೆ ಕಾಣಿಸುತ್ತದೆ. ಅಂದರೆ ಕನ್ನಡಕ್ಕೆ ವ್ಯಾಕರಣ ಚರ್ಚೆ ಅದಾಗಲೆ ಹಳೆಯ ವಿಶಯವಾಗಿದ್ದಿತು. ಕವಿರಾಜಮಾರ್ಗದ ಹೊರತಾಗಿ ಬೇರೆ ಹಲವರು ವ್ಯಾಕರಣದ ಕೆಲಸ ಮಾಡಿರುವ ಸಾದ್ಯತೆಯನ್ನು ವಿದ್ವಾಂಸರು ಮಾತನಾಡಿದ್ದಾರೆ. ಅದರಲ್ಲಿ ಮುಕ್ಯವೆನಿಸುವ ಎರಡನ್ನು ಮಾತ್ರ ಇಲ್ಲಿ ಉಲ್ಲೇಕಿಸಿದೆ. ಕಾವ್ಯದಲ್ಲಿ ಜನ್ನನೂ ವ್ಯಾಕರಣದಲ್ಲಿ ರನ್ನನೂ ಎಂಬ ಜನ್ನನ ಮಾತಿನಂತೆ ರನ್ನನೆಂಬ ಒಬ್ಬ ವಯ್ಯಾಕರಣಿ ಇದ್ದಿರಬೇಕು. ಸದ್ಯ ಅವನು ಗದಾಯುದ್ದದ ಕವಿ ಎಂದೆ ಬಾವಿಸಿದೆ. ಅವನ ಹೆಸರಿನಲ್ಲೊಂದು ಸಣ್ಣ ರನ್ನಕಂದ ಹೆಸರಿನ ನಿಗಂಟೊಂದು ದೊರೆತಿದೆ. ಶಬ್ದಮಣಿದರ್ಪಣವನ್ನು ಗಮನಿಸಿದಾಗ ಅಲ್ಲಲ್ಲಿ ಕೆಲವು ಸಣ್ಣ ಸಣ್ಣ ನಿಗಂಟುಗಳು ಅದರೊಳಗೆ ಇವೆ. ರನ್ನನೆಂಬುವನೊಬ್ಬನ ವ್ಯಾಕರಣದೊಳಗಿನ ಅಂತದೆ ಒಂದು ಸಣ್ಣ ನಿಗಂಟು ಈ ರನ್ನಕಂದವಾಗಿದ್ದರೂ ಆಗಿರಬಹುದು. ಹೆಚ್ಚಿನ ಅದ್ಯಯನಗಳು ಅವಶ್ಯ. ಇವುಗಳ ಹೊರತಾಗಿ ನಯಸೇನ ಎಂಬ ಹೆಸರೊಂದು ದೊರೆಯುತ್ತದೆ. ನಾಗವರ್ಮ ಶಬ್ದಿಗೆ ದೀರ್ಗ ಪ್ರತ್ಯಯವಿದೆ ಅಂದರೆ –ಈ ಎಂಬ ಪ್ರತ್ಯಯ ಇದೆ ಎಂಬುದನ್ನು ಹೇಳುವಾಗ ದೀರ್ಘೋಕ್ತಿರ್ನಯಸೇನಸ್ಯ ಎಂಬ ಮಾತನ್ನು ಹೇಳುತ್ತಾನೆ. ಅಲ್ಲಿಗೆ ನಯಸೇನ ಎಂಬುವವನು ಶಬ್ದಿಗೆ ದೀರ್ಗವನ್ನು ವಿವರಿಸಿರುವುದು ತಿಳಿಯುತ್ತದೆ. ಅಂದರೆ ಅವನು ವ್ಯಾಕರಣವೊಂದನ್ನು ಬರೆದಿರುವ ಸಾದ್ಯತೆ ಹೆಚ್ಚು ಸ್ಪಶ್ಟವಾಗುತ್ತದೆ. ಆನಂತರ ಹಲವು ಬೆಳವಣಿಗೆಗಳಲ್ಲಿ ಇದು ಹಿನ್ನೆಲೆಗೆ ಸರಿದಿರುವಂತಿದೆ. ಬಹುಶಾ ನಾನಿದನ್ನು ಒಂದು ಕತೆಯ ರೂಪಕದಂತೆ ಹೀಗೆ ಕೊಡಬಹುದು. ನಯಸೇನನು ಕನ್ನಡದಲ್ಲಿ ಕನ್ನಡ ವ್ಯಾಕರಣವನ್ನು ಬರೆದಿರಬೇಕು. ಅದನ್ನು ಅದ್ಯಯನಕ್ಕೆ ಅಂದಿನ ಸಮಾಜ ಬಳಸುತ್ತಿದ್ದಿರಬೇಕು. ಆನಂತರದ ಕೇಶಿರಾಜನು ನಯಸೇನನಿಗಿಂತಲೂ ಹೆಚ್ಚು ಸಮರ್ಪಕ ಎಂದೆನಿಸದ ವ್ಯಾಕರಣವನ್ನು ಬರೆದಿರಬೇಕು. ಇದರಿಂದ ಶಬ್ದಮಣಿದರ್ಪಣ ಕನ್ನಡ ವ್ಯಾಕರಣ ಅದ್ಯಯನಕ್ಕೆ

ಹೆಚ್ಚು ಆದಾರವಾಯಿತು. ಹೀಗೆ ನಿದಾನಕ್ಕೆ ಹಿಂದೆ ಸರಿದ ನಯಸೇನನ ವ್ಯಾಕರಣ ಕಾಲಕ್ರಮೇಣ ಇಲ್ಲವಾಗಿರುವಂತಿದೆ. ಅದನ್ನು ಅಧ್ಯಯನ ಮಾಡುವುದು ನಿಂತಮೇಲೆ ಸಹಜವಾಗಿ ಅದನ್ನು ಪ್ರತಿ ಮಾಡುವ ಅವಶ್ಯಕತೆ ಇಲ್ಲವಾಯಿತು. ಹೀಗೆ ಇದನ್ನು ಹೇಳಬಹುದು. ಶಬ್ದಮಣಿದರ್ಪಣದೊಳಗೆ ಹೆಸರನ್ನು ಹೇಳದೆ ಕೆಲರ್ (೩.೪೫, ೬.೩೪, ೮.೪೪), ಕೆಲಂಬರ್ (೬.೧೩), ಅರೆಬರ್ (೨.೪೭) ಮೊದಲಾದ ಪದಗಳಿಂದ ಕೇಶಿರಾಜ ಗುರುತಿಸುವ ವ್ಯಾಕರಣ ವಿದ್ವಾಂಸರಲ್ಲಿ ನಯಸೇನನೂ ಸೇರಿರಬಹುದು ಎಂದೆನಿಸುತ್ತಿದೆ. ವಾಸ್ತವದಲ್ಲಿ ಈ ಬಗೆಯ ಉಲ್ಲೇಕಗಳು ಬಹು ಮಹತ್ವವನ್ನು ಪಡೆದುಕೊಳ್ಳುತ್ತವೆ. ಕೇಶಿರಾಜ ಈ ಪದಗಳನ್ನು ಯಾವ ಯಾವ ಸಂದರ್ಭದಲ್ಲಿ ಬಳಸುತ್ತಾನೆ ಎಂಬುದನ್ನು ಗಮನಿಸಿದಾಗ ಅವನ ಕಾಲಕ್ಕೆ ವ್ಯಾಕರಣ ಚರ್ಚೆ ಕನ್ನಡದೊಳಗೆ ಬಹುದೊಡ್ಡ ಪ್ರಮಾಣದಲ್ಲಿ ನಡೆದಿದ್ದಿತು ಎಂದೆನಿಸದೆ ಇರದು. ಒಂದು ವ್ಯಾಕರಣ ವಿಚಾರವನ್ನು ವಿವರಿಸುವಾಗ ತನ್ನ ವಿವರಣೆಗೆ ಸಹಮತ ಹೊಂದಿರುವವರನ್ನು, ಪರಮತ ಹೊಂದಿರುವವರನ್ನು ಅವನು ನಿರ್ದೇಶಿಸುತ್ತಿರುವುದನ್ನು ಕಾಣಬಹುದು. ಅದಲ್ಲದೆ ಒಂದು ವಿಚಾರದ ಮೇಲೆ ಹಲವು ವಿದ್ವಾಂಸರು ಬಿನ್ನಮತವನ್ನು ಹೊಂದಿರುವರು ಎಂಬ ಅರ್ಥದಲ್ಲಿಯೂ ಈ ಮಾತುಗಳನ್ನು ಕೇಶಿರಾಜ ಬಳಸುತ್ತಾನೆ. ಕೆಲವರು ಒಂದು ವಾದವನ್ನು ಮತ್ತು ಇನ್ನು ಕೆಲವರು ಮತ್ತೊಂದು ವಾದವನ್ನು ಹಿಡಿದಿರುವಂತೆ ತೋರುತ್ತದೆ. ಹಾಗಾದರೆ, ಸಹಜವಾಗಿ ಕನ್ನಡ ವ್ಯಾಕರಣ ಚರ್ಚೆ ದೊಡ್ಡ ಪ್ರಮಾಣದಲ್ಲಿ ಇದ್ದಿತು, ಅದರೊಳಗೆ ಬಿನ್ನ ಪರಂಪರೆಗಳು ಇಲ್ಲವೆ ನಿಲುವುಗಳು ಇದ್ದವು ಎಂಬುದನ್ನು ಈ ಮೂಲಕ ಗಮನಿಸಬಹುದು. (ಇದನ್ನು ನಾನು ನನ್ನ ಒಂದು ಅಪ್ರಕಟಿತ ಬರವಣಿಗೆಯೊಂದರಲ್ಲಿ ತುಸು ವಿಶದವಾಗಿ ಚರ್ಚಿಸಿದ್ದೇನೆ).

ಹನ್ನೊಂದನೆಯ ಶತಮಾನದ ಮೊದಮೊದಲಲ್ಲಿ ಬಂದ ಕಾವ್ಯಾವಲೋಕನ (೧೯೬೭) ಎಂಬ ಇನ್ನೊಂದು ಲಾಕ್ಷಣಿಕ ಗ್ರಂತದಲ್ಲಿ ಮೊದಲ ಅಧ್ಯಾಯ ಶಬ್ದಸ್ಮೃತಿ ಎನ್ನುವಂತದ್ದು. ಇದು ಇಡಿಯಾಗಿ ವ್ಯಾಕರಣ ವಿಚಾರ ಚರ್ಚೆಗೆ ಮೀಸಲಾಗಿದೆ. ಇದರ ರಚನೆಯು ಹೆಚ್ಚು ಕಡಿಮೆ ಒಂದು ಸ್ವಂತ ಕ್ರುತಿಯಂತಿದ್ದು ಇದನ್ನು ಕಾವ್ಯಾವಲೋಕನದಿಂದ ತೆಗೆದರೆ ಅದೊಂದು ಪುಟ್ಟ ಸ್ವತಂತ್ರ ವ್ಯಾಕರಣ ಕ್ರುತಿಯಾಗುತ್ತದೆ (೧೯೮೭). ಕಾವ್ಯಾವಲೋಕನವನ್ನು ಬರೆದ ನಾಗವರ್ಮನೆ ಬರೆದಿರುವ ಎಂದು ಹೇಳಲಾಗುವ ಕರ್ನಾಟಕ ಬಾಶಾಬೂಶಣಂ (೧೮೮೦) ಎನ್ನುವುದು ಇದುವರೆಗೆ ದೊರೆತ ಅತಿ ಹಳೆಯ ಸ್ವತಂತ್ರ ಕನ್ನಡ ವ್ಯಾಕರಣ. ಇದು ಸಂಸ್ಕ್ರುತ ಬಾಶೆಯಲ್ಲಿದೆ.

ಹದಿಮೂರನೆಯ ಶತಮಾನಕ್ಕೆ ಸೇರುವ ಕೇಶಿರಾಜನು ಶಬ್ದಮಣಿದರ್ಪಣವನ್ನು ಬರೆಯುತ್ತಾನೆ. ಇದು ಕನ್ನಡದಲ್ಲಿ ದೊರೆತಿರುವ ಅತಿ ಹಳೆಯ ಕನ್ನಡ ವ್ಯಾಕರಣ ಗ್ರಂತ. ಇದು ಅತಿ ಹೆಚ್ಚು ಜನಪ್ರಿಯತೆಯನ್ನು ಕನ್ನಡ ಜಗತ್ತಿನೊಳಗೆ ಪಡೆದುಕೊಂಡಿದ್ದಿತು. ಇದರಿಂದಾಗಿ ಶಬ್ದಮಣಿದರ್ಪಣದ ಮೇಲೆ ಅತಿ ಹೆಚ್ಚು ವ್ಯಾಕ್ಯಾನಗಳು ಬಂದಿವೆ, ಅದರಂತೆ ಅತಿ ಹೆಚ್ಚು ಹಸ್ತಪ್ರತಿಗಳೂ ದೊರಕಿವೆ. ಕನ್ನಡ ವ್ಯಾಕರಣ ಅಧ್ಯಯನ ಪರಂಪರೆಯನ್ನು ವ್ಯಾಪಕವಾಗಿ ಶಬ್ದಮಣಿದರ್ಪಣ ಪ್ರಬಾವಿಸಿದ್ದಿತು. ಅಚ್ಚರಿಯ ವಿಶಯವೆಂದರೆ ಇಂದಿಗೂ ಅದರ ಪ್ರಬಾವ ಉಳಿದಿರುವುದು.

ಆನಂತರ ಹದಿನೇಳನೆ ಶತಮಾನದ ಮೊದಮೊದಲಲ್ಲಿ ಬಟ್ಟಾಕಳಂಕ ಎನ್ನುವವನು ಶಬ್ದಾನುಶಾಸನ ಎಂಬ ಅತ್ಯಂತ ವಿಸ್ತಾರವಾದ ಮತ್ತು ಹೆಚ್ಚು ಸಿದ್ದಾಂತಿಕವಾದ ಕನ್ನಡ ವ್ಯಾಕರಣ ಗ್ರಂತವನ್ನು ಸಂಸ್ಕ್ರುತದಲ್ಲಿ ಬರೆಯುತ್ತಾನೆ. ಇದರಲ್ಲಿ ಹೆಚ್ಚು ಸಿದ್ದಾಂತಿಕ ವಿಚಾರಗಳನ್ನು ವಿಶದವಾಗಿ ಕೊಡುವುದನ್ನು ಕಾಣಬಹುದು.

೩. ಈ ಒಟ್ಟು ಕನ್ನಡ ವ್ಯಾಕರಣ ಪರಂಪರೆಯು ಪ್ರಾಚೀನ ಕಾಲದಲ್ಲಿ ಹೆಚ್ಚು ಪ್ರಬಾವಿಯಾದ ಸಂಸ್ಕೃತ ವ್ಯಾಕರಣದ ಪರಂಪರೆಯಲ್ಲಿ ಬರುತ್ತದೆ. ಇಡಿಯಾಗಿ ಮೂರು ಸ್ವತಂತ್ರ ವ್ಯಾಕರಣ ಗ್ರಂತಗಳು ಮತ್ತು ಇವುಗಳ ಜೊತೆಗೆ ಶಬ್ದಸ್ಮೃತಿ ಇವಿಶ್ಟು ಕನ್ನಡ ವ್ಯಾಕರಣಗಳು. ಈ ಮೂರೂ ವ್ಯಾಕರಣಗಳ ಮೇಲೆ ಟೀಕೆಗಳು ಬಂದಿವೆ. ಆದರೆ ಹೆಚ್ಚು ಟೀಕೆಗಳು ಶಬ್ದಮಣಿದರ್ಪಣದ ಮೇಲೆ ಬಂದಿವೆ. ಇಡಿಯಾಗಿ ಕನ್ನಡ ವ್ಯಾಕರಣ ಪರಂಪರೆಯನ್ನು ಪರಿಚಯಿಸುವ, ವಿಮರ್ಶಿಸುವ ಹಲವಾರು ಗ್ರಂತಗಳು ಬಂದಿವೆ; ಪ್ರಾಚೀನ ಕನ್ನಡ ವ್ಯಾಕರಣಗಳ ತವ್ಲನಿಕ ಅದ್ಯಯನ– ಎಂ.ವಿ. ಸೀತಾರಾಮಯ್ಯ (೧೯೮೮), ಪ್ರಾಚೀನ ಕನ್ನಡ ವ್ಯಾಕರಣಗಳು–ದೊಡ್ಡಸ್ವಾಮಿ (೧೯೮೦), ಕನ್ನಡ ವ್ಯಾಕರಣ ಪರಂಪರೆ ಮೇಲೆ ಸಂಸ್ಕೃತದ ಪ್ರಬಾವ – ಪಿ. ಶ್ರೀಕ್ರಿಶ್ಣಬಟ್ (೧೯೮೯), History of Grammatical Tradition in Kannada - ಜೆ.ಎಸ್. ಕುಳ್ಳಿ (೧೯೯೧), ಪ್ರಾಚೀನ ಕನ್ನಡ ವ್ಯಾಕರಣಗಳು (೨೦೧೪)–ಪಿ. ಶ್ರೀಕ್ರಿಶ್ಣಬಟ್, The Kannada Grammatical Tradition - ಸಂ. ಬಸವರಾಜ ಕೋಡಗುಂಟಿ (೨೦೧೭ಆ). ಅಲ್ಲದೆ ಒಂದೊಂದು ವ್ಯಾಕರಣ ಕ್ರುತಿಯ ಮೇಲೆ ವಿಶೇಶವಾದ ಅದ್ಯಯನಗಳೂ ಬಂದಿವೆ. ಸಹಜವಾಗಿ ಶಬ್ದಮಣಿದರ್ಪಣದ ಮೇಲೆ ಹೆಚ್ಚಿನ ಅದ್ಯಯನಗಳು ಬಂದಿವೆ. ಆಲೋಕ – ಎಚ್.ಎಸ್. ಬಿಳಿಗಿರಿ (೧೯೬೯), ಶಬ್ದಮಣಿದರ್ಪಣ ವಿಳಾಸಂ–ವಿ. ಶಿವಾನಂದ (೧೯೭೭), Keshiraja's Shabdamanidarpana: A Linguistic Analysis - ಜೆ.ಎಸ್. ಕುಳ್ಳಿ (೧೯೭೬), ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ–ಮಹ್ಮದ್ ಬಾಶಾ ಗೂಳ್ಯಂ (೨೦೧೧), ಕರ್ನಾಟಕ ಶಬ್ದಾನುಶಾಸನಂ–ಉಪ್ಪಂಗಳ ರಾಮಬಟ್ಟ (೨೦೧೫) ಮೊದಲಾದವನ್ನು ಇಲ್ಲಿ ಹೆಸರಿಸಬಹುದು. ಆದರೆ ಇನ್ನೂ ಹಲವಾರು ಪುಸ್ತಕಗಳಲ್ಲಿ ಮತ್ತು ಸುಮಾರು ಎರಡು ನೂರಕ್ಕೂ ಹೆಚ್ಚಿನ ಲೇಕನಗಳಲ್ಲಿ ಹಳಗನ್ನಡದ ಈ ವ್ಯಾಕರಣ ಗ್ರಂತಗಳನ್ನು ಪರಿಚಯಿಸುವ, ವಿಮರ್ಶಿಸುವ ಹಲವಾರು ಪ್ರಯತ್ನಗಳು ಬಂದಿವೆ. ಹಾಗಾಗಿ ಇಲ್ಲಿ ಪಾರಂಪರಿಕ ವ್ಯಾಕರಣಗಳನ್ನು ಪರಿಚಯಿಸುವ ಪ್ರಯತ್ನವನ್ನು ಮಾಡುತ್ತಿಲ್ಲ. ಬದಲಿಗೆ, ತುಸು ಬಿನ್ನವಾದ, ಇದುವರೆಗೆ ಗಮನ ಹರಿಸಿಲ್ಲದ, ಇಲ್ಲವೆ ತುಸು ಬಿನ್ನವಾಗಿ ನೋಡಬೇಕಿರುವ ಕೆಲವು ವಿಚಾರಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡಿದೆ.

ಆದುನಿಕಪೂರ್ವ ಕಾಲದಲ್ಲಿ, ಬ್ರಿಟೀಶ್ ಕಾಲದಲ್ಲಿ ಹಲವಾರು ಕನ್ನಡ ವ್ಯಾಕರಣಗಳು ಬರುತ್ತವೆ. ಇವುಗಳನ್ನು ಮುಕ್ಯವಾಗಿ ಕಲಿಕಾ ವ್ಯಾಕರಣಗಳು ಮತ್ತು ಶಾಲಾ ವ್ಯಾಕರಣಗಳು ಎಂದು ಕರೆಯಬಹುದು. ನೂರರಶ್ಟು ಸಂಕೆಯಲ್ಲಿ ಬಂದಿರಬಹುದಾದ ಈ ವ್ಯಾಕರಣಗಳು ಹೆಚ್ಚು ಪಾರಂಪರಿಕ ವ್ಯಾಕರಣ ಪದ್ದತಿಯನ್ನು ಅನುಸರಿಸಿದರೂ ಲ್ಯಾಟಿನ್ ವ್ಯಾಕರಣ ಪರಂಪರೆಯ ಪ್ರಬಾವವನ್ನೂ ಪರಿಗಣಿಸುವಶ್ಟು ತೋರಿಸುತ್ತವೆ. ಹಾಗಾಗಿ ಪಾರಿಬಾಶಿಕಗಳ ಬಳಕೆ, ಪರಿಕಲ್ಪನೆಗಳು, ವಿಶಯಗಳ ಹೊಂದಿಕೆ ಮೊದಲಾದವುಗಳಲ್ಲಿ ತುಸು ಬಿನ್ನತೆಯನ್ನು ಕಾಣಬಹುದು. ವಿಲಿಯಂ ಕೇರಿ (೧೮೧೭), ಜಾನ್ ಮೆಕೆರಲ್ (೧೮೨೦), ಶ್ರೀರಂಗಪಟ್ಟಣದ ಕ್ರಿಶ್ಣಮಾಚಾರ್ಯ (೧೮೩೦), ಪರ್ಡಿನಾಂಡ್ ಕಿಟೆಲ್ (೧೯೦೩), ಪಂಜೆ ಮಂಗೇಶರಾವ್ (೧೯೦೫), ಬಿ. ಮಲ್ಲಪ್ಪ (೧೯೨೪), ತೀ.ನಂ. ಶ್ರೀಕಂಟಯ್ಯ (೧೯೪೨), ಮ.ಪ್ರ. ಪೂಜಾರ (೧೯೫೨) ಮೊದಲಾದವನ್ನು ಇಲ್ಲಿ ಉಲ್ಲೇಕಿಸಬಹುದು. ಈ ಕಾಲದಲ್ಲಿ ಎಶ್ಟು ವ್ಯಾಕರಣಗಳು ಬಂದಿವೆ ಎಂಬುದು ಸ್ಪಶ್ಟವಾಗಿ ಗೊತ್ತಿಲ್ಲ. ಕನ್ನಡ, ಇಂಗ್ಲೀಶು ಮತ್ತು ಇತರ ಯುರೋಪಿನ ಬಾಶೆಗಳಲ್ಲಿ ಈ ವ್ಯಾಕರಣಗಳು ಬಂದಿವೆ.

೪. ಕನ್ನಡದಲ್ಲಿ ಬಾಶೆಯ ಅದ್ಯಯನ ಯಾವಾಗ ಮೊದಲಾಗಿರಬಹುದು ಎಂಬ ವಿಚಾರವನ್ನು ಇಲ್ಲಿ ಮೊದಲಿಗೆ ಚರ್ಚೆಗೆ ಎತ್ತಿಕೊಳ್ಳೋಣ. ಬಾರತದಾಗ ಬಹು ಹಿಂದೆಯೆ ಬಾಶೆಯ ಅದ್ಯಯನ ಅತ್ಯಂತ ವಯಿಗ್ನಾನಿಕ ಸ್ವರೂಪವನ್ನು ಪಡೆದುಕೊಂಡಿದ್ದಿತು. ಅದರಲ್ಲಿಯೂ ಶಿಕ್ಶಾ ಅಂದರೆ ದ್ವನಿವಿಗ್ನಾನ ಅತಿ ಹೆಚ್ಚು ಪ್ರಚಲಿತದಲ್ಲಿದ್ದಿತು. ಒಂದು ಬಾಶೆಯಲ್ಲಿ ಬೆಳೆದ ಅಂತಾ ವಿಗ್ನಾನ ಸಹಜವಾಗಿ ಸುತ್ತಲಿನ ಬಾಶೆಗಳ ವಿದ್ವತ್ ಚಟುವಟಿಕೆಗಳನ್ನು ಪ್ರಬಾವಿಸದೆ ಇರದು. ಹಾಗೆಯೆ ಕನ್ನಡದ ವಿದ್ವತ್ತನ್ನು ಇದು ಪ್ರಬಾವಿಸಿದೆ.

ಸಂಸ್ಕೃತದಾಗ ಕಾವ್ಯಾದಿಗಳ ಸಂಯೋಜನೆಗೆ ಉದ್ದನೆಯ ಇತಿಹಾಸವಿದೆ. ತಮಿಳಿಗೂ ಹೀಗೆಯೆ ಉದ್ದವಾದ ಇತಿಹಾಸವನ್ನು ತೋರಿಸಿದೆ. ಹರಪ್ಪಾ ನಾಗರಿಕತೆಯಲ್ಲಿ ಲಿಪಿಗಳು ಸಿಕ್ಕಿವೆಯಾದರೂ ಅವುಗಳನ್ನು ಓದಲಾಗಿಲ್ಲ ಮತ್ತು ಆನಂತರದ ಬಾರತೀಯ ಲಿಪಿ ಪರಂಪರೆಯ ಜೊತೆಗೆ ಕೊಂಡಿಸಲು ಸಾದ್ಯವಾಗಿಲ್ಲ. ಹಾಗಾಗಿ ಅಶೋಕನ ಶಾಸನಗಳ ಲಿಪಿ ಬಾರತದ ಮೊದಲ ತಿಳಿದ ಲಿಪಿ. ಹೀಗೆ ಮೊದಲಿಗೆ ಲಿಪಿಯನ್ನು ಸಂಯೋಜಿಸಿದ್ದು ಬವುದ್ದ ಪರಂಪರೆ ಹಿನ್ನೆಲೆಯ ಪಾಲಿಗೆ. ಅಶೋಕನ ಕಾಲದಲ್ಲಿ ಬರಹಗಳು ದೊರೆಯುತ್ತವೆ. ಅವನ ಕಾಲದಲ್ಲಿಯೆ ಲಿಪಿ ಹೊಂದಿಕೆ ಕೆಲಸವೂ ನಡೆದಿದೆ ಎಂಬುದು ತಿಳುವಳಿಕೆ. ಪಾಲಿಗೆ ಲಿಪಿಯನ್ನು ಹೊಂದಿಸುವುದಕ್ಕೆ ಬಳಸಿದ್ದು ಸಂಸ್ಕೃತ ದ್ವನಿವಿಗ್ನಾನವನ್ನು. ಹೀಗಾಗಿ ಬಾರತೀಯ ಲಿಪಿ ಸಂಸ್ಕೃತದ ದ್ವನಿಗನುಗುಣವಾಗಿ ಮೊದಲಿಗೆ ಸಂಯೋಜನೆಗೆ ಒಳಗಾಯಿತು. ಅಶೋಕನು ದಕ್ಕನದಲ್ಲಿ ವಿಶೇಶ ಆಸ್ತೆಯುಳ್ಳವನಾಗಿದ್ದನು ಎಂಬ ವಿವರಣೆಗಳು ಇವೆ. ಅಶೋಕನ ಕಾಲದ ಹೆಚ್ಚಿನ ಬರವಣಿಗೆಗಳು ವಿಶೇಶವಾಗಿ ಕನ್ನಡ ಮಾತನಾಡುವ ಪ್ರದೇಶದಲ್ಲಿ ಕಂಡುಬರುತ್ತದೆ. ಕನ್ನಡ ಲಿಪಿಯ ಬೆಳವಣಿಗೆಗೆ ಈ ಎರಡು ಅಂಶಗಳು ಪರಸ್ಪರ ಕೋದ ರೀತಿಯಲ್ಲಿ ಪ್ರಬಾವ ಬೀರಿವೆ. ಕನ್ನಡ ಮಾತನಾಡುವ ಪ್ರದೇಶದಲ್ಲಿ ನಡೆದ ಈ ದೊಡ್ಡ ಪ್ರಮಾಣದ ಲಿಪಿ ವ್ಯವಹಾರ ಸಹಜವಾಗಿಯೆ ಈ ಪ್ರದೇಶದ ಬಾಶೆಯ ಮತ್ತು ಲಿಪಿಯ ಬೆಳವಣಿಗೆಗೆ ಪೂರಕವಾಗಿದೆ.

ಕನ್ನಡಕ್ಕೆ ಲಿಪಿಯನ್ನು ಹೊಂದಿಸುವ ಕೆಲಸ ಸುಮಾರು ಕ್ರಿಸ್ತಶಕದ ಎಡಬಲದಲ್ಲಿ ಆಗಿರುವ ಸಾದ್ಯತೆ ಇದೆ. ಕನ್ನಡಕ್ಕೆ ಅಯ್ದನೆಯ ಶತಮಾನದಿಂದ ಬರಹಗಳು ದೊರಕುತ್ತಿವೆ. ಕನ್ನಡ ಲಿಪಿಯ ಬೆಳವಣಿಗೆಯನ್ನು ಗಮನಿಸಿದಾಗ ಹಲ್ಮಿಡಿ ಶಾಸನಕ್ಕಿಂತ ಕೆಲವು ಶತಮಾನಗಳ ಹಿಂದೆ ಕನ್ನಡಕ್ಕೆ ಲಿಪಿ ಸಂಯೋಜನೆ ಕೆಲಸ ಆಗಿದೆ ಎಂದು ತಿಳಿಯುತ್ತದೆ. ಕನ್ನಡ ಲಿಪಿಯಲ್ಲಿ ಮೊದಲಿಗೆ ಇದ್ದಿಲ್ಲದ ಸೊನ್ನೆಯ ಬೆಳವಣಿಗೆಯ ಕ್ರಮವನ್ನು ನಾನು ಬೇರೆ ಕಡೆ ತೋರಿಸಿದ್ದೇನೆ (೨೦೧೭). ಹೀಗೆ ಕನ್ನಡ ಲಿಪಿಯ ಹೊಂದಿಕೆ ಕ್ರಿಸ್ತಶಕದ ಎಡಬಲ ಎಂದಾದರೆ ಕನ್ನಡ ದ್ವನಿವಿಗ್ನಾನದ ಇತಿಹಾಸ ಆ ಕಾಲಕ್ಕೆ ಹೋಗುತ್ತದೆ.

ದ್ವನಿವಿಗ್ನಾನದ ಅಗಾದ ಬೆಳವಣಿಗೆಯ ಅದ್ಯಯನದಿಂದ ಸಹಜವಾಗಿಯೆ ಈ ಬಾಗದ ವಿದ್ವಾಂಸರು ಈ ಬಾಗದ ಬಾಶೆಯ ದ್ವನಿಗಳನ್ನೂ ಅಶ್ಟು ಸೂಕ್ಮವಾಗಿ ನೋಡುವ ಪ್ರಯತ್ನ ಮಾಡಿರುತ್ತಾರೆ. ಸಂಸ್ಕೃತ ದ್ವನಿವಿಗ್ನಾನದ ಆದಾರದ ಮೇಲೆ ಲಿಪಿಯನ್ನು ಬೆಳೆಸಲಾಗಿದ್ದಿತು ಎಂಬುದನ್ನು ಹೇಳಿದೆ. ಕನ್ನಡ ದ್ವನಿವಿಗ್ನಾನ ಅದಕ್ಕಿಂತ ಬಿನ್ನವಾಗಿದೆ. ಈ ಬಿನ್ನತೆಯನ್ನು ಸದ್ಯ ದೊರೆಯುವ ಹಳೆಯ ವ್ಯಾಕರಣಗಳಲ್ಲಿ ಮಾಡಲಾಗಿದೆ. ಈ ಬಿನ್ನತೆಯನ್ನು ಗಮನಿಸುವುದಕ್ಕೆ ಸಾದ್ಯವಾಗಿರುವುದೆ ಕನ್ನಡ ದ್ವನಿವಿಗ್ನಾನ ಬೆಳೆದಿದ್ದಿತು ಎಂಬುದಕ್ಕೆ ಆದಾರವಾಗುತ್ತದೆ. ಕನ್ನಡ ಸಂಸ್ಕೃತಕ್ಕೆ ಬಿನ್ನವಾದ ರಚನೆಯನ್ನು ಹೊಂದಿರುವ ದ್ರಾವಿಡ ಬಾಶೆ. ದ್ರಾವಿಡದಾಗ ಸ್ವರದ ಉದ್ದ ಸ್ಪಶ್ಟವಾಗಿ ದ್ವನಿಮಾತ್ಮಕ, ಸಂಸ್ಕೃತದಾಗ ಇದು ಅ, ಇ, ಉ ದ್ವನಿಗಳ ಸಂದರ್ಬದಲ್ಲಿ ಮಾತ್ರ

ವಾಸ್ತವ, ಎ ಮತ್ತು ಒ ದ್ವನಿಗಳ ಸಂದರ್ಭದಲ್ಲಿ ಉದ್ದ ದ್ವನಿಮಾತ್ಮಕ ಅಲ್ಲ. ಬೆಂಗಾಲಿ ಮೊದಲಾದ ಇಂದಿನ ಬಾಶೆಗಳಲ್ಲಿ ಇಂದಿಗೂ ಇದನ್ನು ಕಾಣಬಹುದು. ಹಾಗಾಗಿ ಪಾಲಿ ಬಾಶೆಗೆ ಬೆಳೆಸಿದ ಲಿಪಿಯಲ್ಲಿ ಎ ಮತ್ತು ಒ ಇವುಗಳ ಉದ್ದಕ್ಕರಗಳಿಗೆ ಲಿಪಿ ಇರಲಿಲ್ಲ. ಅದರಂತೆ ದ್ರಾವಿಡಕ್ಕೆ ವಿಶಿಶ್ಟವಾದ ೪್, ೫್ ಮತ್ತು ೬್ ದ್ವನಿಗಳಿಗೂ ಅದರಲ್ಲಿ ಲಿಪಿ ಇರಲಿಲ್ಲ. ಹೀಗೆ ದೇಶಿಯವೆಂದು ಕರೆಯಲಾಗಿರುವ ಏ, ಓ, ೪್, ೬್ ಮತ್ತು ೫್ ಇವುಗಳಿಗೆ ಲಿಪಿ ಇರಲಿಲ್ಲ. ಆದರೆ ಕನ್ನಡದ ದೊರೆಯುವ ಅತಿ ಹಳೆಯ ಬರಹದ ದಾಕಲೆಗಳಲ್ಲಿ ಈ ದ್ವನಿಗಳಿಗೆ ವಿಶೇಶವಾಗಿ ವ್ಯಂಜನಗಳಿಗೆ ಬಿನ್ನ ಲಿಪಿಗಳು ಬಳಕೆಯಾಗಿವೆ. ಅಂದರೆ ಅಂದಿಗೆ ಕನ್ನಡಕ್ಕೆ ಲಿಪಿಯನ್ನು ಸಂಯೋಜಿಸುವಾಗ ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಅವುಗಳಿಗೆ ಪ್ರತ್ಯೇಕವಾದ ಲಿಪಿಗಳನ್ನು ಸಂಯೋಜಿಸಿದೆ. ಈ ಬಿನ್ನ ದ್ವನಿಗಳ ಅರಿವೆ ಕನ್ನಡ ದ್ವನಿವಿಗ್ನಾನ.

ಇದಲ್ಲದೆ ಕನ್ನಡದಾಗ ಮೊದಲಿನಿಂದಲೂ ಮಹಾಪ್ರಾಣ ದ್ವನಿಗಳ ಬಗೆಗೆ ಇರುವ ವಿವಾದವೂ ಕನ್ನಡ ದ್ವನಿವಿಗ್ನಾನದ ಚರ್ಚೆಯೆ ಆಗಿದೆ. ನಾಗವರ್ಮ ಸ್ವಶ್ವವಾಗಿ ಮಹಾಪ್ರಾಣಗಳು ಇಲ್ಲ ಎಂಬ ದ್ವನಿಯಲ್ಲಿಯೆ ಮಾತನಾಡುತ್ತಾನೆ (ಉಪ್ಪಂಗಳ. ೨೦೧೫). ವಾಸ್ತವದಲ್ಲಿ ಕೇಶಿರಾಜ ಕೂಡ ಮಹಾಪ್ರಾಣಗಳು ಕನ್ನಡದಾಗ ಇಲ್ಲ ಎಂದು ಹೇಳುತ್ತಾನೆ (ಕೋಡಗುಂಟಿ. ೨೦೧೭ಅ). ಕೇವಲ ಅನುಕರಣೆ ಮತ್ತು ಅಂಕಿಗಳಲ್ಲಿ ಮಾತ್ರವೆ ಮಹಾಪ್ರಾಣಗಳನ್ನು ವಿಬುದರ್ ಗುರುತಿಸುತ್ತಾರೆ ಎಂಬ ಕೇಶಿರಾಜನ ಹೇಳಿಕೆ ಒಂದು ಬಗೆಯ ವ್ಯಂಗ್ಯವೆ ಸರಿ. ಈ ಚರ್ಚೆ ದ್ವನಿವಿಗ್ನಾನದ ಆಳವಾದ ಅರಿವಿನಿಂದ ಮಾತ್ರ ಸಾದ್ಯವಾಗುತ್ತದೆ.

ಹೀಗೆ ಕನ್ನಡ ದ್ವನಿಗಳ ಅದ್ಯಯನ ಕ್ರಿಸ್ತಶಕದ ಎಡಬಲಕ್ಕೆ ಹೋಗುತ್ತದೆ. ಅಂದರೆ ಕನ್ನಡ ಬಾಶೆಯ ಅದ್ಯಯನವೂ ಕ್ರಿಸ್ತಶಕ ಎಡಬಲಕ್ಕೆ ಹೋಗುತ್ತದೆ.

೫. ಬಾರತದಾಗ ಪ್ರಾಚೀನ ಕಾಲದಲ್ಲಿ ಬಾಶೆಯ ಅದ್ಯಯನ ಸೂಕ್ಮತೆ, ವ್ಯಾಪಕತೆ, ಪ್ರಬಾವ, ವಯಿವಿದ್ಯತೆ ಈ ಎಲ್ಲ ಆಯಾಮಗಳಲ್ಲಿಯೂ ತನ್ನ ಉತ್ತುಂಗವನ್ನು ತಲುಪಿದ್ದಿತು. ಇದರಿಂದಾಗಿ ಅದ್ಯಯನದಲ್ಲಿ ಹಲವು ಪರಂಪರೆಗಳು ಬೆಳೆದವು. ಸಹಜವಾಗಿ ಕನ್ನಡ ಬಾಶಾದ್ಯಯನವೂ ಬಾರತೀಯ ಬಾಶಾದ್ಯಯನ ಪರಂಪರೆಯೊಳಗೆ ಬರುತ್ತದೆಯಾದ್ದರಿಂದ ಈ ಪರಂಪರೆಗಳು ಮತ್ತು ಕನ್ನಡ ವ್ಯಾಕರಣಗಳನ್ನು ಎದುರಿಟ್ಟು ನೋಡಬೇಕಿರುವುದು ಅವಶ್ಯವಾಗಿದೆ. ಆದರೆ, ಕನ್ನಡದ ಸಂದರ್ಭದಲ್ಲಿ ಅಂತಾ ದೊಡ್ಡ ಪ್ರಯತ್ನಗಳು ಆಗಿಲ್ಲ.

ಸಾಮಾನ್ಯವಾಗಿ ವ್ಯಾಕರಣ ಗ್ರಂತವನ್ನು ಅದರಲ್ಲಿ ಬಳಸಿರುವ ಪಾರಿಬಾಶಿಕಗಳು, ವಿಶಯಗಳನ್ನು ಹೊಂದಿಸಿರುವ ರೀತಿ, ನಿರೂಪಣಾ ವಿದಾನ ಮೊದಲಾದವನ್ನು ಆದರಿಸಿ ಇಂದು ನಾವು ಆ ವ್ಯಾಕರಣದ ಪರಂಪರೆಯನ್ನು ಗುರುತಿಸುವುದಕ್ಕೆ ಸಾದ್ಯವಾಗುತ್ತದೆ. ೧೮೭೫ರಶ್ಟು ಹಿಂದೆ ಬರ್ನೆಲ್ On the Aindra School of Sanskrit Grammarians ಎಂಬ ಒಂದು ಪುಸ್ತಕವನ್ನು ಮಾಡಿದ್ದಾನೆ. ಇದರಲ್ಲಿ ಅವನು ದಕ್ಶಿಣ ಬಾರತದ ಕನ್ನಡ, ತಮಿಳು ಮೊದಲಾದ ವ್ಯಾಕರಣಗಳು ಅಯಿಂದ್ರ ವ್ಯಾಕರಣ ಪರಂಪರೆಗೆ ಸೇರುತ್ತವೆ ಎಂದು ಹೇಳುತ್ತಾನೆ. ಅದರಲ್ಲಿಯೂ ಶಬ್ದಮಣಿದರ್ಪಣ ಮತ್ತು ತಮಿಳಿನ ತೊಲ್ಕಾಪ್ಪಿಯಂ ವ್ಯಾಕರಣಗಳನ್ನು ಚರ್ಚೆಗೆ ಎತ್ತಿಕೊಂಡು ಶಬ್ದಮಣಿದರ್ಪಣವು ಅಯಿಂದ್ರ ವ್ಯಾಕರಣ ಪರಂಪರೆಯ ಹೆಚ್ಚು ಸೂಕ್ತವಾದ ವ್ಯಾಕರಣ ಎಂದು ಹೇಳುತ್ತಾನೆ. ತೊಲ್ಕಾಪ್ಪಿಯಮ್ಮಿನಲ್ಲಿಯೂ 'ಅಯಿಂದಿರನ್' ಎಂಬ ಹೆಸರು ಬರುತ್ತದೆ. ಅದು ಇಂದ್ರನನ್ನು ಹೇಳುತ್ತದೆ ಎಂದು ಹಲವರು ಹೇಳುತ್ತಾರೆ. ಕುತೂಹಲವೆಂದರೆ ಬರ್ನೆಲ್ಲನ ಈ ಪುಸ್ತಕವನ್ನು ಕನ್ನಡ ಬಾಶಾವಿಗ್ನಾನ ಅಶ್ಟು ಗಂಬೀರವಾಗಿ

ಪರಿಗಣಿಸಿಲ್ಲ. ಆನಂತರ ಈ ನಿಟ್ಟಿನಲ್ಲಿ ಯಾವುದೆ ಚರ್ಚೆಯೂ ಆಗಿಲ್ಲ. ಅಯಿಂದ್ರ ವ್ಯಾಕರಣ ಪರಂಪರೆ ಮುಕ್ಯವಾಗಿ ಜಯ್ನ ಪರಂಪರೆಯಾಗಿದೆ. ಈ ಪರಂಪರೆಯಲ್ಲಿ ಶರ್ವವರ್ಮನ ಪ್ರಾಕ್ರುತದ ಕಾತಂತ್ರ ವ್ಯಾಕರಣ ಹೆಚ್ಚು ಮಹತ್ವದ ಕ್ರುತಿ. ಇದನ್ನು ಬಾಲವ್ಯಾಕರಣ ಎಂದೂ ಕರೆಯಲಾಗುತ್ತದೆ. ಶಾತವಾಹನ ದೊರೆಯ ಮಕ್ಕಳಿಗೆ ಹೇಳುವ ಕಾರಣಕ್ಕೆ ಬಾಲ ವ್ಯಾಕರಣ ಬಂದಿರಬಹುದೆಂಬುದು ಒಂದು ವಿಚಾರ ಇದೆ. ಇನ್ನೊಂದೆಡೆ ಮುರುಗನ್ ಇಲ್ಲವೆ ಶಣ್ಮುಗನಿಗೆ ಇದನ್ನು ತಾಕಿಸಿ ಹೇಳಲಾಗುತ್ತದೆ. ಕಾತಂತ್ರ ವ್ಯಾಕರಣದ ದಟ್ಟವಾದ ಪ್ರಬಾವವನ್ನು ಕನ್ನಡ, ತಮಿಳು ಮೊದಲಾದ ದಕ್ಶಿಣದ ಬಾಶೆಗಳ ವ್ಯಾಕರಣ ಪರಂಪರೆಯಲ್ಲಿ ಗುರುತಿಸಲಾಗುತ್ತದೆ. ಈ ಪರಂಪರೆ ಬಂಗಾಲ, ಟಿಬೆಟಿನಲ್ಲಿಯೂ ಬಳಕೆಯಲ್ಲಿದೆ.

ಶಬ್ದಮಣಿದರ್ಪಣ ಇಲ್ಲವೆ ಇತರ ಪಾರಂಪರಿಕ ಕನ್ನಡ ವ್ಯಾಕರಣಗಳು ಕೇವಲ ಅಯಿಂದ್ರ ಪರಂಪರೆಯನ್ನು ಮಾತ್ರ ಅನುಸರಿಸದೆ ಇತರ ಹಲವು ಪರಂಪರೆಗಳಿಗೂ ರುಣಿಯಾಗಿವೆ. ಬರ್ನೆಲ್ ಗುರುತಿಸುವ ಹಾಗೆ ಕನ್ನಡ ವ್ಯಾಕರಣಗಳು ಹೆಚ್ಚು ಅಯಿಂದ್ರ ಪರಂಪರೆಯ ಲಕ್ಶಣಗಳನ್ನು ತೋರಿಸುತ್ತವೆ ಎನ್ನುವುದು ನಿಜವಾದರೂ, ಅವು ಅದೆ ವೇಳೆಗೆ ಪಾಣಿನಿ ಮತ್ತು ಇತರರಿಂದಲೂ ಹಲವು ಅಂಶಗಳನ್ನು ತೆಗೆದುಕೊಂಡಿರುವುದನ್ನೂ ಕಾಣಬಹುದು. ಪಾರಿಬಾಶಿಕ ಪದಗಳ ಬಳಕೆಯಲ್ಲಿ ಅಲ್ಲಲ್ಲಿ ತುಸು ಸ್ವಾತಂತ್ರವನ್ನೂ ವಹಿಸುತ್ತವೆ. ಉದಾಹರಣೆಗೆ, 'ಯೋಗಾವಾಹ' ಎಂಬ ಪಾರಿಬಾಶಿಕವನ್ನು ಸಂಸ್ಕ್ರುತದಲ್ಲಿ 'ಅಯೋಗವಾಹ' ಎಂದೆ ಬಳಸಿದೆ. ಯಾವ ಆದಾರದ ಮೇಲೆ ಕನ್ನಡದಲ್ಲಿ ಹೀಗೆ ಪಾರಿಬಾಶಿಕಗಳನ್ನು ಬದಲಿಸಿಕೊಂಡಿದ್ದಾರೆ ಎಂಬುದನ್ನು ಗಮನಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹೆಚ್ಚು ಅದ್ಯಯನಗಳ ಅವಶ್ಯಕತೆ ಇದೆ.

೬. ಕನ್ನಡದ ಶುದ್ದಗೆಗಳನ್ನು ಹೇಳುವಾಗ ಕೇಶಿರಾಜನು ಮಾಡುವ ಸರ್ಕಸ್ಸನ್ನು ಹೆಚ್ಚಾನುಹೆಚ್ಚು ವಿದ್ವಾಂಸರು ಮಾತನಾಡುವುದು ಸರಿ. ಅದನ್ನು ಟಿಕೀಸುವುದೂ ಸರಿ. ಸಂಸ್ಕ್ರುತದ ವ್ಯಾಕರಣವನ್ನು ಯತಾವತ್ತಾಗಿ ಅನುಕರಿಸಿದ್ದರ ಪಲವಾಗಿ ಇಂತದೊಂದು ಪ್ರಯತ್ನವನ್ನು ಮಾಡುವ ಅವಶ್ಯಕತೆಯುಂಟಾಯಿತು ಎಂದು ಹೇಳಲಾಗುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಈ ಕಳೆಯುವ, ಕೂಡಿಸುವ ಕೆಲಸವನ್ನು ಮಾಡಿದವನು ಕೇಶಿರಾಜ ಮಾತ್ರವಲ್ಲ. ಇದನ್ನು ಮೊದಲಿಗೆ ಮಾಡಿದವನು ನಾಗವರ್ಮ. ಆದ್ದರಿಂದ ಇದನ್ನು ತುಸು ಬಿನ್ನವಾಗಿ ಇಡಿಯ ಕನ್ನಡ ಪರಂಪರೆ ಮಾಡಿದೆ ಎಂದು ಹೇಳಬಹುದು.

ಪ್ರಾಕ್ರುತದಲ್ಲಿ ಹೇಮಚಂದ್ರ ಎನ್ನುವವನು ಅತ್ಯಂತ ಮಹತ್ವದ ವಯ್ಯಾಕರಣಿ. ಅವನು ಸಿದ್ದ ಹೇಮ ಶಬ್ದಾನುಶಾಸನ ಎಂಬ ಸಂಸ್ಕ್ರುತದ ವ್ಯಾಕರಣವನ್ನು ಬರೆದನು. ಅದರಲ್ಲಿ ಆರು ಅದ್ಯಾಯಗಳನ್ನು ಪ್ರಾಕ್ರುತದ ವಿವರಣೆಗೆ ಮೀಸಲಿರಿಸಿದನು. ಇದು ಪ್ರಾಕ್ರುತದ ಪ್ರಸಿದ್ದ ವ್ಯಾಕರಣಗಳಲ್ಲಿ ಒಂದು. ಹೇಮಚಂದ್ರನೂ ನಾಗವರ್ಮನಂತೆಯೆ ಶುದ್ದಗೆಗಳನ್ನು ಹೇಳುವಾಗ ಕಳೆಯುವ, ಕೂಡಿಸುವ ಕೆಲಸವನ್ನು ಮಾಡುತ್ತಾನೆ. ಸಂಸ್ಕ್ರುತ ಶುದ್ದಗೆಗಳು ಕನ್ನಡಕ್ಕೆ ಇಲ್ಲವೆ ಪ್ರಾಕ್ರುತಕ್ಕೆ ಹೊಂದುವುದಿಲ್ಲ ಎಂಬ ತಿಳುವಳಿಕೆಯೆ ಈ ಕಳೆಯುವ–ಕೂಡುವ ಕೆಲಸಕ್ಕೆ ಕಾರಣವಾಗಿದೆ. ಹಾಗಾದರೆ ಸಂಸ್ಕ್ರುತ ವ್ಯಾಕರಣವನ್ನು ಕಣ್ಣುಮುಚ್ಚಿ ಅನುಕರಿಸುವ ಕೆಲಸವನ್ನಂತೂ ಇವರು ಮಾಡಿಲ್ಲ ಎಂದು ಇದರಿಂದ ಅರ್ತವಾಗಬಹುದು. ನಾಗವರ್ಮ ಹೇಮಚಂದ್ರನಿಗಿಂತ ಮೊದಲಿನವನು. ಹಾಗಾಗಿ ಈ ಸಂಸ್ಕ್ರುತ ವರ್ಣಮಾಲೆಯಲ್ಲಿ ಇರುವ ಅಕ್ಶರಗಳನ್ನು ತಮ್ಮ ಬಾಶೆಗೆ ತಕ್ಕನಾಗಿ ವಿವರಿಸುವಲ್ಲಿ ಈ ಕಳೆಯುವ ಕೂಡಿಸುವ ಕೆಲಸವನ್ನು ಮಾಡಿದ್ದಾರೆ. ಇದನ್ನು ಮೊದಲು ನಾಗವರ್ಮನೆ ಮಾಡಿ ಅದನ್ನು ಪ್ರಾಕ್ರುತ ಹೇಮಚಂದ್ರ

ಅನುಕರಿಸಿರಬಹುದೆ ಎಂಬುದು ನನ್ನ ಅನುಮಾನ. ಇದನ್ನು ಇನ್ನಷ್ಟು ವಿಸ್ತಾರವಾದ ಅಧ್ಯಯನದಿಂದ ತಿಳಿದುಕೊಳ್ಳಬಹುದು. ನಾಗವರ್ಮನನ್ನು ಕನ್ನಡೇತರರೂ ಓದಿರುವುದಕ್ಕೆ ಆದಾರಗಳನ್ನು ಮುಂದೆ ತೋರಿಸಲಾಗುವುದು. ಏನೆ ಆದರೂ ಈ ನಿಟ್ಟಿನಲ್ಲಿ ಹೆಚ್ಚು ಅಧ್ಯಯನದ ಅವಶ್ಯಕತೆ ಇದೆ.

೭. ವ್ಯಾಕರಣ ಕೃತಿಯಲ್ಲಿ ರುತ್ತಿ, ಟೀಕೆ ಇವು ಸಾಮಾನ್ಯವಾಗಿದ್ದವು. ಪಾಣಿನಿ ಪರಂಪರೆಯಲ್ಲಿ ವ್ಯಾಕರಣವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ರುತ್ತಿ ಅನಿವಾರ್ಯವಾಗಿದ್ದಿತು. ಈ ದಟ್ಟ ಪರಂಪರೆ ಆನಂತರ ಬಹುಕಾಲ ಮುಂದುವರೆಯುತ್ತದೆ. ಹಲವು ಬಾರಿ ವ್ಯಾಕರಣಕಾರರೆ ರುತ್ತಿಯನ್ನು ಬರೆಯುತ್ತಾರೆ. ಕೇಶಿರಾಜನ ರುತ್ತಿಯ ಬಗೆಗೆ ಹೆಚ್ಚು ಚರ್ಚೆ ಇದೆ. ಶಬ್ದಮಣಿದರ್ಪಣದ ಪದ್ಯವೊಂದರಲ್ಲಿ ತಾನೆ ರುತ್ತಿಯನ್ನು ಬರೆದಿರುವೆನೆಂದು ಹೇಳುತ್ತಿರುವಂತಿದೆಯಾದರೂ ಆಂತರಿಕ ವಿಶಯಬಿನ್ನತೆಗಳ ನೆಲೆಯಲ್ಲಿ ರುತ್ತಿಯನ್ನು ಆನಂತರದವರು ಯಾರೊ ಬರೆದಿರಬೇಕು ಎಂಬ ವಾದವನ್ನು ಕೆಲವರು ಮಾಡುತ್ತಾರೆ. ಈ ರುತ್ತಿಯನ್ನು ಮತ್ತು ವಿವಿದ ಹಸ್ತಪ್ರತಿಗಳಲ್ಲಿ, ವಿವಿದ ಟೀಕೆಗಳಲ್ಲಿ ರುತ್ತಿಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಿದೆ.

ವ್ಯಾಕರಣಗಳ ಮೇಲೆ ಟೀಕೆಗಳು ಬರುವುದೂ ಸಹಜವಾಗಿದ್ದಿತು. ಕೇಶಿರಾಜನ ವ್ಯಾಕರಣದ ಮೇಲೆ ಹೆಚ್ಚಿನ ಟೀಕೆಗಳು ಬಂದಿವೆ. ಇವುಗಳಲ್ಲಿ ಹೆಚ್ಚು ಚರ್ಚೆಯಲ್ಲಿ ಬಂದಿರುವಂತವು ಲಿಂಗಣ್ಣಾರಾಧ್ಯ (೧೯೩೯) ನಿಟ್ಟೂರು ನಂಜಯ್ಯ (೧೮೮೨). ಅದರೊಂದಿಗೆ ಡಿ.ಕೆ. ಬೀಮಸೇನರಾವ್ ಅವರು ಪ್ರಕಟಿಸಿದ ಶಬ್ದಮಣಿದರ್ಪಣದ ಪಾಟಾಂತರಗಳು (೧೯೫೧). ಇದಲ್ಲದೆ ಕೆಳದಿಯ ಹಸ್ತಪ್ರತಿ ಸಂಗ್ರಹಾಲಯದಲ್ಲಿ ಇದೆ ಎಂದು ಹೇಳಲಾಗುವ ಹಸ್ತಪ್ರತಿಯೊಂದು ಈ ಮೇಲಿನವುಗಳಿಗಿಂತ ಬಿನ್ನವಾದುದೆಂದು ಹೇಳಲಾಗುತ್ತದೆ. ವಾಸ್ತವದಲ್ಲಿ ಶಬ್ದಮಣಿದರ್ಪಣದ ಮೇಲೆ ಎಶ್ಟು ಟೀಕೆಗಳು ಬಂದಿವೆ ಎಂಬುದನ್ನು ಸ್ಪಶ್ಟವಾಗಿ ಹೇಳುವುದು ಕಶ್ಟವೆ. ಕಾರಣ, ವಿವಿದ ಹಸ್ತಪ್ರತಿ ಸಂಗ್ರಹಾಲಯಗಳಲ್ಲಿ ಇರುವ ಇನ್ನೂ ಹಲವಾರು ಹಸ್ತಪ್ರತಿಗಳನ್ನು ಓದಲಾಗಿಲ್ಲ. ಎಂ.ಎಂ. ಕಲಬುರ್ಗಿ ಅವರು ಶಬ್ದಮಣಿದರ್ಪಣ ಅಬ್ಯಾಸ ಪರಂಪರೆ ಬಗೆಗೆ ಶಬ್ದಮಣಿದರ್ಪಣದ ಪ್ರತಿಬಿಂಬ (೧೯೭೪) ಪುಸ್ತಕದಲ್ಲಿ ವಿಶದವಾಗಿ ಚರ್ಚಿಸುತ್ತಾರೆ. ಪಾರಂಪರಿಕ ಕಾಲದಲ್ಲಿ ಶಬ್ದಮಣಿದರ್ಪಣದ ಹಾಗೆಯೆ ಇತರ ವ್ಯಾಕರಣಗಳ ಮೇಲೆ ಬಂದಿರಬಹುದಾದ ಒಟ್ಟು ಟೀಕುಗಳನ್ನೂ ಅಧ್ಯಯನಕ್ಕೆ ಒಳಪಡಿಸಬೇಕಿದೆ.

೮. ಪಾರಂಪರಿಕ ಕನ್ನಡ ವ್ಯಾಕರಣಗಳು ಕಾಲಾಂತರದಲ್ಲಿ ಹಸ್ತಪ್ರತಿಯಿಂದ ಹಸ್ತಪ್ರತಿಗೆ ಬದಲಾಗುತ್ತಾ ಬಂದಿವೆ. ಹೀಗೆ ಪ್ರತಿ ಮಾಡುವಾಗ ಸಹಜವಾಗಿ ತಪ್ಪುಗಳು ನುಸುಳಬಹುದು. ಗ್ರಂತಸಂಪಾದನೆಯಲ್ಲಿ ಇಂತಾ ಹಲವಾರು ಬಗೆಯ 'ತಪ್ಪು'ಗಳನ್ನು ವಿದ್ವಾಂಸರು ಚರ್ಚಿಸುತ್ತಾರೆ. ಅದರಲ್ಲಿ ಉದ್ದೇಶಪೂರ್ವಕ ತಿದ್ದುಪಡಿಗಳೂ ಇವೆ. ಇಂತವುಗಳನ್ನು ಗಮನಹರಿಸಲು ಸಾಧ್ಯವೆ ನೋಡಬೇಕು. ಇವುಗಳಲ್ಲಿ ವ್ಯಾಕರಣಾತ್ಮಕ ಬದಲಾವಣೆ ಇಲ್ಲವೆ ತಿದ್ದುಪಡಿಗಳು ಬೇರೆ ಬೇರೆ ಟೀಕೆಗಳಲ್ಲಿ ಕಂಡುಬರುತ್ತವೆ. ಅದಲ್ಲದೆ ಸಾಮಾಜಿಕ ಇಲ್ಲವೆ ದಾರ್ಮಿಕ ಹಿನ್ನೆಲೆಯಲ್ಲಿಯೂ ಆಗಿರಬಹುದಾದ ಬದಲಾವಣೆಗಳನ್ನೂ ಇಲ್ಲಿ ಗಮನಿಸಬಹುದು. ಸಹಜವಾಗಿ ಶಬ್ದಮಣಿದರ್ಪಣಕ್ಕೆ ಹೆಚ್ಚಿನ ಹಸ್ತಪ್ರತಿಗಳು ಸಿಗುತ್ತವೆ. ಆದರೆ ಎಶ್ಟು ಹಸ್ತಪ್ರತಿಗಳು ಇವೆ ಎಂಬ ಲೆಕ್ಕ ಇಲ್ಲ. ಅಂತದೊಂದು ಶಬ್ದಮಣಿದರ್ಪಣ ಹಸ್ತಪ್ರತಿ ಸೂಚಿ ಮತ್ತು ಕನ್ನಡ ಪಾರಂಪರಿಕ ವ್ಯಾಕರಣಗಳ ಹಸ್ತಪ್ರತಿ ಸೂಚಿಯೊಂದನ್ನು ತಯಾರಿಸಬೇಕು. ಈ ಹಸ್ತಪ್ರತಿಗಳನ್ನು ಅವುಗಳು

ತೋರಿಸುವ ಬಿನ್ನತೆಗಳನ್ನು ಗಮನದಲ್ಲಿ ಇಟ್ಟುಕೊಂಡು ಅದ್ಯಯನಕ್ಕೆ ಒಳಪಡಿಸಬಹುದು. ಇದರಿಂದ ವ್ಯಾಕರಣ ಅದ್ಯಯನದಲ್ಲಿನ ಕಾಲಾಂತರದ ವಿಚಾರಗಳು ತಿಳಿಯಬಹುದು. ಅವುಗಳ ಪ್ರಾದೇಶಿಕ, ಸಾಮಾಜಿಕ ಹಿನ್ನೆಲೆಗಳನ್ನು ಗಮನದಲ್ಲಿರಿಸಿಕೊಂಡೂ ಇವುಗಳನ್ನು ಗಮನಿಸಬಹುದು.

೯. ಕರ್ನಾಟಕ ಬಾಶಾಬೂಶಣದ ಹಸ್ತಪ್ರತಿಗೆ ಸಂಬಂದಿಸಿದ ಅತ್ಯಂತ ಮಹತ್ವದ ವಿಚಾರವೊಂದಿದೆ. ಈ ವ್ಯಾಕರಣ ಸಂಸ್ಕೃತ ಬಾಶೆಯಲ್ಲಿದೆ. ಸಂಸ್ಕೃತಕ್ಕೆ ಅದರದೆ ಆದ ಲಿಪಿ ಇಲ್ಲದಿರುವುದರಿಂದ ಕರ್ನಾಟಕ ಪ್ರದೇಶದಲ್ಲಿ ಸಂಸ್ಕೃತವನ್ನು ಕನ್ನಡ ಲಿಪಿಯಲ್ಲಿ ಬರೆಯಲಾಗುತ್ತಿತ್ತು. ಹಾಗೆಯೆ ಬಾಶಾಬೂಶಣವನ್ನೂ ಕನ್ನಡ ಲಿಪಿಯಲ್ಲಿ ಬರೆದಿರುವ ಹಸ್ತಪ್ರತಿಗಳು ದೊರಕಿವೆ. ಕುತೂಹಲವೆಂದರೆ ಇದರ ಒಂದು ಹಸ್ತಪ್ರತಿ ಮಲಯಾಳಂ ಲಿಪಿಯಲ್ಲಿ ಇರುವುದು. ಇದರಿಂದ ಕನ್ನಡ ವ್ಯಾಕರಣವನ್ನು ಕನ್ನಡವಲ್ಲದವರು ಅದ್ಯಯನ ಮಾಡುತ್ತಿದ್ದರು ಎಂಬುದು ತಿಳಿಯುತ್ತದೆ. ಇದು ಕನ್ನಡ ಪಾರಂಪರಿಕ ವ್ಯಾಕರಣಗಳ ವಿಚಾರದಲ್ಲಿ ಮಾತ್ರವಲ್ಲದೆ ಇಡಿಯಾಗಿ ಬಾರತೀಯ ವ್ಯಾಕರಣ ಪರಂಪರೆಯಲ್ಲಿಯೆ ಮಹತ್ವದ ವಿಚಾರ. ಪ್ರಾಚೀನ ಕಾಲದಲ್ಲಿ ಸಂಸ್ಕೃತ ವ್ಯಾಕರಣವನ್ನು ಎಲ್ಲೆಡೆ ಓದಲಾಗುತ್ತಿತ್ತು, ಅದರೊಂದಿಗೆ ತುಸು ಪ್ರಾಕ್ರುತವನ್ನು ಎಂಬುದು ಇಂದಿನ ಕಾಲದ ಒಂದು ತಿಳುವಳಿಕೆ. ಹಾಗಿದ್ದರೆ ಸಂಸ್ಕೃತ ಮತ್ತು ಪ್ರಾಕ್ರುತ ಅಲ್ಲದ ಇತರ ಬಾಶೆಗಳನ್ನೂ ಹೀಗೆ ಅಕಿಲ ಬಾರತ ಮಟ್ಟದಲ್ಲಿ ಅದ್ಯಯನ ಮಾಡುವ ರೂಡಿ ಇದ್ದಿತೆ ಎಂಬ ವಿಚಾರವನ್ನು ಬಾಶಾಬೂಶಣದ ಮಲಯಾಳಂ ಲಿಪಿಯ ಹಸ್ತಪ್ರತಿ ಕೊಡುತ್ತದೆ. ಹಾಗಾಗಿ ಇದು ಬಹು ಮಹತ್ವದ ವಿಚಾರ. ತಮಿಳು ಶಾಸ್ತ್ರಗ್ರಂತಗಳು (ಯಾಪ್ಪರುಂಗಲಗಾರಿಗಯ್) ಕನ್ನಡ (ಹಾಗೆಯೆ ತೆಲುಗಿನ) ಶಾಸ್ತ್ರ ಗ್ರಂತಗಳನ್ನು ಹೇಳುವುದು, ಮಲಯಾಳಮ್ಮಿನ ಕೇರಳ ಪಾಣಿನಿ ಇತರ ದ್ರಾವಿಡ ಬಾಶೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದೂ ಕೂಡ ಇದನ್ನೆ ಬೆಂಬಲಿಸುತ್ತದೆ.

೧೦.ಕನ್ನಡ ವ್ಯಾಕರಣಗಳು ಬಾರತೀಯ ವ್ಯಾಕರಣ ಪರಂಪರೆಯ ಬಾಗವಾಗಿಯೆ ಬರುತ್ತವೆ. ಆದ್ದರಿಂದ ಕನ್ನಡ ವ್ಯಾಕರಣ ಪರಂಪರೆಯನ್ನು ಬಾರತೀಯ ಸನ್ನಿವೇಶದಲ್ಲಿ ಇಟ್ಟು ನೋಡಿದಾಗ ಅದನ್ನು ಸರಿಯಾಗಿ ಅರ್ತ ಮಾಡಿಕೊಳ್ಳಲು ಸಾದ್ಯ. ಇದಕ್ಕೆ ಪೂರಕವಾಗಿ ಹೆಚ್ಚು ತುಲನಿಕ ಅದ್ಯಯನಗಳು ಬರಬೇಕಿದೆ. ಕನ್ನಡ ಮತ್ತು ಸಂಸ್ಕೃತ ವ್ಯಾಕರಣಗಳನ್ನು ತುಲನಿಕವಾಗಿ ಅದ್ಯಯನ ಮಾಡಿದ ಹಲವು ನಿದರ್ಶನಗಳು ಇವೆ (ಶ್ರೀಕ್ರಿಶ್ಣಬಟ್. ೧೯೮೪, ಎಚ್.ಎಸ್. ಅನಂತನಾರಾಯಣ. ೨೦೧೦ ಮೊ.). ಅದರಂತೆಯೆ ಬಿಡಿಬಿಡಿಯಾಗಿ ತಮಿಳಿನ ತೊಲಕಾಪ್ಪಿಯಂ (ಆರ್. ಮಾದವನ್) ತೆಲುಗಿನ ಆಂದ್ರಶಬ್ದಚಿಂತಾಮಣಿ (ಟಿ. ಶಂಬುಲಿಂಗಪ್ಪ. ೧೯೯೯), ಮಲಯಾಳಮ್ಮಿನ ಲೀಲಾತಿಲಕಂ (ಬಿ.ಕೆ. ತಿಮ್ಮಪ್ಪ. ೧೯೭೬) ಮೊದಲಾದ ಕ್ರುತಿಗಳನ್ನು ಕನ್ನಡದ ಶಬ್ದಮಣಿದರ್ಪಣದ ಜೊತೆಗೆ ಹೋಲಿಸಿ ನೋಡುವ ಬಿಡಿಬಿಡಿ ಪ್ರಯತ್ನಗಳು ಬಂದಿವೆ. ಇಂತಾ ಇನ್ನೂ ಹೆಚ್ಚಿನ ಬಿಡಿ ಅದ್ಯಯನಗಳು ಮತ್ತು ಇಡಿಯಾಗಿ ಪರಂಪರೆಯನ್ನು ನೋಡುವ ಅದ್ಯಯನಗಳು ಬರಬೇಕಿದೆ. ಕನ್ನಡ ವ್ಯಾಕರಣ ಪರಂಪರೆಯನ್ನು ಇತರ ದ್ರಾವಿಡ ಬಾಶೆಗಳ ವ್ಯಾಕರಣ ಪರಂಪರೆಯೊಂದಿಗೆ ಮತ್ತು ಪ್ರಾಕ್ರುತ ಪರಂಪರೆಯೊಂದಿಗೆ ಹೋಲಿಸಿ ಅದ್ಯಯನ ಮಾಡುವುದು ಕೂಡ ಹೆಚ್ಚು ಅವಶ್ಯಕ.

೧೧. ಪಾರಂಪರಿಕ ವ್ಯಾಕರಣಗಳ ಅನುವಾದದ ಅವಶ್ಯಕತೆಯೂ ಅತ್ಯಂತ ಮಹತ್ವದ್ದು. ಕುತೂಹಲವೆಂದರೆ ಕನ್ನಡ ಪಾರಂಪರಿಕ ವ್ಯಾಕರಣಗಳ ಕುರಿತು ಸಾಕಶ್ಟು ಅದ್ಯಯನಗಳು ಬಂದಿವೆ. ಹೆಚ್ಚಾನುಹೆಚ್ಚು ಸಾಮಾನ್ಯ ಮಾತುಕತೆಯ ಬಾಗವಾಗಿ ಪರಂಪರೆಯನ್ನು ಮಾತನಾಡಲಾಗುತ್ತದೆ. ಆದರೆ ಇಡಿಯ ಪರಂಪರೆಯಲ್ಲಿ ಮುಕ್ಯವಾಗಿ ಪರಿಪೂರ್ಣವಾದ

ಕೇವಲ ಮೂರೆ ಮೂರು (ಶಬ್ದಸ್ಮೃತಿಯನ್ನು ಹೊರತುಪಡಿಸಿ) ವ್ಯಾಕರಣಗಳು ಇವೆ. ಇವುಗಳಲ್ಲಿ ಕೇವಲ ಶಬ್ದಮಣಿದರ್ಪಣ ಮಾತ್ರ ಕನ್ನಡದಲ್ಲಿದೆ, ಉಳಿದೆರಡು ಸಂಸ್ಕೃತದಲ್ಲಿವೆ. ಇದುವರೆಗೆ ಸಂಸ್ಕೃತದಲ್ಲಿರುವ ಈ ವ್ಯಾಕರಣಗಳನ್ನು ಕನ್ನಡಕ್ಕೆ ತರುವ ಪ್ರಯತ್ನ ಇಲ್ಲದೆ ಇರುವುದು ದುರದ್ರುಷ್ಟ. ಬಹುತೇಕ ಕನ್ನಡದ ಬಾಶಾವಿದ್ವಾಂಸರು ಕೇವಲ ಶಬ್ದಮಣಿದರ್ಪಣವನ್ನು ಮಾತ್ರ ಓದಿದ್ದಾರೆ. ಹಾಗಾಗಿ ಸಂಸ್ಕೃತದಲ್ಲಿ ಇರುವ ಉಳಿದೆರಡನ್ನೂ ಅತ್ಯಂತ ಜರೂರಾಗಿ ಕನ್ನಡಕ್ಕೆ ಅನುವಾದ ಮಾಡಬೇಕಿದೆ.

ಅದೆ ವೇಳೆಗೆ ಈ ಮೂರೂ ವ್ಯಾಕರಣಗಳನ್ನು ಇಂಗ್ಲೀಶಿಗೆ ಅನುವಾದ ಮಾಡಬೇಕಾದ ಅತ್ಯಂತ ಮಹತ್ವದ ಕೆಲಸವೂ ಆಗಬೇಕಿದೆ. ಕರ್ನಾಟಕ ಬಾಶಾಬೂಶಣವನ್ನು ರಯಿಸ್ ಅವರು ಇಂಗ್ಲೀಶಿಗೆ ಬಹು ಹಿಂದೆ ಅನುವಾದ ಮಾಡಿದ್ದಾರೆ (೧೮೯೦). ಅದರಂತೆಯೆ ಶಬ್ದಮಣಿದರ್ಪಣವನ್ನು ಕೆದಿಲಾಯ ಅವರು ಇಂಗ್ಲೀಶಿನಲ್ಲಿ ಬಿಡಿಬಿಡಿ ಲೇಕನಗಳಂತೆ ಪ್ರಕಟಿಸಿದ್ದಾರೆ. ಹೆಚ್ಚೂ ಕಡಿಮೆ ಪೂರ್ಣ ಅನುವಾದ ಪ್ರಕಟವಾಗಿರುವಂತಿದೆ. ಆದರೆ, ಆ ಎಲ್ಲ ಸಂಚಿಕೆಗಳನ್ನು ಸೇರಿಸಿ ಒಂದೆಡೆ ತಂದಿಲ್ಲ. ಅದನ್ನು ಒಂದೆಡೆ ತರಬೇಕಿದೆ. ಈ ಅನುವಾದಗಳನ್ನು ವಿಮರ್ಶಾತ್ಮಕವಾಗಿ ನೋಡಬೇಕಿದೆ. ಮತ್ತೊಮ್ಮೆ ಎಲ್ಲ ಪಾರಂಪರಿಕ ವ್ಯಾಕರಣಗಳನ್ನು ಇಂಗ್ಲೀಶಿಗೆ ಅನುವಾದ ಮಾಡಬೇಕಿದೆ. ತಮಿಳಿನ ತೊಲ್ಕಾಪ್ಪಿಯಂ ಇದರ ಸುಮಾರು ಹದಿಮೂರು ಅನುವಾದಗಳು ಇಂಗ್ಲೀಶಿನಲ್ಲಿ ಇವೆ ಎಂಬ ಮಾಹಿತಿ ಅನುವಾದದ ಅವಶ್ಯಕತೆಯನ್ನು ಎತ್ತಿ ತೋರಿಸಬಹುದು. ಜಗತ್ತಿನಲ್ಲಿ ಕೆಲವೆ ಕೆಲವು ಬಾಶೆಗಳಿಗೆ ಸಾವಿರಕ್ಕೂ ಹೆಚ್ಚಿನ ವರುಶಗಳ ವ್ಯಾಕರಣ ಸಂಪ್ರದಾಯ ಇದೆ. ಹಾಗಾಗಿ ಜಗತ್ತಿನ ವ್ಯಾಕರಣ ಪರಂಪರೆ ಕುರಿತು ಮಾತನಾಡುವಾಗ ಕನ್ನಡ ಪರಂಪರೆಯನ್ನೂ ಅದರಲ್ಲಿ ಸೇರಿಸಬೇಕಿದೆ. ಆದರೆ ಕನ್ನಡ ವ್ಯಾಕರಣಗಳನ್ನು ಅನುವಾದಿಸುವ ಮತ್ತು ಕನ್ನಡ ಪರಂಪರೆಯನ್ನು ಪರಿಚಯಿಸುವ ಕೆಲಸವನ್ನು ಸರಿಯಾಗಿ ಮಾಡಿಲ್ಲದಿರುವುದರಿಂದ ಕನ್ನಡ ಇಂತಲ್ಲಿ ಸ್ತಾನವನ್ನು ಪಡೆದುಕೊಳ್ಳುವುದಿಲ್ಲ.

ಅದರಂತೆಯೆ ಕನ್ನಡದ ಎಲ್ಲ ಪಾರಂಪರಿಕ ವ್ಯಾಕರಣಗಳನ್ನು ಇತರ ದ್ರಾವಿಡ ಬಾಶೆಗಳಾದ ತಮಿಳು, ತೆಲುಗು ಮತ್ತು ಮಲಯಾಳಮ್ಮಿಗೆ ಅನುವಾದಿಸುವ ಕೆಲಸ ಆಗಬೇಕು ಮತ್ತು ಈ ಮೂರು ಬಾಶೆಗಳ ಎಲ್ಲ ಪಾರಂಪರಿಕ ವ್ಯಾಕರಣಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕು. ಇದರಿಂದ ತುಲನಿಕ ಅದ್ಯಯನಗಳಿಗೆ ಹೆಚ್ಚು ಅವಕಾಶಗಳನ್ನು ಒದಗಿಸಿದಂತಾಗುತ್ತದೆ. ಸಂಸ್ಕೃತ ಮತ್ತು ಪ್ರಾಕ್ರುತದ ಪ್ರದಾನ ವ್ಯಾಕರಣಗಳನ್ನು ಕನ್ನಡಕ್ಕೆ ತರಬೇಕಾದ ಅವಶ್ಯಕತೆ ಇದೆ. ಸಂಸ್ಕೃತದಿಂದ ಪಾಣಿನಿ–ಕಾತ್ಯಾಯನ–ಪತಂಜಲಿ ಮತ್ತು ಇತರೆ ಕೆಲವು ಪ್ರದಾನ ವ್ಯಾಕರಣಗಳು, ಅದರಂತೆಯೆ ಪ್ರಾಕ್ರುತದಿಂದ ಶರ್ವವರ್ಮನ ಕಾತಂತ್ರ ವ್ಯಾಕರಣ ಮತ್ತು ಹೇಮಚಂದ್ರನ ಸಿದ್ದ ಹೇಮ ಶಬ್ದಾನುಶಾಸನ ಮೊದಲಾದವನ್ನು ಕನ್ನಡಕ್ಕೆ ತರಬೇಕಾದ ಅವಶ್ಯಕತೆ ಇದೆ. ಸಂಸ್ಕೃತದಿಂದ ಕೆಲವು ಅನುವಾದಗಳು ಬಂದಿವೆ. ಆದರೆ ಇನ್ನೂ ಹೆಚ್ಚಿನ ಅನುವಾದಗಳ ಅವಶ್ಯಕತೆ ಇದೆ.

೧೨.ಪಾರಂಪರಿಕ ವ್ಯಾಕರಣಗಳನ್ನು ಮತ್ತು ಒಟ್ಟಾರೆ ಪರಂಪರೆಯನ್ನು ಇನ್ನೂ ವಿವಿದ ಆಯಾಮಗಳಲ್ಲಿ ಅದ್ಯಯನ ಮಾಡಬೇಕಿದೆ. ಕೇಶಿರಾಜ ಸೂಚಿಯೊಂದನ್ನು ಮಾಡಬೇಕಿದೆ. ಟಿ.ವಿ. ವೆಂಕಟಾಚಲ ಶಾಸ್ತ್ರಿ ತಮ್ಮ ಶಬ್ದಮಣಿದರ್ಪಣದಲ್ಲಿ (೨೦೧೦) ಇಂತದೊಂದು ಪ್ರಯತ್ನವನ್ನು ಮಾಡಿದ್ದಾರೆ. ಇದನ್ನು ಇನ್ನೂ ಕೆಲವು ಅದ್ಯಯನಗಳನ್ನು ಸೇರಿಸಿ ಎಂ.ಎಂ. ಕಲಬುರ್ಗಿ ತಮ್ಮ ಶಬ್ದಮಣಿದರ್ಪಣದ ಪ್ರತಿಬಿಂಬ (೨೦೧೫) ಪುಸ್ತಕದಲ್ಲಿ ಮರುಪ್ರಕಟಿಸಿದರು. ಆದರೆ ಇನ್ನೂ

ಹಲವಾರು ಅಧ್ಯಯನಗಳು ಈ ಪಟ್ಟಿಯಲ್ಲಿ ಸೇರಿಲ್ಲ. ಅದರಂತೆಯೆ ಇದನ್ನು ಕನ್ನಡ ವ್ಯಾಕರಣ ಪರಂಪರೆ ಗ್ರಂತಸೂಚಿಯಾಗಿ ಬೆಳೆಸಬೇಕಿದೆ.

೧೩.ಪಾರಂಪರಿಕ ವ್ಯಾಕರಣಗಳ ಪಾರಿಬಾಶಿಕ ಪದಕೋಶವೊಂದನ್ನು ತಯಾರಿಸಬೇಕಿದೆ. ಇದು ಕೇವಲ ಕನ್ನಡ ಪರಂಪರೆಯನ್ನು ತಿಳಿದುಕೊಳ್ಳುವುದಕ್ಕೆ ಮಾತ್ರವಲ್ಲದೆ ಕನ್ನಡ ಪರಂಪರೆಯು ಒಟ್ಟು ಬಾರತೀಯ ವ್ಯಾಕರಣ ಪರಂಪರೆಯನ್ನು ಹೇಗೆ ಗ್ರಹಿಸಿದ್ದಿತು ಎಂಬುದನ್ನು ತಿಳಿದುಕೊಳ್ಳುವುದಕ್ಕೂ ಅನುಕೂಲವಾಗುತ್ತದೆ.

೧೪.ಇಲ್ಲಿ ಆದುನಿಕಪೂರ್ವ ಕಾಲದ ವ್ಯಾಕರಣಗಳ ಬಗೆಗೂ ಒಂದೆರಡು ಮಾತುಗಳನ್ನು ಆಡಬಹುದು. ಬ್ರಿಟೀಶರ ಕಾಲದಲ್ಲಿ ಈ ದೇಶದ ಅಧ್ಯಯನ ವಿದಾನಗಳು ಬಹುತೇಕ ವಲಯಗಳಲ್ಲಿ ಬದಲಾದವು ಮತ್ತು ಹಲವಾರು ಹೊಸ ಹೊಸ ಅಧ್ಯಯನ ಅವಕಾಶಗಳು, ವಲಯಗಳು ಬೆಳೆದವು. ವ್ಯಾಕರಣದಂತಾ ಹಲವು ಕ್ಶೇತ್ರಗಳಲ್ಲಿ ಪಾರಂಪರಿಕ ಅಧ್ಯಯನ ವಿದಾನಗಳು ಬದಲಾವಣೆಗಳೊಂದಿಗೆ ಮುಂದುವರೆದವು. ಈ ಕಾಲದ ಬಹುತೇಕ ವ್ಯಾಕರಣಗಳು ಪಾರಂಪರಿಕ ವ್ಯಾಕರಣ ಮಾದರಿಯನ್ನು ಹೆಚ್ಚು ಅವಲಂಬಿಸಿಯೆ ಬಂದವು. ಅದರೊಟ್ಟಿಗೆ ಪರಿಗಣಿಸುವಶ್ಟು ಲ್ಯಾಟಿನ್ ಮಾದರಿಯನ್ನೂ ಅನುಸರಿಸಿದವು. ಪಾರಿಬಾಶಿಕಗಳ ಬಳಕೆ, ವಿಶಯಗಳ ಹೊಂದಿಕೆ ಮತ್ತು ಮುಕ್ಯವಾಗಿ ನಿರೂಪಣಾ ಕ್ರಮದಲ್ಲಿ ಆದ ಮಹತ್ವದ ಬದಲಾವಣೆಗಳನ್ನು ಇಲ್ಲಿ ಗಮನಿಸಬಹುದು. ಕಿಟೆಲ್ ತನ್ನ ವ್ಯಾಕರಣದಲ್ಲಿ (೧೯೦೩) ಅಯ್ತಿಹಾಸಿಕ ವ್ಯಾಕರಣ ಮಾದರಿಯನ್ನೂ ಬಳಸಿಕೊಳ್ಳುವುದನ್ನು ಕಾಣಬಹುದು. ಈ ಕಾಲದಲ್ಲಿ ಸುಮಾರು ನೂರರಶ್ಟು ವ್ಯಾಕರಣಗಳು ಬಂದಿರುವ ಸಾದ್ಯತೆ ಇದೆ. ಇವುಗಳ ಒಂದು ಸಮಗ್ರ ಪಟ್ಟಿಯನ್ನು ಇನ್ನೂ ತಯಾರಿಸಿಲ್ಲ. ಅಂತದೊಂದು ಕೆಲಸವನ್ನು ಅವಶ್ಯವಾಗಿ ಮಾಡಬೇಕಿದೆ. ಈ ಕಾಲದ ವ್ಯಾಕರಣಗಳನ್ನು ಹಲವು ರೀತಿಯಲ್ಲಿ ಬಿನ್ನವಾಗಿ ಗುಂಪಿಸಲು ಸಾದ್ಯ. ಕನ್ನಡವನ್ನು ಹೊಸತಾಗಿ ಕಲಿಯುವವರಿಗೆ ಅನುಕೂಲವಾಗಲೆಂದು ಬರೆದ ಕಲಿಕಾ ವ್ಯಾಕರಣಗಳು ಮತ್ತು ಶಾಲಾ ಮಕ್ಕಳಿಗೆ ಕನ್ನಡ ಕಲಿಸಲೆಂದು ಬರೆದ ಶಾಲಾ ವ್ಯಾಕರಣಗಳನ್ನು ಮುಕ್ಯವಾದ ಎರಡು ಬಿನ್ನ ಗುಂಪುಗಳೆಂದು ಹೇಳಬಹುದು. ಅದರೊಂದಿಗೆ ಇತರ ಕೆಲವು ಯುರೋಪಿನ ಬಾಶೆಗಳಲ್ಲಿಯೂ ಕನ್ನಡ ವ್ಯಾಕರಣಗಳು ಬಂದಿವೆ. ಈ ವ್ಯಾಕರಣಗಳ ರಚನಾ ಕ್ರಮದಲ್ಲಿ ಸಾಕಶ್ಟು ವ್ಯತ್ಯಾಸ, ವಯಿವಿದ್ಯತೆಯನ್ನು ಕಾಣಬಹುದು. ಶ್ರೀರಂಗಪಟ್ಟಣದ ಕ್ರಿಶ್ಣಮಾಚಾರ್ಯನ ವ್ಯಾಕರಣವು (೧೮೩೦) ಪ್ರಶ್ನೋತ್ತರ ರೂಪದಲ್ಲಿದೆ. ಈ ವ್ಯಾಕರಣಗಳು ವಿಶಯದಲ್ಲಿಯೂ ಸಾಕಶ್ಟು ವಯಿವಿದ್ಯತೆ ತೋರಿಸುತ್ತಿರುವುದನ್ನೂ ಗಮನಿಸಬೇಕಿದೆ. ಈ ಕಾಲದ ಕೆಲವು ವ್ಯಾಕರಣಗಳ ಮೇಲೆ ಕೆಲವು ಬಿಡಿ ಬಿಡಿಯಾದ ಲೇಕನಗಳು ಬಂದಿವೆಯಾದರೂ ವಿಸ್ತ್ರುತವಾದ ಅಧ್ಯಯನಗಳ ಅವಶ್ಯಕತೆ ಇದೆ. ಬಿ.ಬಿ. ರಾಜಪುರೋಹಿತ ಅವರು ತಮ್ಮ ಕನ್ನಡ ವ್ಯಾಕರಣ ಒಂದು ಅಧ್ಯಯನ (೨೦೧೭) ಪುಸ್ತಕದಲ್ಲಿ ಈ ಕಾಲದ ಹಲವು ವ್ಯಾಕರಣಗಳ ಸಣ್ಣ ಪರಿಚಯವನ್ನು ಒಂದೆಡೆ ಮಾಡಿದ್ದಾರೆ.

ಈ ಲೇಕನ ಮುಕ್ಯವಾಗಿ ಇತ್ತೀಚಿನ ವರುಶಗಳಲ್ಲಿ ಕನ್ನಡ ಬಾಶಾವಿಗ್ನಾನದಲ್ಲಿ ಆಗಿರುವ ಕೆಲವು ಪ್ರಮುಕ ಕೆಲಸಗಳನ್ನು ಗಮನಿಸಿ ಕನ್ನಡ ಬಾಶಾವಿಗ್ನಾನದಲ್ಲಿ ಕಂಡುಬರುತ್ತಿರುವ ಇತ್ತೀಚಿನ ಒಲವುಗಳನ್ನು ಗುರುತಿಸುವ ಪ್ರಯತ್ನ ಮಾಡಿದೆ. ಇತ್ತೀಚಿನ ಎನ್ನುವುದನ್ನು ಸುಮಾರು ಹತ್ತು ವರುಶ ಅಂದರೆ ೨೦೦೮ರಿಂದ ಇಂದಿನವರೆಗೆ ಎಂದು ಅಂದಾಜಾಗಿ ತೆಗೆದುಕೊಂಡಿದೆ. ಕನ್ನಡ ಬಾಶಾವಿಗ್ನಾನ ಎನ್ನುವುದನ್ನು ಮುಕ್ಯವಾಗಿ ಕನ್ನಡ ಬಾಶೆಯ ಮೇಲೆ ಬಂದಿರುವ ಅದ್ಯಯನಗಳು ಎಂದು ತೆಗೆದುಕೊಂಡಿದೆ. ಅದರೊಟ್ಟಿಗೆ ತುಸು ಕನ್ನಡ ಬಾಶೆಯಲ್ಲಿ ಬಂದಿರುವ ಬಾಶಾವಿಗ್ನಾನದ ಕೆಲಸಗಳನ್ನೂ ಪರಿಗಣಿಸಿದೆ. ಬಡಗ, ಜೇನುಕುರುಬ, ಬೆಟ್ಟಕುರುಬ ಮೊದಲಾದ ಹಲವು ಮಾತಿನಬಗೆಗಳನ್ನು ಹಲವರು ಇಂದು ಸ್ವತಂತ್ರ ಬಾಶೆಗಳೆಂದು ಕರೆಯುತ್ತಿರುವುದನ್ನ ಕಾಣಬಹುದು. ಆದರೆ ಅವುಗಳನ್ನು ಕನ್ನಡದ ಒಳನುಡಿಗಳೆಂದು ಪರಿಗಣಿಸುವವರೂ ಇದ್ದಾರೆ. ಈಗಿನ ಲೇಕನದಲ್ಲಿ ಸದ್ಯಕ್ಕೆ ಅವುಗಳನ್ನು ಪರಿಗಣಿಸಿದೆ. ಕಳೆದ ಹತ್ತು ವರುಶಗಳಲ್ಲಿ ಆಗಿರುವ ಬಾಶಾವಿಗ್ನಾನದ ಕೆಲಸಗಳು, ಕೆಲಸಗಳು ಆಗಿರುವ ವಿವಿದ ಒಳಶಾಕೆಗಳು, ಅವುಗಳ ವಯಿವಿದ್ಯತೆ, ವ್ಯಾಪಕತೆ, ತಾತ್ವಿಕತೆ ಮೊದಲಾದವನ್ನು ಅರ್ತ ಮಾಡಿಕೊಳ್ಳುವ ಪ್ರಯತ್ನ ಈ ಬರವಣಿಗೆ. ಇದರಲ್ಲಿ ಕೆಲವು ಅದ್ಯಯನಗಳ ಉಲ್ಲೇಕವನ್ನು ತೆಗೆದುಕೊಂಡಿದೆ. ಎಡೆಯೊದಗಿದಲ್ಲಿ ಶಾಕೆಗಳ, ತಾತ್ವಿಕತೆಯ ಸಣ್ಣಸಣ್ಣ ಚರ್ಚೆ ಮಾಡಿದೆ.

ಕಳೆದ ಸುಮಾರು ಹತ್ತು ವರುಶಗಳಲ್ಲಿ ಕನ್ನಡ ಬಾಶಾ ಅದ್ಯಯನ ಬಹುವ್ಯಾಪಕತೆಯನ್ನು ತೋರಿಸುತ್ತದೆ. ಇದನ್ನು ಬರೆಯುತ್ತಿರುವ ವಿಶಯಗಳು, ವಿದ್ವಾಂಸರು ಮೊದಲಾದವನ್ನು ಗಮನಿಸಿ ಹೇಳಬಹುದು. ಹಾಗಾಗಿ ಈ ಲೇಕನದಲ್ಲಿ ಎಲ್ಲ ಅದ್ಯಯನಗಳನ್ನು ಉಲ್ಲೇಕಿಸುವ ಪ್ರಯತ್ನ ಮಾಡಿಲ್ಲ. ಕೊನೆಯಲ್ಲಿ ತುಸು ವ್ಯಾಪಕವಾದ ಸಂದರ್ಬಗ್ರಂತಗಳ ಪಟ್ಟಿಯನ್ನು ಕೊಟ್ಟಿದೆಯಾದರೂ ಅದನ್ನೂ ಸಮಗ್ರ ಎಂದು ತೆಗೆದುಕೊಳ್ಳಬೇಕಿಲ್ಲ. ಕೆಲವು ಅದ್ಯಯನಗಳು ನನ್ನ ಗಮನಕ್ಕೆ ಬರದೆ ಹೋಗಿರಬಹುದು, ಇನ್ನು ಕೆಲವುಗಳನ್ನು ಸೇರಿಸಿಕೊಳ್ಳಲು ಮಾಹಿತಿ ಇಲ್ಲದೆ ಹೋಗಿರಬಹುದು ಎಂಬ ತಿಳುವಳಿಕೆ ನನಗಿದೆ.

ಕಳೆದ ಸುಮಾರು ಹತ್ತು ವರುಶಗಳಲ್ಲಿ ಆಗಿರುವ ಕೆಲಸಗಳನ್ನು ಬಾಶಾವಿಗ್ನಾನದ ತಾತ್ವಿಕ ಮತ್ತು ಆನ್ವಯಿಕ ಅದ್ಯಯನಗಳೆಂದು ನೋಡುವ ಪ್ರಯತ್ನ ಮಾಡಿದೆ. ವ್ಯಾಕರಣಗಳ ಸಂಕೆ ದೊಡ್ಡದಿರುವುದರಿಂದ ಈ ಲೇಕನದ ಎರಡನೆಯ ಬಾಗದಲ್ಲಿ ವ್ಯಾಕರಣ ರಚನೆಯನ್ನು ಪ್ರತ್ಯೇಕವಾಗಿ ನೋಡಿದೆ. ಮೂರನೆಯ ಬಾಗದಲ್ಲಿ ಸಿದ್ದಾಂತಿಕ ಕೆಲಸಗಳನ್ನು ಮತ್ತು ನಾಲ್ಕನೆಯ ಬಾಗದಲ್ಲಿ ಆನ್ವಯಿಕ ಕೆಲಸಗಳನ್ನು ಚರ್ಚಿಸಿದೆ.

ಈ ಮೇಲೆ ಉಲ್ಲೇಕಿಸಿದಂತೆ ಕನ್ನಡ ಬಾಶಾದ್ಯಯನದಲ್ಲಿ ಹಲವಾರು ಕೆಲಸಗಳು ಬರುತ್ತಿವೆ ಎನ್ನುವುದು ನಿಜ. ಆದರೆ, ಇದರಲ್ಲಿ ಇಂದಿನ ದಿನಗಳ ಅವಶ್ಯಕತೆಯನ್ನು ಎಶ್ಟು ಮಟ್ಟಿಗೆ ಕನ್ನಡ ಬಾಶಾವಿಗ್ನಾನ ತನ್ನ ಜವಾಬ್ದಾರಿ ಎಂದು ತೆಗೆದುಕೊಂಡಿವೆ ಎಂಬುದು ತುಸು ಯೋಚಿಸಬೇಕಾದ ವಿಶಯವಾಗಿ ಕಾಣಿಸುತ್ತದೆ. ಪ್ರತಿಯೊಂದು ಸಂಶೋದನೆ ತನ್ನ ಕ್ಶೇತ್ರದ ಮುಂಬರಿಕೆಗೆ ಕಾರಣವಾಗಬೇಕು ಮತ್ತು ಸಮಾಜಕ್ಕೆ ಒಂದಶ್ಟು ತಿಳಿವಳಿಕೆಯನ್ನು ಕೊಡಬೇಕು. ಅದರೊಟ್ಟಿಗೆ ಸಮಾಜದಲ್ಲಿನ ಸಂಬಂದಿತ ಕ್ಶೇತ್ರದ ಮಹತ್ವದ ವಿಶಯಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸುವಂತೆ ಇರಬೇಕು. ಸದ್ಯ ಕರ್ನಾಟಕದಲ್ಲಿ ಬಾಶೆಗೆ ಸಂಬಂದಿಸಿದ ಹಲವಾರು ಸುಡುಸುಡುವ ಸಮಸ್ಯೆಗಳಿವೆ. ತಾಯ್ನುಡಿ ಶಿಕ್ಶಣ, ಇಂಗ್ಲೀಶ್ ಮಾದ್ಯಮ ಶಿಕ್ಶಣ, ಕನ್ನಡದ ವಿವಿದ ಒಳನುಡಿಗಳ ಸ್ತಾನಮಾನ, ಕನ್ನಡದ ವ್ಯಾಕರಣ ರಚನೆ ಮತ್ತು ಕನ್ನಡ ಸಮುದಾಯದ ಸಾಮಾಜಿಕ ರಚನೆ, ಕನ್ನಡ ಸಾಹಿತ್ಯ ಮತ್ತು ಕನ್ನಡ ಬಾಶೆ, ಕರ್ನಾಟಕದ ಇತಿಹಾಸ ಮತ್ತು ಕನ್ನಡ ಬಾಶೆ, ಕನ್ನಡ ಮತ್ತು ಇತರ ಬಾಶೆಗಳು, ಆಡಳಿತ, ನ್ಯಾಯಾಂಗ ಮೊದಲಾದ ಕ್ಶೇತ್ರಗಳಲ್ಲಿ ಕನ್ನಡ, ಉನ್ನತ ಶಿಕ್ಶಣದಲ್ಲಿ ಕನ್ನಡ, ಸಾಯುತ್ತಿರುವ ಬಾಶೆಗಳು, ರಾಜ್ಯದ ಗಡಿಯಲ್ಲಿ ಮತ್ತು ಅಲ್ಲಲ್ಲಿ ಒಳಗೆ ಇರುವ ಬಾಶೆಗೆ ಸಂಬಂದಿಸಿದ ಸಮಸ್ಯೆಗಳು, ಕರ್ನಾಟಕದ ಹೊರಗಿನ ಕನ್ನಡದವರ ಸಮಸ್ಯೆಗಳು ಹೀಗೆ

ಹತ್ತು ಹಲವಾರು ಸಮಸ್ಯೆಗಳು ಇವೆ. ಇವುಗಳಿಗೆ ಕನ್ನಡ ಬಾಶಾವಿಗ್ನಾನ ಎಶ್ಟು ಮಟ್ಟಿಗೆ ಸ್ಪಂದಿಸುತ್ತಿದೆ ಎನ್ನುವುದನ್ನು ಗಮನಿಸಬೇಕು. ಅದರೊಟ್ಟಿಗೆ ಕನ್ನಡ ಬಾಶಾವಿಗ್ನಾನ ಮುಕ್ಯವಾಗಿ ಜಗತ್ತಿನ ಬಾಶಾವಿಗ್ನಾನ, ಸಿದ್ದಾಂತಗಳು, ತಾತ್ವಿಕತೆ ಮತ್ತು ಆನ್ವಯಿಕತೆ ಮೊದಲಾದವುಗಳೊಂದಿಗೆ ಜೊತೆಜೊತೆಯಾಗಿ ನಡೆಯಬೇಕು. ಕನ್ನಡ ಬಾಶಾವಿಗ್ನಾನ ಎಶ್ಟುಮಟ್ಟಿಗೆ ಹೀಗೆ ಜೊತೆ ನಡೆಯುತ್ತಿದೆ ಎಂಬುದನ್ನು ಅವಲೋಕಿಸಬೇಕು. ಜಾಗತಿಕ ಬಾಶಾವಿಗ್ನಾನದ ಸಿದ್ದಾಂತಗಳಿಗೆ ಉದಾಹರಣೆಗಳನ್ನು ಹುಡುಕುವ, ಸಿದ್ದಾಂತಗಳನ್ನು ಒರೆ ಹಚ್ಚುವ, ಪ್ರಶ್ನಿಸುವ, ಸಿದ್ದಾಂತಗಳಲ್ಲಿ ಬದಲಾವಣೆಯನ್ನು ಕೊಡುವ, ಹೊಸ ಸಿದ್ದಾಂತಗಳನ್ನು ಮುಂದಿಡುವ ಮೊದಲಾದ ಇಂತಾ ಕೆಲಸಗಳನ್ನೂ ಮಾಡಬೇಕಾಗುತ್ತದೆ. ಇವುಗಳನ್ನು ಕನ್ನಡ ಬಾಶಾವಿಗ್ನಾನ ಎಶ್ಟು ಮಟ್ಟಿಗೆ ಮಾಡುತ್ತಿದೆ ಎಂಬುದನ್ನೂ ನೋಡಬೇಕಿದೆ. ಈ ಅವಲೋಕನೆ ಮುಂದಿನ ಅದ್ಯಯನಗಳಿಗೆ ದಾರಿ ತೋರುವಂತೆ ಆಗಬೇಕು. ಈ ಆಶಯಗಳನ್ನು ಇಟ್ಟುಕೊಂಡು ಇಲ್ಲಿ ಕಳೆದ ಸುಮಾರು ದಶಕದ ಕಾಲದ ಕನ್ನಡ ಬಾಶಾವಿಗ್ನಾನದ ಕೆಲಸಗಳನ್ನು ಒಂದು ಸ್ತೂಲ ಅವಲೋಕನೆ ಮಾಡುತ್ತಿದೆ.

ಕನ್ನಡ ಬಾಶಾವಿಗ್ನಾನದ ಕಳೆದ ಸುಮಾರು ಹತ್ತು ವರುಶಗಳ ಕೆಲಸಗಳನ್ನು ಗಮನಿಸಿದಾಗ, ವಿವಿದ ವಲಯಗಳಲ್ಲಿ ಹಲವು ಆಯಾಮಗಳಲ್ಲಿ, ಹಲವು ಸ್ತರಗಳಲ್ಲಿ ಇವು ಹರಡಿಕೊಂಡಿರುವುದು ಕಾಣಿಸುತ್ತದೆ. ಇದನ್ನು ಬಾಶೆಯ ರಚನೆಯನ್ನು ಅರ್ತ ಮಾಡಿಕೊಳ್ಳುವಲ್ಲಿ ಇಲ್ಲವೆ ಬಾಶಾವಿಗ್ನಾನ ಸಿದ್ದಾಂತಗಳ ಆನ್ವಯಿಕತೆಯಲ್ಲಿ ಕಾಣಬಹುದು. ಬಾಶೆಯ ರಚನೆಯನ್ನು ಅರ್ತ ಮಾಡಿಕೊಳ್ಳುವ ಪ್ರಯತ್ನದಲ್ಲಿ ಹಲವಾರು ಕೆಲಸಗಳು ಬಂದಿವೆ. ಇವುಗಳಲ್ಲಿ ಕೆಲವು ಇಂದಿನ ಆದುನಿಕ ಬಾಶಾವಿಗ್ನಾನ ಸಿದ್ದಾಂತಗಳನ್ನು ಅಳವಡಿಸಿಕೊಂಡು ಬರುತ್ತಿವೆ. ಇಲ್ಲವೆ ಜಾಗತಿಕ ಸಿದ್ದಾಂತಗಳನ್ನು ಪ್ರಶ್ನಿಸುವಂತಾ ಬರಹಗಳೂ ಬಂದಿವೆ. ಈ ರೀತಿಯ ಆದುನಿಕ ಸಿದ್ದಾಂತಗಳ ಹಿನ್ನೆಲೆಯಲ್ಲಿ ಬರುತ್ತಿರುವ ಹೆಚ್ಚಿನ ಕನ್ನಡದ ಕೆಲಸಗಳು ಇಂಗ್ಲೀಶಿನಲ್ಲಿ ಇವೆ ಮತ್ತು ತುಂಬಾ ಕಡಿಮೆ ಸಂಕೆಯಲ್ಲಿ ಇವೆ. ಇಂಗ್ಲೀಶಿನಲ್ಲಿ ಬರೆಯುತ್ತಿರುವ ಎಸ್.ಎನ್. ಶ್ರೀದರ್, ಎ. ಅಮ್ರುತವಲ್ಲಿ ಮೊದಲಾದವರು ಜಾಗತಿಕ ಬಾಶಾವಿಗ್ನಾನಿಕ ಸಿದ್ದಾಂತಗಳನ್ನು ಆಳವಾಗಿ ಅರಿತುಕೊಂಡವರು. ಹಾಗಾಗಿ ಕನ್ನಡದ ಉದಾಹರಣೆಗಳನ್ನು ತೆಗೆದುಕೊಂಡು ಸಿದ್ದಾಂತಗಳನ್ನು ಸಮರ್ತಿಸುವ, ಪ್ರಶ್ನಿಸುವ ಇಲ್ಲವೆ ಮಾರ್ಪಡಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಶಂಕರಬಟ್ಟ ಮೊದಲಾದ ಕೆಲವೆ ಕೆಲವರು ಕನ್ನಡದಲ್ಲಿ ಈ ಸಿದ್ದಾಂತಗಳನ್ನು ಅಳವಡಿಸಿ ನೋಡುವ ಮತ್ತು ಕನ್ನಡದ ಬಳಕೆಗಳನ್ನು ಹಿಡಿದು ಹೊಸತಾದ ವಿವರಣೆಯನ್ನು ಕೊಡುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆನ್ವಯಿಕ ವಲಯದಲ್ಲಿ ಸಮಾಜಬಾಶಾವಿಗ್ನಾನ, ಇತಿಹಾಸಿಕ ಬಾಶಾವಿಗ್ನಾನ, ಶಯ್ಲಿವಿಗ್ನಾನ, ಶಿಕ್ಶಣ ಬಾಶಾವಿಗ್ನಾನ, ಮನೋಬಾಶಾವಿಗ್ನಾನ. ಕಂಪ್ಯೂಟರ್ ಬಾಶಾವಿಗ್ನಾನ ಮೊದಲಾದ ವಲಯಗಳಲ್ಲಿ ಕೆಲಸಗಳು ಬರುತ್ತಿವೆ.

೨. ವ್ಯಾಕರಣ ರಚನೆ:

ಕನ್ನಡದ ಪಾರಂಪರಿಕ ಮಾದರಿಯ ವ್ಯಾಕರಣಗಳು ಇಂದಿಗೂ ಬರುತ್ತಿವೆ, ಹೆಚ್ಚಿನ ಸಂಕೆಯಲ್ಲಿಯೆ ಬರುತ್ತಿವೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಪಾರಂಪರಿಕ ವ್ಯಾಕರಣಗಳು ಎಂದರೆ ಬ್ರಿಟೀಶ್ ಕಾಲದಲ್ಲಿ ಬಂದ ಕನ್ನಡ ವ್ಯಾಕರಣ ಪರಂಪರೆಯ ಜೊತೆಗೆ ಲ್ಯಾಟಿನ್ ಪರಂಪರೆಯ ಲಕ್ಶಣಗಳನ್ನೂ ಬೆರೆಸಿದ ಮಾದರಿಯ ವ್ಯಾಕರಣಗಳು. ಶ್ರೀಕಂಟಯ್ಯನವರ ಕನ್ನಡ ಮದ್ಯಮ ವ್ಯಾಕರಣದಂತವು ಎಂದು ಹೇಳಬಹುದು. ಇವುಗಳಲ್ಲಿ ಹೆಚ್ಚಿನವು ಶಾಲಾ ವ್ಯಾಕರಣ ಮಾದರಿಯಲ್ಲಿ ಇವೆ. ಆದುನಿಕ ವರ್ಣನಾತ್ಮಕ ಮಾದರಿಯನ್ನು ಅನುಸರಿಸಿರುವ ಕೆಲವು ವ್ಯಾಕರಣಗಳೂ ಬಂದಿವೆ. ಕನ್ನಡದಲ್ಲಿ ವರ್ಣನಾತ್ಮಕ ಬಾಶಾವಿಗ್ನಾನ ಎಪ್ಪತ್ತರಲ್ಲಿ ಡೆಕ್ಕನ್ ಕಾಲೇಜು, ಪೂನಾ ಮತ್ತು ಅಣ್ಣಮಲಯ್ ವಿಶ್ವವಿದ್ಯಾಲಯ, ಅಣ್ಣಮಲಯ್ ನಗರ ಇಲ್ಲಿಂದ ಬಂದ ಒಳನುಡಿ ಸರ್ವೆ ಯೋಜನೆಯ ಬಾಗವಾದ ವರ್ಣನಾತ್ಮಕ ವ್ಯಾಕರಣಗಳ ಮಾದರಿಯನ್ನು ಇನ್ನೂ ಹೆಚ್ಚಾಗಿ ಅನುಸರಿಸುತ್ತಿದೆ.

ಒಂದು ಒಳನುಡಿಯ ಇಲ್ಲವೆ ನಿರ್ದಿಷ್ಟ ಪಟ್ಯದ (ಸಾಹಿತ್ಯ ಪಟ್ಯ, ಶಾಸನ ಪಟ್ಯ ಮೊ.) ವರ್ಣನಾತ್ಮಕ ವ್ಯಾಕರಣಗಳು ಈ ಕಾಲದಲ್ಲಿ ಹಲವು ಬಂದಿವೆ. ಅದರೊಂದಿಗೆ ವ್ಯಾಕರಣದ ಒಂದು ನಿರ್ದಿಷ್ಟ ಗಟಕವನ್ನು ವರ್ಣನಾತ್ಮಕ ಅಧ್ಯಯನ ಮಾಡಿದವೂ ಬಂದಿವೆ. ಶಂಕರಬಟ್ಟರ ಹಲವಾರು ಪುಸ್ತಕಗಳು ಈ ಎರಡೂ ಬಾಗಗಳಲ್ಲಿ ಬರುತ್ತವೆ. ಬಟ್ಟರು ಕನ್ನಡದ್ದೇ ವ್ಯಾಕರಣ ಬರೆಯುವ ಪ್ರಯತ್ನವನ್ನು ಮೊದಲು ಮಾಡಿದರು. ಕನ್ನಡ ಬರಹದ ಸೊಲ್ಲರಿಮೆ ಹೆಸರಿನ ಸುಮಾರು ಏಳು ಸಂಪುಟಗಳನ್ನು ಅವರು ತಂದಿದ್ದಾರೆ. ಇದರಲ್ಲಿ ಕ್ರಮವಾಗಿ ವ್ಯಾಕರಣ ರಚನೆಗೆ ಅವಶ್ಯವಾದ ಪ್ರಾತಮಿಕ ಅಂಶಗಳು ಮತ್ತು ಪದಗಳ ರಚನೆ (೨೦೧೦), ಕ್ರಿಯಾಪದಗಳು ಮತ್ತು ನಾಮಪದಗಳು (೨೦೧೧), ಕ್ರಿಯಾಪದಪುಂಜ ಮತ್ತು ಅವುಗಳ ರಚನೆ (೨೦೧೨), ಸರ್ವನಾಮಗಳು, ತೋರುಗಪದಗಳು (೨೦೧೩), ವಿಶೇಶಣಗಳು ಮತ್ತು ಸಂಕ್ಯಾಪದಗಳು (೨೦೧೫), ಒಳವಾಕ್ಯ ಮತ್ತು ವಾಕ್ಯಜೋಡಣೆ (೨೦೧೮), ಮತ್ತು ವಿವಿದ ಬಗೆಯ ವಾಕ್ಯಗಳನ್ನು (೨೦೧೯) ಚರ್ಚಿಸಿದ್ದಾರೆ. ಇಡಿಯಾಗಿ ಕನ್ನಡದ ಒಂದು ಬಹು ವಿಸ್ತ್ರುತವಾದ ವ್ಯಾಕರಣವನ್ನು ಕೊಟ್ಟಿದ್ದಾರೆ. ಬಹುಶಾ ನಾಗವರ್ಮ, ಕೇಶಿರಾಜ, ಬಟ್ಟಾಕಲಂಕ, ಎಸ್.ಎನ್. ಶ್ರೀದರ್ ಮೊದಲಾದವರಿಗಿಂತ ದೊಡ್ಡ ಪ್ರಮಾಣದಲ್ಲಿ ಈ ವ್ಯಾಕರಣ ಬಂದಿದೆ. ಸೊಲ್ಲರಿಮೆ ಸರಣಿ ಸಂಪುಟಗಳಲ್ಲಿ ಬಂದಿರುವ ಕೆಲವು ವಿಶ್ಲೇಶಣೆ ಅವರ ಇತರ ಬಿಡಿಬಿಡಿ ಗಟಕಗಳ ಮೇಲಿನ ಕೆಲವು ಪುಸ್ತಕಗಳಲ್ಲಿ ಈ ಮೊದಲು ಬಂದಿದ್ದವು.

ಕೆ.ವಿ. ನಾರಾಯಣ ಅವರು ಕನ್ನಡ ಉಲಿಕಂತೆಗಳು ಆಡುನುಡಿಯ ಸೊಲ್ಲರಿಮೆ (೨೦೧೧) ಎಂಬ ಕನ್ನಡ ದ್ವನಿಗಳ ಮೇಲಿನ ವರ್ಣನಾತ್ಮಕವಾದ ಪುಸ್ತಕವನ್ನು ಪ್ರಕಟಿಸಿದರು. ಇದನ್ನು ಅವರ ನಾಲ್ಕು ಸಂಪುಟಗಳ ಕನ್ನಡ ವ್ಯಾಕರಣ ಸರಣಿಯ ಮೊದಲ ಸಂಚಿಕೆ ಎಂದು ಪ್ರಕಟಿಸಿದ್ದಾರೆ. ಬಿ.ಬಿ. ರಾಜಪುರೋಹಿತ ಅವರು ತಮ್ಮ ಬಹು ಹಳೆಯದಾದ (೧೯೬೫) ಪಿಎಚ್.ಡಿ. ಪ್ರಬಂದವನ್ನು ವಚನ ವ್ಯಾಕರಣ (೨೦೦೩, ೨೦೦೯) ಹೆಸರಿನಲ್ಲಿ ಅತ್ಯಂತ ಸಣ್ಣದಾದ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ತುಸು ಹಳೆಯದಾದ ಓಂಕಾರಪ್ಪ ಅವರ ಸಂಶೋದನಾ ಪ್ರಬಂದವನ್ನು (೧೯೯೫) ಕನ್ನಡೀಕರಿಸಿ ಕುಮಾರವ್ಯಾಸ ಬಾರತದ ವರ್ಣನಾತ್ಮಕ ಅಧ್ಯಯನ (೨೦೧೪) ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಹಾಗೆಯೆ ದ.ರಾ. ಬೇಂದ್ರೆ ಕಾವ್ಯದ ವ್ಯಾಕರಣ (೨೦೧೧), ಕವಿರಾಜಮಾರ್ಗದ ಬಾಶೆ (೨೦೧೨) ಪ್ರಕಟವಾಗಿವೆ.

ಪಿಎಚ್.ಡಿ. ಪದವಿಗಾಗಿ ವಿವಿದ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವರ್ಣನಾತ್ಮಕ ಅಧ್ಯಯನಗಳು ಬಂದಿವೆ. ಸಾಮಾಜಿಕ ಒಳನುಡಿಗಳ ಮೇಲೆ; ಟಿಬೇಟಿಯನ್ನರ ಕನ್ನಡ (ಬಸವರಾಜ.೨೦೧೯), ಬರಹದ ಕನ್ನಡದ ಮೇಲೆ; ಬಸವಣ್ಣನ ವಚನಗಳು (ನಾಗರಾಜ.೨೦೧೪), ಕಲ್ಯಾಣಿ ಚಾಲುಕ್ಯರ ಕನ್ನಡ ಶಾಸನಗಳು (ಅಶೋಕಬಾಬು.೨೦೧೯) ಮತ್ತು ಕನ್ನಡ ಪಟ್ಯಪುಸ್ತಕಗಳ ವ್ಯಾಕರಣ (ಬಸವರಾಜ ಪಿ.೨೦೧೪), ಮೊದಲಾದವು ಬಂದಿವೆ.

ಡಿ.ಎನ್. ಶಂಕರಬಟ್ಟರು ಇಂಗ್ಲೀಶಿನಲ್ಲಿದ್ದ ತಮ್ಮ ಹಳೆಯದಾದ ಹವ್ಯಕ ವ್ಯಾಕರಣವನ್ನು (೧೯೭೧) ವಿಸ್ತರಿಸಿ ಕನ್ನಡದಲ್ಲಿ ಪ್ರಕಟಿಸಿದರು (೨೦೧೪). ಎಚ್.ಎಸ್. ಅನಂತನಾರಾಯಣ ಅವರು ತಮಿಳಿನ ಒಳನುಡಿಯಾದ ಸಂಕೇತಿ ರಚನೆಯನ್ನು ವಿವಿದ ಆಯಾಮಗಳಲ್ಲಿ ಪರಿಚಯಿಸುವ ಪುಸ್ತಕವೊಂದನ್ನು ಸಂಪಾದಿಸಿ (೨೦೦೭) ಪ್ರಕಟಿಸಿದ್ದಾರೆ. ಹಕ್ಕಿಪಿಕ್ಕಿಗಳ ಕನ್ನಡವನ್ನು ನಾಗರಾಜು (೨೦೧೨) ಪ್ರಕಟಿಸಿದ್ದಾರೆ.

ಬಿಡಿಬಿಡಿಯಾಗಿ ಬಾಶೆಯ ಒಂದೊಂದು ರಚನೆಯನ್ನು ಕೇಂದ್ರೀಕರಿಸಿ ಬಂದಿರುವ ಅಧ್ಯಯನಗಳು ಕೆಲವು ಬಂದಿವೆ. ಅನುರಾದ ಸುದರ್ಶನ್ ಅವರು ಕಾಲ–ಪಕ್ಶ–ಒಪ್ಪಂದ (೨೦೧೪ಅ), ನಿಶೇದರಚನೆ ಮೇಲೆ (೨೦೧೪ಆ), ಕ್ರಿಶ್ಚಿಯನ್ ಪಿಲೋಟ್ ರಯ್ಯೂರು ಅವರು ಬಡಗದ ಕಾಲರೂಪಗಳನ್ನು (೨೦೦೮, ೨೦೧೬), ಗಿರಿದರ ಅವರು ಕನ್ನಡ ಸಮಾಸಗಳನ್ನು ವಿವರಿಸಿದ್ದಾರೆ (೨೦೧೭). ಬಿ.ಬಿ. ರಾಜಪುರೋಹಿತ ಅವರು ದ್ವನಿಯ ಶ್ರಾವಣ ಮತ್ತು ಚಾಕ್ಶುಶ ರೂಪಗಳು (೨೦೦೯) ಮತ್ತು ದ್ವನಿವಿಗ್ನಾನ (೨೦೧೦) ಎಂಬ ಎರಡು ಪುಸ್ತಕಗಳಲ್ಲಿ ದ್ವನಿವಿಗ್ನಾನದ ಸಿದ್ದಾಂತಿಕ ವಿಚಾರಗಳನ್ನು ಪರಿಚಯಿಸಿದ್ದಾರೆ. ಬಾಶೆಯ ಒಂದು ಹಂತದ ಮೇಲೆ ವಿಶದವಾದ ಇಂತಾ ಪುಸ್ತಕ

ಬೇರೆ ಯಾವುದೆ ಹಂತಕ್ಕೆ ಇದುವರೆಗೆ ಬಂದಿಲ್ಲ. ನಿರಂಜನ ಉಪ್ಪೂರ ಅವರು ಬಹುವಚನ ಪ್ರತ್ಯಯಗಳ (೨೦೧೩) ಮೇಲೆ ಲೇಕನ ಮಾಡಿದ್ದಾರೆ. ಉಶಾರಾಣಿ ಅವರ ಕನ್ನಡ ಕ್ರಿಯಾಪದಗಳು ಪ್ರಕಟವಾಗಿದೆ (೨೦೦೮). ಪಿಎಚ್.ಡಿ. ಪದವಿಗಾಗಿ ಒಂದೊಂದು ಬಾಶಾಹಂತವನ್ನು ವಿವರಿಸುವ ಅಧ್ಯಯನಗಳೂ ಬಂದಿವೆ. ಮಸ್ಕಿ ಕನ್ನಡದ ಆಕೃತಿಮಾ (ಮಂಜುನಾತ್, ೨೦೧೨), ಕಲಬುರ್ಗಿ ಕನ್ನಡ ಆಕೃತಿಮಾ (ಬಸವಣ್ಣೋರ್.೨೦೧೬), ಯಾದಗಿರಿ ಪರಿಸರದ ನಾಮಪದಗಳು (ಬಾಬು.೨೦೧೬), ಕಲಬುರ್ಗಿ ಕನ್ನಡದ ಲಿಂಗ–ವಚನ (ಬಾಗ್ಯಶ್ರೀ.೨೦೧೨) ಮೊದಲಾದವನ್ನು ಗಮನಿಸಬಹುದು.

ಶಬ್ದಮಣಿದರ್ಪಣ ಅಧ್ಯಯನದ ಕುತೂಹಲ ಇನ್ನೂ ಹೆಚ್ಚುತ್ತಿರುವಂತಿದೆ. ಕಳೆದ ಕೆಲವು ವರುಶಗಳಲ್ಲಿ ಹೆಚ್ಚಿನ ಸಂಕೆಯ ಶಬ್ದಮಣಿದರ್ಪಣ ಸಂಪಾದನೆಗಳು ವಿವರಣಾತ್ಮಕವಾದ ಬರವಣಿಗೆಗಳೊಂದಿಗೆ ಬರುತ್ತಿವೆ. ಹಾಗೆಯೆ ಕವಿರಾಜಮಾರ್ಗದ ಪ್ರಕಟಣೆಗಳೂ ಬರುತ್ತಿವೆ. ಕವಿರಾಜಮಾರ್ಗವನ್ನು ಆರ್.ವಿ.ಎಸ್. ಸುಂದರಂ ಮತ್ತು ದೇವೆನ್ ಎಂ. ಪಟೇಲ್ ಅವರು ಇಂಗ್ಲೀಶಿಗೆ ಅನುವಾದಿಸಿದ್ದಾರೆ (೨೦೧೭). ಕೋಡಗುಂಟಿ ಅವರು ಶಬ್ದಮಣಿದರ್ಪಣದ ನಿಗಂಟನ್ನು ತಯಾರಿಸಿದ್ದಾರೆ (ಅಪ್ರಕಟಿತ).

೩. ಸಿದ್ದಾಂತಿಕ ಅಧ್ಯಯನಗಳು:

ಶಂಕರಬಟ್ಟರ ಸೊಲ್ಲರಿಮೆ ಪುಸ್ತಕಗಳು ಸಿದ್ದಾಂತಿಕ ನೆಲೆಯಲ್ಲಿ ಬಂದಿರುವಂತವು. ಅವುಗಳನ್ನು ಈ ಮೇಲೆ ಮಾತನಾಡಿರುವುದರಿಂದ ಇಲ್ಲಿ ಅದನ್ನು ಮರುಕಳಿಸಿಲ್ಲ. ೧೯೯೯ರಲ್ಲಿ ಶಂಕರಬಟ್ಟರು ಪ್ರಕಟಿಸಿದ್ದ ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬ ಪುಸ್ತಕ ಆನಂತರ ಹಲವು ವರುಶಗಳ ಕಾಲ ಕನ್ನಡ ಬಾಶಾವಿಗ್ನಾನದಲ್ಲಿ ಒಂದಲ್ಲಾ ಇನ್ನೊಂದು ರೀತಿಯಲ್ಲಿ ಚರ್ಚೆಯಲ್ಲಿ ಉಳಿದುಕೊಂಡಿದೆ. ಈ ಪುಸ್ತಕ ಪ್ರಕಟವಾದಾಗ ದೊಡ್ಡ ಪ್ರಮಾಣದ ಸ್ವೀಕಾರವನ್ನು ಪಡೆದುಕೊಂಡಿದ್ದಿತು. ಬಹುಶಾ ಕನ್ನಡದ ಸಂದರ್ಬದಲ್ಲಿ ಇಶ್ಟು ಪ್ರಮಾಣದ ಮರ್ಯಾದೆಯನ್ನೂ, ಚರ್ಚೆಯನ್ನೂ ಪಡೆದುಕೊಂಡ ಬಾಶಾವಿಗ್ನಾನದ ಒಂದೆ ಕ್ರುತಿ ಇದ್ದಿರಬಹುದು. ಆ ಪುಸ್ತಕ ಅತಿ ಹೆಚ್ಚು ಮಾರಾಟದ ದಾಕಲೆಯನ್ನೂ ಒಳಗೊಂಡು ನಾಡಿನುದ್ದಗಲ ವ್ಯಾಪಕ ಚರ್ಚೆಗೂ ಒಳಗಾಯಿತು. ಈ ವಾದದ ಪರ ಮತ್ತು ವಿರುದ್ದ ದೊಡ್ಡ ಪ್ರಮಾಣದಲ್ಲಿ ಚರ್ಚೆ ಹೆಸರಿನ ವಾಗ್ವಾದಗಳು ನಡೆದವು. ಬೇಸರದ ಸಂಗತಿ ಎಂದರೆ ಇಂತಾ ಮಹತ್ವದ ವಿಚಾರದಲ್ಲಿ ಪರ–ವಿರೋದದ ಎರಡೂ ಬಣಗಳು ಕೇವಲ ಹೊಗಳಿಕೆ–ತೆಗಳಿಕೆ ನೆಲೆಯಲ್ಲಿಯೆ ಉಳಿದುಕೊಂಡದ್ದು. ದುರದ್ರುಶ್ಟವೆಂದರೆ ಕೆಲವು ಹಿರಿಯ ವಿದ್ವಾಂಸರು ಈ ಚರ್ಚೆಯಲ್ಲಿ ಬಾಗವಹಿಸಿದ್ದರೂ ಚರ್ಚೆ ಹೆಚ್ಚು ಮವುಲಿಕ, ಹೆಚ್ಚು ವಿದ್ವತ್ತಿನದು ಆಗಲಿಲ್ಲ. ಶಂಕರಬಟ್ಟರ ಈ ವಾದವನ್ನು ಕನ್ನಡ ಬಾಶಾವಿಗ್ನಾನದ ಒಳಗಿನವರು ಮತ್ತು ಹೊರಗಿನವರು ತೆಗೆದುಕೊಂಡಿರುವುದು ಬಿನ್ನವಾಗಿದೆ. ಇದನ್ನು ಕಳೆದ ಸುಮಾರು ವರುಶಗಳಲ್ಲಿ ಕನ್ನಡದಾಗ ಆಗುತ್ತಿರುವ ಬಿನ್ನ ಬೆಳವಣಿಗೆಗಳನ್ನು ಗಮನಿಸಿದಾಗ ತಿಳಿದುಕೊಳ್ಳಬಹುದು. ಬಾಶಾವಿಗ್ನಾನದ ಹೊರಗಿನ ಕನ್ನಡ ಜಗತ್ತು ಬಟ್ಟರ ಈ ಪುಸ್ತಕದಿಂದ ಹೆಚ್ಚು ಪ್ರಬಾವಕ್ಕೆ ಒಳಗಾಗಿದೆ. ಈ ವಾದವನ್ನು ವ್ಯಾಕರಣದಿಂದ ಹೊರಗೆ ತಂದು ಸಾಮಾನ್ಯವಾಗಿಸಿ ಉಳಿದೆಲ್ಲ ಕ್ಶೇತ್ರಗಳಿಗೂ ತೆಗೆದುಕೊಂಡು ಮಾತನಾಡುವುದು ಬೆಳೆಯಿತು. ಕನ್ನಡದ ಅಯ್ದೆಂಟಿಟಿಯನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಈ ಪುಸ್ತಕದ ಪ್ರಯತ್ನವನ್ನು ಗುರುತಿಸಿದ್ದು ಬಹುಸೂಕ್ತವಾಗಿದೆ. ಅದರಿಂದಾಗಿ ಕನ್ನಡತ್ವದ ಹುಡುಕಾಟ, ಕನ್ನಡ ಅಯ್ದೆಂಟಿಟಿಯ ಕಟ್ಟುವಿಕೆ ಕೆಲಸಕ್ಕೆ ಇದು ಮಹತ್ವದ ಕೊಡುಗೆಯನ್ನು ಕೊಡುತ್ತದೆ. ಈ ಪುಸ್ತಕದ ಹೊರಚಾಚಿದ ಪ್ರಬಾವವೂ ಕಡಿಮೆ ಏನಿಲ್ಲ. ಕನ್ನಡಕ್ಕೆ ಬೇಕು ಕನ್ನಡದ್ದೇ ವಿಮರ್ಶಾ ಪ್ರಸ್ತಾನಗಳು, ಕನ್ನಡಕ್ಕೆ ಬೇಕು ಕನ್ನಡದ್ದೇ ಮೀಮಾಂಸೆ, ಕನ್ನಡಕ್ಕೆ ಬೇಕು ಕನ್ನಡದ್ದೇ ಜಾನಪದ ಮೀಮಾಂಸೆ ಎಂಬ ಹಲವು ಮಾತುಗಳನ್ನು ಕರ್ನಾಟಕದ ಬೇರೆ ಬೇರೆ ಕಡೆ ವಿದ್ವಾಂಸರು ಬಳಸಿದರು. ಆದರೆ, ಇಲ್ಲಿಯೂ ಇದು ರಾಚನಿಕ ನೆಲೆಯಲ್ಲಿ ಎಶ್ಟು ಪ್ರಮಾಣದ ಪ್ರಬಾವವನ್ನು ಬೀರಿದೆ ಎಂಬುದನ್ನು ತುಸು ಸೂಕ್ಶ್ಮವಾಗಿ ಗಮನಿಸಬೇಕಿದೆ. ಈ ವಾದವನ್ನು ಈಗಾಗಲೆ ಸಮಾಜದಲ್ಲಿ ಇರುವ ಸಂಸ್ಕ್ರುತದ ಹೇರಿಕೆಯನ್ನು ಹೇಳುವ ಮತ್ತು ವಿರೋದಿಸುವ ಆಲೋಚನೆಗೆ ನೇರವಾಗಿ ತಾಕಿಸಿಕೊಂಡದ್ದರಿಂದ ಇದು ಬಾಶಾವಿಗ್ನಾನದ ಹೊರಗೆ ಪ್ರಬಾವಿಯಾಗಿ ಬಳಕೆಯಾಯಿತು.

ಇನ್ನು ಈ ವಾದ ಬಾಶಾವಿಗ್ನಾನದ ಒಳಗೆ ಎಶ್ಟು ಪ್ರಮಾಣದಲ್ಲಿ ಪ್ರಬಾವವನ್ನು ಬೀರಿತು ಎಂಬುದನ್ನು ತುಸು ಗಮನಿಸಬೇಕು. ಕರ್ನಾಟಕದಲ್ಲಿ ಇರುವ ಮತ್ತು ಕನ್ನಡದಲ್ಲಿ ಕೆಲಸ ಮಾಡುತ್ತಿರುವ ಹೆಚ್ಚಿನವರು ಬಾಶಾವಿಗ್ನಾನದೊಳಗೆ ನಿರ್ದಿಶ್ಟವಾದ ಒಂದು ಒಳಶಾಕೆಯಲ್ಲಿ ಮಾತ್ರ ಕೆಲಸ ಮಾಡುವವರು ಎಂದೇನೂ ಇಲ್ಲ. ಸಾಮಾನ್ಯವಾಗಿ ಹಲವು ಕ್ಶೇತ್ರಗಳಲ್ಲಿ ಕೆಲಸ ಮಾಡುವವರು ಹೆಚ್ಚು ಇದ್ದಾರೆ. ಹೆಚ್ಚಿನವರು ಬಾಶೆಯ ರಚನೆ ಇಲ್ಲವೆ ವ್ಯಾಕರಣಕ್ಕೆ ಸಂಬಂದಿಸಿ ಕೆಲಸವನ್ನು ಮಾಡಿದ್ದಾರೆ. ಇಂತವರಲ್ಲಿ ಎಶ್ಟು ಮಂದಿ ಶಂಕರಬಟ್ಟರ ಈ ಪುಸ್ತಕದ ನಂತರ ಅವರ ಪ್ರಬಾವಕ್ಕೆ ಒಳಗಾಗಿ ಕನ್ನಡ ರಚನೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದರು ಎಂದು ನೋಡಿದಾಗ ಹೆಚ್ಚು ನಿರಾಶೆ ಕಾಣಿಸುತ್ತದೆ. ಶಂಕರಬಟ್ಟರ ಈ ವಾದಕ್ಕಿಂತ ಮೊದಲು ಇದ್ದ ಅದ್ಯಯನ ಕ್ರಮಗಳು ದೊಡ್ಡ ಪ್ರಮಾಣದಲ್ಲಿ ಬದಲಾಗಲಿಲ್ಲ. ಕೆ.ವಿ. ನಾರಾಯಣ ಅವರು ಕನ್ನಡ ಸೊಲ್ಲರಿಮೆಯನ್ನು ಬರೆಯುವ ಪ್ರಯತ್ನವನ್ನು ಮೊದಲು ಮಾಡಿ ಉಲಿಕಂತೆ ಎಂಬ (೨೦೧೧) ಮೊದಲ ಸಂಪುಟವನ್ನು ತಂದರು. ನಾರಾಯಣ ಅವರು ಬಹುತೇಕ ಬಟ್ಟರ ವಾದವನ್ನು ಇಡಿಯಾಗಿ ಬೆಂಬಲಿಸುವವರು. ಹಾಗಾಗಿ ಇದು ನಾರಾಯಣ ಅವರ ಈ ಸೊಲ್ಲರಿಮೆಯಲ್ಲಿಯೂ ಕಂಡುಬರುತ್ತದೆ. ಪಿ.ಪಿ ಗಿರಿದರ ಅವರು ಈ ಪ್ರಬಾವದಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿದರು (೨೦೧೬). ಉಳಿದಂತೆ ಬೇರೆಯವರ ಅದ್ಯಯನಗಳಲ್ಲಿ ಈ ಪ್ರಬಾವ ಕಂಡುಬರುವುದು ಕಡಿಮೆ. ಕೆ.ವಿ. ನಾರಾಯಣರ ಮುಂದಿನ ಸಂಪುಟಗಳೂ ಬರಲಿಲ್ಲ. ಬಟ್ಟರ ವಾದದಲ್ಲಿನ ಸಂಸ್ಕ್ರುತ ಹೇರಿಕೆ ವಿಚಾರಗಳು ಸಾಮಾನ್ಯವಾಗಿ ಬೇರೆ ಬೇರೆ ಅದ್ಯಯನಗಳಲ್ಲಿ ಕಂಡುಬರುತ್ತವೆ. ಆದರೆ, ಅದೆ ಪುಸ್ತಕದಲ್ಲಿ ಅವರು ಬಳಸುವ ಆದುನಿಕ ಬಾಶಾವಿಗ್ನಾನದ ಸಿದ್ದಾಂತಗಳ ಪ್ರಬಾವ ಅಶ್ಟಾಗಿ ಕಂಡುಬರುವುದಿಲ್ಲ. ಬಟ್ಟರ ವಿಚಾರಗಳನ್ನು ವಿರೋದಿಸುವವರೂ ಕೂಡ ಹೆಚ್ಚು ಸೂಕ್ಶ್ಮ ಸಿದ್ದಾಂತಗಳನ್ನು ಮಾತನಾಡಿದಂತೆ ಕಾಣಿಸದು. ಆದರೆ ಶಂಕರಬಟ್ಟರ ಇನ್ನೊಂದು ವಾದವಾದ ಲಿಪಿ ಬದಲಾವಣೆ ಹಲವರಲ್ಲಿ ಕಂಡುಬರುತ್ತಿದೆ. ಶಂಕರಬಟ್ಟರು ಕರೆಕೊಡುವ ಕಾಲದಿಂದಲೆ ಬಸವರಾಜ ಕೋಡಗುಂಟಿ ಲಿಪಿ ಬದಲಾವಣೆ ಮಾಡಿಕೊಂಡಿದ್ದರು. ಆನಂತರ ಹಲವರು ಈ ರೀತಿ ಬರೆಯುತ್ತಿದ್ದಾರೆ. ಬಾಶಾವಿಗ್ನಾನದ ಹೊರಗಿನ ಸಾಪ್ಟ್‌ವೇರ್ ಹಿನ್ನೆಲೆಯ ಹಲವರೂ ಇದರಲ್ಲಿ ತೊಡಗಿದ್ದಾರೆ. ಕೆ.ವಿ. ನಾರಾಯಣ ಮತ್ತು ಅವರೊಂದಿಗೆ ಇನ್ನು ಕೆಲವರು ಮಹಾಪ್ರಾಣಗಳನ್ನು ಉಳಿಸಿಕೊಂಡು 'ಖ', 'ಷ್' 'ರ್' ಮೊದಲಾದ ಕೆಲವನ್ನು ಬಿಟ್ಟು ಬರೆಯುವ ರೂಡಿಯನ್ನೂ ಮಾಡಿಕೊಂಡರು.

ಅಮ್ರುತವಲ್ಲಿ ಅವರು ವಾಕ್ಯ ಹಂತದ ಹಲವು ಲೇಕನಗಳನ್ನು ಮಾಡಿದ್ದಾರೆ. ಅವರ ಬಹುತೇಕ ಎಲ್ಲ ಲೇಕನಗಳೂ ಸಿದ್ದಾಂತಿಕವಾಗಿ ಮಹತ್ವದ ಕೆಲಸಗಳು. ಹೆಚ್ಚಿನ ಅವರ ಲೇಕನಗಳು ಕನ್ನಡದ ಮೇಲೆ ಇವೆ, ಕೆಲವು ಕನ್ನಡದೊಂದಿಗೆ ಇತರ ದ್ರಾವಿಡ ಬಾಶೆಗಳ ಮಾಹಿತಿಯನ್ನೂ ಬಳಸಿಕೊಂಡು ಬಂದಿವೆ. ಜಯಶೀಲನ್ ಅವರೊಂದಿಗೆ ಸೇರಿ ಹಲವು ಲೇಕನಗಳನ್ನು ಅವರು ಮಾಡಿದ್ದಾರೆ. ಈ ಇಬ್ಬರ ಹಲವು ವಾಕ್ಯಸಂಬಂದಿ ಲೇಕನಗಳನ್ನು ಒಳಗೊಂಡ Dravidian Syntact and Universal Grammar ಪುಸ್ತಕ ಆಕ್ಸ್‌ಫರ್ಡ್‌ನಿಂದ ಪ್ರಕಟವಾಗಿದೆ (೨೦೧೭).

ಕೋಡಗುಂಟಿ ಅವರು (೨೦೧೧ಅ, ೨೦೧೧ಆ, ೨೦೧೧ಇ). ಕನ್ನಡ ವಿಬಕ್ತಿ ರೂಪಗಳನ್ನು ದ್ರಾವಿಡ ನೆಲೆಯಲ್ಲಿ ಅದ್ಯಯನ ಮಾಡಿ ದ್ರಾವಿಡದಲ್ಲಿ ವಿಬಕ್ತಿಗಳಿಗೆ ತೋರುಗ ರೂಪಗಳು ಪ್ರದಾನ ಮೂಲ ಎಂಬುದನ್ನು ತೋರಿಸಿದ್ದಾರೆ. ಆ ಮೂಲಕ ಜಗತ್ತಿನ ಬಾಶೆಗಳಲ್ಲಿ ವಿಬಕ್ತಿಗಳ ಮೂಲ ಕ್ರಿಯಾಪದ ಮತ್ತು ಆನಂತರ ನಾಮಪದ ಎಂಬ ವಾದವನ್ನು ತಿರಸ್ಕರಿಸುವ ಪ್ರಯತ್ನ ಮಾಡಿದ್ದಾರೆ.

೪. ಆನ್ವಯಿಕ ಅದ್ಯಯನಗಳು:

ಸಮಾಜಬಾಶಾವಿಗ್ನಾನದಲ್ಲಿ ಇಂಗ್ಲೀಶಿನಲ್ಲಿ ಎಸ್.ಎನ್. ಶ್ರೀದರ್ ಮತ್ತು ಸೊನಾಲ್ ಕುಲಕರ್ಣಿ ಜೋಶಿ ಅವರ ಲೇಕನಗಳು ಮಹತ್ವದವುಗಳಾಗಿ ಕಾಣಿಸುತ್ತವೆ. ಎಸ್. ಎನ್. ಶ್ರೀದರ್ ಅವರು ಇತ್ತೀಚೆಗೆ ತಾವು ದ್ವಿಬಾಶಿಕ/ಬಹುಬಾಶಿಕರಾಗಿರುವ ಮತ್ತು ಆಗಿ ಬೆಳೆದ ಪರಿಸರವನ್ನು ಬರೆಯುತ್ತಾ ಕಳೆದ ಕೆಲವು ದಶಕಗಳ ಕಾಲದ ಕರ್ನಾಟಕದ ಬಹುಬಾಶಿಕತೆಯ ಚಿತ್ರಣವನ್ನು ಕೊಡುತ್ತಾರೆ (೨೦೧೯),

ಹಾಗೆಯೆ ಕನ್ನಡ ಬಾಶೆಯ ಆದುನಿಕತೆ (೨೦೦೮) ಮೊದಲಾದ ಹಲವು ಲೇಕನಗಳನ್ನೂ ಬರೆದಿದ್ದಾರೆ. ಗುಂಬರ್ಜ್ ಮತ್ತು ವಿಲ್ಸನ್ ಅವರ ಕುಪ್ವಾಡ ಅದ್ಯಯನದ ನಂತರದ ಕುಪ್ವಾಡದ ಬಾಶಿಕ ಸ್ತಿತಿಯನ್ನು ಸೊನಾಲ್ ಕುಲಕರ್ಣಿ ಅದ್ಯಯನ ಮಾಡಿದ್ದಾರೆ (೨೦೧೭), ಅಶೋಕ ಕುಮಾರ ರಂಜೇರೆ ಅವರು ಕ್ರುಶಿಪದಗಳನ್ನು ಕುರಿತು ಒಂದು ಪುಸ್ತಕ ತಂದಿದ್ದಾರೆ (೨೦೧೦). ಜನಬಾಶೆ ಬಾಶೆ ಮತ್ತು ಪ್ರಬುತ್ವ ಬಾಶೆಗಳ ಸಂಗರ್ಶ (೨೦೦೯) ಎಂಬ ಪುಸ್ತಕವನ್ನು ರಂಗನಾತ ಕಂಟನಕುಂಟೆ ಅವರು ಮಾಡಿದ್ದಾರೆ. ಆಡಳಿತ, ಆದುನಿಕತೆ ಮತ್ತು ಬಾಶೆ ಈ ಕುರಿತು ವಿಶದವಾಗಿ ಚರ್ಚಿಸಿದ್ದಾರೆ. ಕಳೆದ ಎರಡು–ಮೂರು ದಶಕಗಳಲ್ಲಿ ಕನ್ನಡದಲ್ಲಿ ಹೆಚ್ಚಾಗಿ ಕೆಲಸಗಳು ಆದ, ಮತ್ತೆ ಮತ್ತೆ ಚರ್ಚೆಗೆ ಒಳಗಾದ ಶಾಕೆ ಸಾಮಾಜಿಕ ಬಾಶಾವಿಗ್ನಾನ. ಕುತೂಹಲವೆಂದರೆ ಕಳೆದ ಸುಮಾರು ಹತ್ತು ವರುಶಗಳಲ್ಲಿ ಸಮಾಜೋಬಾಶಾವಿಗ್ನಾನದ ಮಹತ್ವದ ಅದ್ಯಯನಗಳು ಕನ್ನಡದಲ್ಲಿ ಬಂದಿಲ್ಲ.

ಇತಿಹಾಸಿಕ ಬಾಶಾವಿಗ್ನಾನದಲ್ಲಿ ಆಗಿರುವ ಕೆಲವು ಪ್ರಮುಕ ಕೆಲಸಗಳನ್ನು ಈಗ ಪರಿಚಯಿಸಿಕೊಳ್ಳಬಹುದು. ಕನ್ನಡ ಬಾಶೆಯ ಇತಿಹಾಸವನ್ನು ಪಾರಂಪರಿಕವಾಗಿ ವಿವರಿಸಿರುವ ರೀತಿಯಲ್ಲಿ ಕೇವಲ ಬರಹದ ಕನ್ನಡಕ್ಕೆ ಹೆಚ್ಚಿನ ಮನ್ನಣೆಯನ್ನು ಕೊಡಲಾಗಿತ್ತು. ವಾಸ್ತವದಲ್ಲಿ ಆಡುಬಾಶೆಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇದುವರೆಗಿನ ಕನ್ನಡ ಬಾಶೆಯ ಚರಿತ್ರೆ ಕೇವಲ ಬರಹದ ಕನ್ನಡದ ಚರಿತ್ರೆಯಂತೆಯೆ ಇದೆ. ಇದನ್ನು ಶಂಕರಬಟ್ಟ ಮತ್ತು ಬಸವರಾಜ ಕೋಡಗುಂಟಿ ಅವರು ಬದಲಿಸಿ, ಆಡುಬಾಶೆಯನ್ನು ಅದ್ಯಯನದ ಒಳಗೆ ತರುವ ಪ್ರಯತ್ನ ಮಾಡಿದ್ದಾರೆ. ಇದರಿಂದಾಗಿ ಕನ್ನಡ ಬಾಶೆಯ ಚರಿತ್ರೆಯ ಸ್ವರೂಪ ಗಣನೀಯ ಪ್ರಮಾಣದಲ್ಲಿ ಬದಲಾವಣೆ ಪಡೆದುಕೊಳ್ಳುತ್ತಿದೆ. ಕನ್ನಡ ಬಾಶೆಯ ಬೆಳವಣಿಗೆ, ಇತಿಹಾಸ ಮೊದಲಾದ ರೀತಿಯಲ್ಲಿ ಹಲವಾರು ಪಟ್ಯಪುಸ್ತಕ ಮಾದರಿಯ ಬರಹಗಳು ಬಂದಿವೆ. ಆದರೆ ಕನ್ನಡ ಕಯ್ಪಿಡಿ (೧೯೨೭), ನರಸಿಂಹಾಚಾರ್ (೧೯೪೧), ಗಾಯಿ (೧೯೪೭), ರಾಮಚಂದ್ರ ರಾವ್ (೧೯೭೨) ಇಂತಾ ಕೆಲವು ಬರಹಗಳನ್ನು ಹೊರತುಪಡಿಸಿದರೆ ಮಹತ್ವದ ಪ್ರಯತ್ನಗಳು ಬಂದಿರಲಿಲ್ಲ. ಶಂಕರಬಟ್ಟರ ಪ್ರಯತ್ನ ಈ ನಿಟ್ಟಿನಲ್ಲಿ ಗಮನೀಯ. ತುಸು ಹಿಂದೆ ಅವರು ಕನ್ನಡ ಬಾಶೆಯ ಕಲ್ಪಿತ ಚರಿತ್ರೆಯನ್ನು (೧೯೯೫) ಪ್ರಕಟಿಸಿದ್ದರು. ಅದಕ್ಕೂ ಹಿಂದೆ ಅವರು ಕನ್ನಡ ಬಾಶೆಯ ಸಂಕ್ಶಿಪ್ತ ಚರಿತ್ರೆ (೧೯೬೯) ಎಂಬ ಸಣ್ಣದಾದ ಬರವಣಿಗೆ ಮಾಡಿದ್ದರು. ಆನಂತರ ಅದನ್ನು ಬೆಳೆಸಿ ಕನ್ನಡ ನುಡಿ ನಡೆದು ಬಂದ ದಾರಿ (೨೦೦೭) ಹೆಸರಿನಲ್ಲಿ ಪ್ರಕಟಿಸಿದರು. ನಿಜಕ್ಕೂ ಹಳೆಗನ್ನಡ ವ್ಯಾಕರಣ ಹೇಗಿತ್ತು (೨೦೦೫) ಎಂಬ ಇನ್ನೊಂದು ಪುಸ್ತಕವನ್ನು ಶಂಕರಬಟ್ಟರು ಪ್ರಕಟಿಸಿದ್ದಾರೆ. ಇದರಲ್ಲಿ ಮುಕ್ಯವಾಗಿ ಹಳಗನ್ನಡದ ರಚನೆಯನ್ನು ತೋರಿಸಿದರೂ ಕನ್ನಡದ ಬೆಳವಣಿಗೆಯನ್ನು ತೋರಿಸುವ ಪ್ರಯತ್ನ ಕಾಣಿಸುತ್ತದೆ. ಬಟ್ಟರು ಕನ್ನಡವು ಮೊದಲು ಪೂರ್ವ–ಪಶ್ಚಿಮವಾಗಿ ಒಡೆದುಕೊಂಡಿದೆ ಆನಂತರ ಒಳನಾಡು ಕನ್ನಡ ಉತ್ತರ–ದಕ್ಶಿಣವಾಗಿ ಒಡೆದುಕೊಂಡಿದೆ ಎಂದು ತೋರಿಸುತ್ತಾರೆ. ಇದನ್ನು ಕೋಡಗುಂಟಿ ಅವರು ಕನ್ನಡ ಮೂಲಬೂತವಾಗಿ ಪಡುಗನ್ನಡ, ಬಡಗನ್ನಡ ಮತ್ತು ತೆಂಗನ್ನಡ ಎಂಬ ಮೂರು ಗುಂಪಾಗಿ ಮತ್ತು ನೀಲಗಿರಿ ಕನ್ನಡ ಎಂಬ ಇನ್ನೊಂದು ಅಸ್ಪಶ್ಟ ಗುಂಪುಗಳಾಗಿ ಒಡೆದುಕೊಂಡಿರಬೇಕು ಎಂದು ಹೇಳುತ್ತಾರೆ. ಆದರೆ, ಹೆಚ್ಚಿನ ಇತಿಹಾಸಿಕ ಮತ್ತು ತುಲನಿಕ ಅದ್ಯಯನಗಳಿಲ್ಲದೆ ಮಾಡಿರುವ ಈ ಊಹೆಗಳು ಎಶ್ಟು ಮಟ್ಟಿಗೆ ವಾಸ್ತವ ಎಂಬುದನ್ನು ಯೋಚಿಸಬೇಕಿದೆ. ಶಂಕರಬಟ್ಟ ಮತ್ತು ಕೋಡಗುಂಟಿ ಅವರು ಮೂಲಕನ್ನಡದ ಕುರಿತು ತುಸು ಮಾತನಾಡುತ್ತಾರೆ. ಬಸವರಾಜ ಕೋಡಗುಂಟಿ ಅವರು ವಿಬಕ್ತಿಗಳ ಮೇಲೆ ವಿಶೇಶ ಅದ್ಯಯನ ಮಾಡಿದ್ದಾರೆ (೨೦೧೧ಅ, ೨೦೧೧ಆ, ೨೦೧೧ಇ). ವಚನಗಳ ಬಾಶೆಯನ್ನು (೨೦೧೬), ಕನ್ನಡದ ಅವಸ್ತೆಗಳನ್ನು ಸಮಸ್ಯೀಕರಿಸುವ ಪ್ರಯತ್ನವನ್ನು (೨೦೧೬) ಮಾಡಿದ್ದಾರೆ. ಕನ್ನಡ ಪದಕೋಶದ ಬೆಳವಣಿಗೆಯನ್ನು ರವೀಂದ್ರ ಬಟಗೇರಿ ಅವರು ಅದ್ಯಯನ ಮಾಡಿದ್ದಾರೆ (೨೦೧೯).

ಶೆಟ್ಟರ್ ಅವರು ಹಳಗನ್ನಡ ಬಾಶೆ, ಬಾಶಾವ್ಯಾಪಾರ ಪುಸ್ತಕದಲ್ಲಿ (೨೦೧೨) ಬಿನ್ನ ಲೇಕಕರ ಹಳಗನ್ನಡವನ್ನು ಪರಿಚಯಿಸುವ ಹಲವಾರು ಲೇಕನಗಳನ್ನು ಸೇರಿಸಿ ಸಂಪಾದಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನವು ಇತಿಹಾಸಿಕ ಮತ್ತು ವರ್ಣನಾತ್ಮಕವಾಗಿರುವ ಕೆಲವು ಲೇಕನಗಳೂ ಸೇರಿಕೊಂಡಿವೆ. ಇದರಲ್ಲಿ ಜಾಗಿರದಾರರ ಹಲವು ಹಳೆಯ ಲೇಕನಗಳೂ ಶೆಟ್ಟರ್, ಕೋಡಗುಂಟಿ ಮೊದಲಾದವರ ಹೊಸ ಲೇಕನಗಳೂ ಇವೆ.

ಪಿ. ಕ್ರಿಶ್ಣಬಟ್ ಅವರು ಕನ್ನಡ ಪಾರಂಪರಿಕ ವ್ಯಾಕರಣಗಳನ್ನು ಪರಿಚಯಿಸುವ ಪುಸ್ತಕವೊಂದನ್ನು (೨೦೧೩) ಪ್ರಕಟಿಸಿದರು. ಇದರಲ್ಲಿ ಪಾರಂಪರಿಕ ವ್ಯಾಕರಣಗಳನ್ನು, ಅವುಗಳ ಸಿದ್ಧಾಂತಿಕ ನಿಲುವುಗಳನ್ನು, ಸಂಸ್ಕೃತದ ಪ್ರಭಾವ ಮೊದಲಾದವನ್ನು ವಿಶದವಾಗಿ ತೋರಿಸಿದ್ದಾರೆ. ಇದು ಅವರ ಬಹು ಹಳೆಯ ಪುಸ್ತಕದ (೧೯೮೯) ತಿದ್ದಿ ಬೆಳೆಸಿದ ಪುಸ್ತಕ. ಕನ್ನಡ ಬಾಶಾವಿಗ್ನಾನ ನಡೆದು ಬಂದ ದಾರಿ (೨೦೦೭,೨೦೦೯) ಹೆಸರಿನಲ್ಲಿ ಆದುನಿಕ ಬಾಶಾವಿಗ್ನಾನದ ಬೆಳವಣಿಗೆಗಳನ್ನು ಅರ್ತ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತಾ ಲೇಕನಗಳನ್ನು ಸಂಪಾದಿಸಿ ಸಂಗಮೇಶ ಸವದತ್ತಿಮಟ ಅವರು ದೊಡ್ಡ ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ. ಬಸವರಾಜ ಕೋಡಗುಂಟಿ ಅವರು ಸ್ತೂಲವಾಗಿ ಕನ್ನಡ ವ್ಯಾಕರಣ ಪರಂಪರೆಯನ್ನು ಪರಿಚಯಿಸುವ ಲೇಕನಗಳನ್ನು ಒಳಗೊಂಡ ಪುಸ್ತಕವನ್ನು (೨೦೧೭) ಸಂಪಾದಿಸಿದ್ದಾರೆ. ಉಪ್ಪಂಗಳ ರಾಮಬಟ್ಟ ಅವರು ತಮ್ಮ ಪಿಎಚ್.ಡಿ ಸಂಶೋದನಾ ಪ್ರಬಂದವಾದ ಬಟ್ಟಾಕಳಂಕನ ಶಬ್ದಾನುಶಾಸನ (೨೦೧೫)ವನ್ನು ಇತ್ತಿಚೆಗೆ ಪ್ರಕಟ ಪಡಿಸಿದರು. ಮಹಮದ್ ಬಾಶಾ ಗೂಳ್ಯಂ ಅವರು ಎರಡನೆಯ ನಾಗವರ್ಮನ ಶಾಸ್ತ್ರಕ್ರುತಿಗಳು (೨೦೧೧) ಎಂಬ ಬ್ರುಹತ್ ಗ್ರಂತವೊಂದನ್ನು ಪ್ರಕಟಿಸಿದ್ದಾರೆ. ಎಚ್.ಎಸ್. ಅನಂತನಾರಾಯಣ ಅವರು ಇತ್ತಿಚೆಗೆ ಕರ್ನಾಟಕ ಬಾಶಾಬೂಶಣವನ್ನು ವಿಮರ್ಶಿಸಿ ಲೇಕನ ಮಾಡಿದ್ದಾರೆ (೨೦೧೯). ನಾಗಣ್ಣ ಕಿಲಾರಿ ಅವರು ಇತ್ತೀಚಿನ ಕನ್ನಡ ಬಾಶಾವಿಗ್ನಾನದ ಬೆಳವಣಿಗೆಗಳನ್ನು ಅದ್ಯಯನ ಮಾಡಿದ್ದಾರೆ (೨೦೧೩). ಕೋಡಗುಂಟಿ ಕನ್ನಡ ಬಾಶಾವಿಗ್ನಾನ ಗ್ರಂತಸೂಚಿಯನ್ನು ತಯಾರಿಸಿದ್ದಾರೆ (ಅಪ್ರಕಟಿತ).

ಟಿ.ಎಸ್. ಸತ್ಯನಾತ್ ಅವರು ವ್ಯಾಕರಣ ಪರಂಪರೆಗಳ ಮೇಲೆ ಸುಮಾರು ವರುಶಗಳಿಂದ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದ ಇತಿಹಾಸವನ್ನು ಬಾಶಿಕವಾಗಿ ನೋಡುವ ಸಣ್ಣದೊಂದು ಪ್ರಯತ್ನವಾಗಿ ಬಾಶಿಕ ಕರ್ನಾಟಕ–ಮೊದಲಿಕೆ (೨೦೧೮) ಎಂಬ ಪುಸ್ತಕವೊಂದನ್ನು ಕೋಡಗುಂಟಿ ಪ್ರಕಟಿಸಿದ್ದಾರೆ. ಇದರಲ್ಲಿ ಕರ್ನಾಟಕದ ಬಾಶಿಕ ಇತಿಹಾಸವನ್ನು ಅದರ ಸಾಮಾಜಿಕ, ದಾರ್ಮಿಕ, ಆರ್ತಿಕ ಮೊದಲಾದ ಆಯಾಮಗಳಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ರವೀಂದ್ರ ಬಟಗೇರಿ ಅವರು ಪದಗಳ ಅದ್ಯಯನದ ಪುಸ್ತಕವೊಂದನ್ನು (೨೦೧೮) ಪ್ರಕಟಿಸಿದ್ದಾರೆ.

ತುಲನಿಕ ಬಾಶಾವಿಗ್ನಾನದಲ್ಲಿ ಹೆಚ್ಚು ಸಾಮಾನ್ಯ ಅದ್ಯಯನಗಳು ಬಂದಿವೆ, ಕನ್ನಡ ಕೇಂದ್ರಿತವಾಗಿ ಬಂದ ಅದ್ಯಯನಗಳು ಕಡಿಮೆ. ಈ ಲೇಕನ ಪರಿಗಣಿಸಿರುವ ಕಾಲಾವದಿಗಿಂತ ತುಸು ಮೊದಲು ಬದ್ರಿರಾಜು ಕ್ರಿಶ್ಣಮೂರ್ತಿ ಅವರ The Dravidian Languages ಎಂಬ ಪುಸ್ತಕ (೨೦೦೩) ಬಂದಿತ್ತು. ಇದು ದ್ರಾವಿಡ ಬಾಶೆಗಳಿಗೆ ಸಂಬಂದಿಸಿದ ಜಗದ್ವ್ಯಾಪಿ ಪಟ್ಯವಾಗಿ ಬಳಕೆಯಾಗುತ್ತಿರುವ ಬಹು ವಿಸ್ತ್ರುತವಾದ ಪುಸ್ತಕ. ಆನಂತರ ಈ ಕಾಲಾವದಿಯಲ್ಲಿ ಬಿ. ಗೋಪಿನಾತನ್ ನಾಯರ್ ಅವರ (೨೦೦೯), ಪಿ.ಎಸ್. ಸುಬ್ರಹ್ಮಣ್ಯಂ (೨೦೦೮, ೨೦೧೩), ಕುರುಮುರಿ ವಿ. ಸುಬ್ಬರಾವ್ (೨೦೧೨). ಸ್ಯಾನ್‌ಫೋರ್ಡ್ ಬಿ. ಸ್ಟೀವರ್ (೨೦೧೭), ಅಮ್ರುತವಲ್ಲಿ ಮತ್ತು ಜಯಶೀಲನ್ (೨೦೧೭) ಮೊದಲಾದ ಅತ್ಯಂತ ಮಹತ್ವದ ಪುಸ್ತಕಗಳು ಬಂದಿವೆ. ಒಟ್ಟಾರೆಯಾಗಿ ಇವು ಕನ್ನಡ ತುಲನಿಕ ಅದ್ಯಯನಗಳಿಗೆ ಪೂರಕವಾಗಿರುತ್ತವೆ. ಹಾಗೆಯೆ ಬಾರತೀಯ ಬಾಶೆಗಳನ್ನು ಗಮನದಲ್ಲಿ ಇಟ್ಟುಕೊಂಡು ಬಂದಿರುವ ಹಲವು ಅದ್ಯಯನಗಳೂ ಕನ್ನಡದ ತುಲನಿಕ ಅದ್ಯಯನಕ್ಕೆ ಪೂರಕವಾಗುತ್ತವೆ. ಇಲ್ಲಿ ಕಾಚ್ರು ಬಿ. ಬ್ರಜ್, ಯಮುನಾ ಕಾಚ್ರು ಮತ್ತು ಎಸ್.ಎನ್. ಶ್ರೀದರ್ ಅವರು ಸಂಪಾದಿಸಿರುವ Language in South Asia (೨೦೦೮) ಅನ್ನೂ ಸುಬ್ಬರಾವ್ ಅವರ South Asian Languages: A Syntactic Typology ಅನ್ನೂ ಇಲ್ಲಿ ಉಲ್ಲೇಕಿಸಬಹುದು. ಎಚ್.ಎಸ್. ಅನಂತನಾರಾಯಣ ಅವರ ಕಳೆದ ನಾಲ್ಕಾರು ದಶಕಗಳ ಕನ್ನಡದಲ್ಲಿರುವ ಮತ್ತು ಕನ್ನಡಕ್ಕೆ ಸಂಬಂದಿಸಿದ ಲೇಕನಗಳನ್ನು ಬಾಶಾವಿಶ್ಲೇಶಣೆ (೨೦೧೦) ಹೆಸರಿನ ಸಂಪುಟದಲ್ಲಿ ಕೋಡಗುಂಟಿ ಅವರು ಸಂಪಾದಿಸಿ ಪ್ರಕಟಿಸಿದರು. ಇದರಲ್ಲಿ ಕನ್ನಡ ಮತ್ತು ಸಂಸ್ಕೃತಗಳ ನಡುವಿನ ಹಲವು ತುಲನಿಕ ಲೇಕನಗಳು ಇವೆ. ಪ್ರಾಕ್ರುತ ಜಗದ್ವಲಯ ಎಂಬ ಪುಸ್ತಕದಲ್ಲಿ (೨೦೧೮) ಶೆಟ್ಟರ್ ಅವರು ಕನ್ನಡ ಮತ್ತು ಪ್ರಾಕ್ರುತಗಳ ಸಂಬಂದ ಮತ್ತು ಪ್ರಾಚೀನ ಕಾಲದಲ್ಲಿ ಪ್ರಾಕ್ರುತದ ವ್ಯಾಪಿಕೆ ಮೊದಲಾದ ವಿಚಾರಗಳನ್ನು ಚರ್ಚಿಸಿದ್ದಾರೆ. ಪ್ರಾಕ್ರುತ

ಬಾಶೆಗೆ ಸಂಬಂದಿಸಿ ಕನ್ನಡದಲ್ಲಿ ಬಂದ ಅತ್ಯಂತ ಮಹತ್ವದ ಕ್ರುತಿಯಾಗಿ ಇದನ್ನು ನೋಡಬಹುದು. ಲಂಬಾಣಿಯ ತುಲನಿಕ ಅದ್ಯಯನವೊಂದು (೨೦೧೭) ಪ್ರಕಟವಾಗಿದೆ.

ನಿಗಂಟುವಿಗ್ನಾನದಲ್ಲಿ ಕಾರ್ತಿಕ್ ಅವರು ಕನ್ನಡ ಪಾರಂಪರಿಕ ನಿಗಂಟುಗಳನ್ನು ಪರಿಚಯಿಸುವ ಮತ್ತು ಕನ್ನಡ ನಿಗಂಟುವಿಗ್ನಾನಕ್ಕೆ ಸಂಬಂದಿಸಿದ ಹಲವಾರು ಲೇಕನಗಳನ್ನು ಬರೆದಿದ್ದಾರೆ (೨೦೧೫). ರಾಜಪುರೋಹಿತ ಅವರ ಬಾಶೆ ಮತ್ತು ಅರ್ತಗಳ ಗುಟ್ಟು (೨೦೦೫) ಮತ್ತು ವ್ಯಾಸಾನುಬಾವ (೨೦೦೯) ಪುಸ್ತಕಗಳಲ್ಲಿ ನಿಗಂಟುವಿಗ್ನಾನದ ಹಲವು ಲೇಕನಗಳು ಇವೆ. ತಿಪ್ಪೇರುದ್ರ ಅವರು ಕನ್ನಡ ಸಾಹಿತ್ಯ ಪರಿಶತ್ತಿನ ಎಂಟು ಸಂಪುಟಗಳ ಕನ್ನಡ ನಿಗಂಟನ್ನು (೨೦೧೮) ತಮ್ಮ ಪಿಎಚ್.ಡಿ. ಸಂಶೋದನೆಗೆಂದು ಅದ್ಯಯನ ಮಾಡಿದ್ದಾರೆ.

ಹೆಸರುಗಳ ಅದ್ಯಯನದಲ್ಲಿ ಕೆಲವು ಸಂಶೋದನೆಗಳು ಆಗಿವೆ. ಸಣ್ಣಪಾಪಯ್ಯ ಅವರು ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು (೨೦೧೦) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅದ್ಯಯನ ಮಾದರಿ ತುಸು ಸಾಂಪ್ರದಾಯಿಕವಾದರೂ ಬಹು ವಿಸ್ತ್ರುತವಾದ ಅದ್ಯಯನವನ್ನು ಮಾಡಿದ್ದಾರೆ. ಅದರಂತೆಯೆ ಪಿಎಚ್.ಡಿ.ಗಾಗಿನ ಕೆಲವು ಅದ್ಯಯನಗಳೂ ಬಂದಿವೆ. ಬಳ್ಳಾರಿ ಪರಿಸರದ ವ್ಯಕ್ತಿನಾಮಗಳ ದಯಿವಮೂಲ ಅದ್ಯಯನ (ಹುಲಗಪ್ಪ.೨೦೧೭) ತುಮಕೂರು ಪರಿಸರದ ನಾಮಗಳ ಚಾರಿತ್ರಿಕ ಅದ್ಯಯನ (ನಟರಾಜು.೨೦೧೮) ಮೊದಲಾದವು.

ಜಾಗತಿಕವಾಗಿ ಅಳಿವಿನಂಚಿನಲ್ಲಿರುವ ಬಾಶೆಗಳ ಕೆಲಸಗಳು ತೀವ್ರಗತಿಯಲ್ಲಿ ನಡೆದಿವೆಯಾದರೂ ಕನ್ನಡ ಮತ್ತು ಕರ್ನಾಟಕದಲ್ಲಿ ಇಂತಾ ಕೆಲಸಗಳು ತುಂಬಾ ಕಡಿಮೆ ಮತ್ತು ಈಗ ಆರಂಬವಾಗುತ್ತಿವೆ. ವಿಶ್ವಸಂಸ್ತೆ ಅಳಿವಿನಂಚಿನಲ್ಲಿರುವ ಬಾಶೆಗಳ ದೊಡ್ಡದಾದ ಪಟ್ಟಿಯೊಂದನ್ನು ಪ್ರಕಟಿಸಿದೆ. ಇದರಲ್ಲಿ ಬಾರತದಲ್ಲಿಯೆ ಹೆಚ್ಚಿನ ಬಾಶೆಗಳು ಸಾಯುತ್ತಿವೆ ಎಂಬ ಚಿತ್ರಣ ದೊರೆಯುತ್ತಿದೆ. ನುಡಿಯ ಅಳಿವು ಎಂಬ ಪುಸ್ತಕವೊಂದನ್ನು (೨೦೧೭) ಮಲ್ಲಿಕಾರ್ಜುನ ಮೇಟಿಯವರು ಸಂಪಾದಿಸಿ ಪ್ರಕಟಿಸಿದ್ದಾರೆ. ಇದರಲ್ಲಿ ಇಂಗ್ಲೀಶಿನಿಂದ ಹಲವಾರು ಮಹತ್ವದ ಲೇಕನಗಳನ್ನು ಕನ್ನಡಕ್ಕೆ ಬೇರೆಬೇರೆಯವರಿಂದ ಅನುವಾದಿಸಿದ್ದಾರೆ. ಇದರಲ್ಲಿ ಒಟ್ಟು ಬಾಶೆಗಳ ಅಳಿವಿನ ಅಪಾಯದ ವಿವಿದ ಆಯಾಮಗಳನ್ನು ಪರಿಚಯಿಸುವ, ಕೆಲವು ಸಿದ್ದಾಂತಿಕವಾದ ಇನ್ನು ಕೆಲವು ನಿರ್ದಿಶ್ಟ ಅದ್ಯಯನಗಳ ಲೇಕನಗಳು ಇವೆ. ಜಿ.ಎನ್. ದೇವಿಯವರ ಪೀಪುಲ್ಸ್ ಸರ್ವೆ ಆಪ್ ಇಂಡಿಯಾ ಸರಣಿಯಲ್ಲಿ ಕರ್ನಾಟಕ ಸಂಪುಟವನ್ನು ರಾಜೇಶ್ವರಿ ಮಹೇಶ್ವರಯ್ಯ ಮತ್ತು ಎಚ್.ಎಂ. ಮಹೇಶ್ವರಯ್ಯ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಮಾತು ಸಾಯುವ ಮಾತು ಎಂಬ ಬಾಶೆಗಳ ಸಾವು, ಅದರಿಂದಾಗುವ ಹಾನಿ, ಅದಕ್ಕೆ ಮಾಡಬೇಕಾದ ಕೆಲಸಗಳು ಮೊದಲಾದ ವಿಶಯಗಳನ್ನೊಳಗೊಂಡು ವಿಶದವಾದ ಪುಸ್ತಕವೊಂದನ್ನು ಕೊಡಗುಂಟಿ ಮಾಡಿದ್ದಾರೆ (ಪ್ರಕಟಣೆಯಲ್ಲಿ). ಕರ್ನಾಟಕದ ಬಾಶಿಕ ಪರಿಸ್ತಿತಿಯನ್ನು ಪರಿಚಯಿಸುವ ಸಣ್ಣದೊಂದು ಕರ್ನಾಟಕದ ಮಾತುಗಳು (೨೦೧೬) ಎಂಬ ಪುಸ್ತಕವನ್ನೂ ಅವರು ಪ್ರಕಟಿಸಿದ್ದಾರೆ. ಕೆ.ವಿ. ನಾರಾಯಣ ಅವರು ನುಡಿಗಳ ಅಳಿವು (೨೦೧೭) ಎಂಬ ಪುಸ್ತಕವನ್ನು ಮಾಡಿದ್ದಾರೆ. ಇದರಲ್ಲಿ ಅಳಿವಿನಂಚಿನಲ್ಲಿರುವ ಬಾಶೆಗಳ ಮೇಲಿನ ಕೆಲಸಗಳಲ್ಲಿ ಬೇರೆ ಬೇರೆ ಬಗೆಯ ನಿರರತ್ಕತೆಗಳು ಅಡಗಿಕೊಂಡಿರುವ ಸಾದ್ಯತೆಯನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ.

ಕರ್ನಾಟಕದ ಹಲವಾರು ಸಣ್ಣ ಸಣ್ಣ ಬಾಶೆಗಳ ಮೇಲೆ ಹಲವು ಕೆಲಸಗಳು ಬಂದಿವೆ. ಗೇಲ್ ಕೊಎಲ್ಹೊ ಅವರು ಬೆಟ್ಟಕುರುಂಬದ ಮೇಲೆ ಹೆಚ್ಚು ವಯಿಗ್ನಾನಿಕವಾದ ಅದ್ಯಯನ ಮಾಡಿದ್ದಾರೆ (೨೦೧೨), ಇತ್ತೀಚೆಗೆ ಬಹುವಿಸ್ತ್ರುತವಾದ ಬೆಟ್ಟಕುರುಬದ ಮಾಹಿತಿಯನ್ನು ಸಂಗ್ರಹಿಸಿ ವಯಿಗ್ನಾನಿಕ ವಿದಾನದಲ್ಲಿ ಕೊಟ್ಟಿದ್ದಾರೆ (೨೦೧೮). ರಾಮಕ್ರಿಶ್ಣ ಶೆಟ್ಟಿ ಅವರು ಕೊರಗ ವ್ಯಾಕರಣ (೨೦೦೮) ಪ್ರಕಟಿಸಿದ್ದಾರೆ. ಕೊರಚ ಬಾಶೆ (ಜಯಪ್ಪ.೨೦೧೬) ಮೊದಲಾದವೂ ಬಂದಿವೆ. ಕರ್ನಾಟಕದ ಬುಡಕಟ್ಟುಗಳ ಮೇಲೆ ಕೆಲವು ಅದ್ಯಯನಗಳು ಇಂಗ್ಲೀಶಿನಲ್ಲಿ ಬಂದಿವೆ. ಈ ಲೇಕನಕ್ಕೆ ಈ ವಿಶಯ ತುಸು ಹೊರಗಿನದಾದರೂ ಇವು ಕನ್ನಡ–ಕರ್ನಾಟಕ ಅದ್ಯಯನಕ್ಕೆ ಪೂರಕ ಆಗುವಂತವು ಆದ್ದರಿಂದ ಇವನ್ನು ಇಲ್ಲಿ ಉಲ್ಲೇಕಿಸಿದೆ. ಬಾರತೀಯ ಬಾಶಾ ಸಂಸ್ತಾನದ ಬಾಶಾ ಕಾಯಿಕೆ ಮತ್ತು ಉಳಿಕೆ ಯೋಜನೆಯ (ಸ್ಪೆಲ್ ಯೋಜನೆ)

ಬಾಗವಾಗಿ ಸಿದ್ದಿ, ಹೊಲಿಯ, ಹಕ್ಕಿ ಪಿಕ್ಕಿ ಮೊದಲಾದ ಬಾಶೆಗಳ ಮೇಲೆ ಕೆಲಸ ನಡೆಯುತ್ತಿದೆ. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಅಳಿವಿನಂಚಿನ ಬಾಶೆಗಳ ಸಂಸ್ತೆಯಲ್ಲಿ ಅರೆಬಾಸೆ, ಇರುಳ, ಕೊರಗ, ಕೊರಚ, ಚೆಂಚು, ಬೆಳಾರಿ, ಬೆಟ್ಟಕುರುಬ, ಬ್ಯಾರಿ, ಸಂಕೇತಿ, ಪಟ್ಟೆಗಾರ ಮೊದಲಾದ ಬಾಶೆಗಳ ವರ್ಣನಾತ್ಮಕ ವ್ಯಾಕರಣಗಳನ್ನು ತಯಾರಿಸಲಾಗಿದೆ (ಅಪ್ರಕಟಿತ). ಚಯಿತ್ರಾ ಪುಟ್ಟಸ್ವಾಮಿಯವರು ಇರುಳ ಬಾಶೆಯ ಡಾಕುಮೆಂಟೆಶನ್ ಕೆಲಸವನ್ನು ಶುರು ಮಾಡಿದ್ದಾರೆ. ಜಿನತ್ ತಬಸ್ಸುಮ್ ಅವರು ಲಂಬಾಣಿ ವಾಕ್ಯರಚನೆಯನ್ನು (೨೦೧೯) ಹೆಚ್ಚು ಸೂಕ್ಶ್ಮವಾಗಿ ಅದ್ಯಯನ ಮಾಡಿದ್ದಾರೆ. ಕೊರವ ಆಕ್ರುತಿಮಾ ಅದ್ಯಯನ (ಅಹ್ಮದ್.೨೦೧೮), ಕೊರಚ ಸಮಾಜೊಬಾಶಿಕ ಅದ್ಯಯನ (೨೦೧೮) ಕೂಡ ಬಂದಿದೆ.

ಬಹುಬಾಶಿಕ ಪರಿಸರದ ನೆಲೆಯಲ್ಲಿ ಅನುವಾದಕ್ಕೆ ಸಂಬಂದಿಸಿದ ವಿವಿದ ಲೇಕನಗಳನ್ನು ಸಿರಾಜ್ ಅಹಮದ್ ಅವರು (೨೦೧೬) ಸಂಪಾದಿಸಿದ್ದಾರೆ. ಕೋಡಗುಂಟಿ ಅವರು ಶ್ರೀದರ್ ಅವರ ಹಲವು ಲೇಕನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ (ಅಪ್ರಕಟಿತ).

ಶಯ್ಲಿವಿಗ್ನಾನ (೨೦೧೦) ಸಿದ್ದಾಂತಗಳನ್ನು ತುಸು ಪರಿಚಯಿಸುವ ಕೆಲಸವನ್ನು ರಾಜಪುರೋಹಿತ ಅವರು ತಮ್ಮ ಶಯ್ಲಿವಿಗ್ನಾನ ಪುಸ್ತಕದಲ್ಲಿ ಮಾಡಿದ್ದಾರೆ. ಅದರಂತೆಯೆ ಆನ್ವಯಿಕ ಅದ್ಯಯನಗಳಾದ ವಚನಗಳ ಶಯ್ಲಿ (೨೦೦೯), ಬೇಂದ್ರೆಯವರ ಕಾವ್ಯಬಾಶೆ (೧೯೯೮) ಮೊದಲಾದ ಪುಸ್ತಕಗಳನ್ನೂ ಮಾಡಿದ್ದಾರೆ. ಸಾಹಿತ್ಯ ಬಾಶೆಯನ್ನು ಪರಿಚಯಿಸುವ ಕೆ.ವಿ. ತಿರುಮಲೇಶ್ ಮೊದಲಾದವರ ಹಲವು ಲೇಕನಗಳು ಬಂದಿವೆ.

ಮನೊಬಾಶಾವಿಗ್ನಾನದಲ್ಲಿ ಪ್ರಕಾಶ ಪಡಕನ್ನಾಯ (೨೦೦೯), ಶ್ಯಾಮಲಾ (೨೦೦೩) ಮೊದಲಾದವರು ಹೆಚ್ಚು ಕೆಲಸಗಳನ್ನು ಮಾಡುತ್ತಿದ್ದಾರೆ. ಹಾಗೆಯೆ ಪ್ರಾಗ್ನಿಕ ಬಾಶಾವಿಗ್ನಾನ ಇತ್ತೀಚೆಗೆ ವ್ಯಾಪಕವಾಗಿ ಬೆಳೆಯುತ್ತಿರುವ ಬಾಶಾವಿಗ್ನಾನದ ಹೊಸದೊಂದು ಶಾಕೆ. ಸಿದ್ದಾಂತಿಕ ಹಾಗೆಯೆ ಹೆಚ್ಚು ಆನ್ವಯಿಕ ಲೇಕನಗಳನ್ನು ಪ್ರಕಟಿಸಿರುವ ಪ್ರಕಾಶ ಅವರು ಇತರರೊಡನೆ ಸೇರಿ ಮಾಡಿರುವ ಹಲವು ಲೇಕನಗಳಲ್ಲಿ (ಮಂಜುಳಾ ಮತ್ತು ಇತರರು, ಕನ್ನಡ ಬಾಶೆಯನ್ನಾಡುವವರನ್ನು ಅದ್ಯಯನಕ್ಕೆ ಒಳಗು ಮಾಡಿದ್ದಾರೆ. ಪ್ರಾಗ್ನಿಕ ಬಾಶಾವಿಗ್ನಾನ ಹಿನ್ನೆಲೆಯಲ್ಲಿ ಕೆಲವು ಒಳ್ಳೆಯ ಸಂಶೋದನೆಗಳು ಬಂದಿವೆ. ನಿರಂಜನ ಉಪ್ಪೂರ (೨೦೧೫), ಸ್ವಾತಿ ಪಿ.ಜಿ. (೨೦೧೬), ಅನಿರ್ಬನ್ ಸರ್ಕಾರ್ (ಪ್ರಗತಿಯಲ್ಲಿ) ಮೊದಲಾದವರನ್ನು ಕಾಣಬಹುದು. ಕಂಪ್ಯೂಟರ್ ಬಾಶಾವಿಗ್ನಾನ ಕ್ಶೇತ್ರಕ್ಕೆ ಸಂಬಂದಿಸಿ ಕೆಲಸಗಳು ವಿವಿದ ಸಂಸ್ತೆಗಳಲ್ಲಿ ನಡೆಯುತ್ತಿವೆ. ಮುಕ್ಯವಾಗಿ ಅಂತಾರಾಶ್ಟ್ರೀಯ ಮಾಹಿತಿ ತಂತ್ರಗ್ನಾನ ಸಂಸ್ತೆ, ಹಯ್ದರಾಬಾದ, ಬಾರತೀಯ ವಿಗ್ನಾನ ಸಂಸ್ತೆ, ಬೆಂಗಳೂರು ಇನ್ನಿತರ ಸಂಸ್ತೆಗಳಲ್ಲಿ ಅದ್ಯಯನಗಳು ನಡೆಯುತ್ತಿವೆ. ಕವಿ ನಾರಾಯಣ ಮೂರ್ತಿಯವರು ಈ ಕ್ಶೇತ್ರದಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಾರೆ (೨೦೧೩ ಮೊ.). ಸಾಂಬಮೂರ್ತಿಯವರು ಬಾಶಾ ತಂತ್ರಗ್ನಾನ ಎಂಬ ಪುಸ್ತಕದಲ್ಲಿ (೨೦೦೯) ಬಾಶೆ ಮತ್ತು ತಂತ್ರಗ್ನಾನಕ್ಕೆ ಸಂಬಂದಿಸಿದ ಕೆಲವು ಲೇಕನಗಳನ್ನು ಸಂಪಾದಿಸಿದ್ದಾರೆ.

ಶಿಕ್ಶಣ ಬಾಶಾವಿಗ್ನಾನ ಕ್ಶೇತ್ರದಲ್ಲಿ ಶಾಲಾಶಿಕ್ಶಣದಲ್ಲಿ ದೇಶಬಾಶೆಗಳು (೨೦೧೪) ಎಂಬ ವಿವಿದ ಲೇಕಕರ ಬರಹಗಳನ್ನು ಕುವೆಂಪು ಬಾಶಾಬಾರತಿ ಪ್ರಕಟಿಸಿದೆ. ಇದರಲ್ಲಿ ತಾಯ್ಮಾತಿನ ಶಿಕ್ಶಣ, ಶಿಕ್ಶಣ ಮಾದ್ಯಮ ಮೊದಲಾದ ವಿಶಯಗಳ ಲೇಕನಗಳು ಇವೆ. ಸ್ಟೂಡೆಂಟ್ ಇಸ್ಲಾಮಿಕ್ ಆರ್ಗನಯಿಜೇಶನ್ ಅವರು ಮಾತ್ರುಬಾಶಾ ಶಿಕ್ಶಣ (೨೦೦೭) ಎಂಬ ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ. ಕೊಡಗುಂಟಿ ಅವರ ಕೆಲವು ಲೇಕನಗಳು ತಾಯ್ಮಾತಿನ ಶಿಕ್ಶಣಕ್ಕೆ ಸಂಬಂದಿಸಿ ಬಂದಿವೆ ಮತ್ತು ಒಂದು ಬರವಣಿಗೆಯನ್ನು ಮಾಡುತ್ತಿದ್ದಾರೆ. ಅಂಬಿಕಾ ಅವರು ಕನ್ನಡ ಶಾಲಾಮಕ್ಕಳ ಬರವಣಿಗೆ ತಪ್ಪುಗಳನ್ನು (೨೦೧೨) ಅದ್ಯಯನ ಮಾಡಿದ್ದಾರೆ. ಉರ್ದು ಬಾಶಿಕರ ಕನ್ನಡ ಕಲಿಕೆ ಸಮಸ್ಯೆಗಳನ್ನು (೨೦೦೯) ಕುರಿತು ಮಹದೇವಯ್ಯ ಅವರು ಒಂದು ಪುಸ್ತಕ ಪ್ರಕಟಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿವಿದ ಬಾಶಿಕರ/ಸಮುದಾಯಗಳ ಕನ್ನಡ ಕಲಿಕೆ ಸಮಸ್ಯೆಗಳ ಕುರಿತು ಪಿಎಚ್.ಡಿ. ಸಂಶೋದನೆಗಳು ನಡೆಯುತ್ತಿವೆ. ರೂಪಾ ಹಾಸನ ಅವರು

ಕನ್ನಡಕ್ಕೆ ಸಂಬಂದಿಸಿದ ಹಲವು ಲೇಕನಗಳನ್ನು ತಾಯ್ನುಡಿಯ ಸಂಕಟಕ್ಕೆ ದನಿಯಾಗಿ ಎಂದು ಸಂಪಾದಿಸಿದ್ದಾರೆ (೨೦೧೫). ಬಾಶಾ ಯೋಜನೆ, ಜನಗಣತಿ ಮಾಹಿತಿ ವಿಶ್ಲೇಶಣೆ ಸಂಬಂದಿಸಿ ಬ. ಮಲ್ಲಿಕಾರ್ಜುನ ಅವರು ಕೆಲವು ಲೇಖನಗಳನ್ನು ಮಾಡಿದ್ದಾರೆ. ಇದರಲ್ಲಿ ಕರ್ನಾಟಕದ ಸಾಂಕಿಕ ಮಾಹಿತಿ ವಿಶ್ಲೇಶಣೆಯೂ ಸೇರಿದೆ. ಮಲ್ಲಿಕಾರ್ಜುನ್ ಅವರು ಕೂಡ ಇಂತದೆ ಲೇಕನವೊಂದನ್ನು (೨೦೧೯) ಮಾಡಿದ್ದಾರೆ.

ಲಿಪಿ ಬಗೆಗೆ ಶಂಕರಬಟ್ಟರ ಮಹತ್ವದ ಪುಸ್ತಕ ಕನ್ನಡ ಬರಹವನ್ನು ಸರಿಪಡಿಸೋಣ (೨೦೦೫) ಎಂಬುದು ತುಸು ಮೊದಲು ಪ್ರಕಟವಾಗಿದ್ದಿತು. ಹಲವು ಕಡೆಗಳಲ್ಲಿ ಲಿಪಿ ಬದಲಾವಣೆ ಬಗೆಗೆ ಮತ್ತು ಅದನ್ನು ಬದಲಾವಣೆಯನ್ನು ವಿರೋದಿಸಿ ಕೆಲವು ಲೇಕನಗಳೂ ಎರಡು ಸಣ್ಣ ಪುಸ್ತಕಗಳೂ ಬಂದಿವೆ (ಶಾಸ್ತ್ರಿ ಮತ್ತು ಲಕ್ಶ್ಮಣರಾವ್.೨೦೧೦). ಶೆಟ್ಟರ್ ಅವರು ಹಳಗನ್ನಡ ಲಿಪಿಕಾರ ಲಿಪಿ ವ್ಯವಸಾಯ (೨೦೧೨) ಪುಸ್ತಕದಲ್ಲಿ ಬಾರತದಲ್ಲಿ ಲಿಪಿ ಬೆಳೆದು ಬಂದ ಮತ್ತು ಕನ್ನಡ ಲಿಪಿಯ ಬೆಳವಣಿಗೆ ಬಗೆಗೆ ಅತ್ಯಂತ ಸ್ತೂಲವಾದ ಚರ್ಚೆಯನ್ನು ಮಾಡಿದ್ದಾರೆ. ಮೋಡಿ ಲಿಪಿ ಕುರಿತು ಸಂಗಮೇಶ ಕಲ್ಯಾಣಿ (೨೦೧೬) ಮತ್ತು ವೀರೇಶ ಬಡಿಗೇರ (೨೦೧೧) ಮಾಡಿದ್ದಾರೆ.

ಸಂಸ್ಕ್ರುತ ವ್ಯಾಕರಣ ಅದ್ಯಯನದ ಆಸಕ್ತಿಯೂ ತುಸು ಹೆಚ್ಚಿರುವುದು ಕಂಡುಬರುತ್ತದೆ. ವ್ಯಾಕರಣ ಶಾಸ್ತ್ರದ ಪರಿವಾರ (೨೦೦೨) ಹೆಸರಿನಲ್ಲಿ ತುಸು ಹಿಂದೆ ರಂಗನಾತ ಶರ್ಮಾ ಅವರು ಸಂಸ್ಕ್ರುತ ವ್ಯಾಕರಣ ಪರಂಪರೆಯನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದರು. ಇಂತದೆ ಇನ್ನೊಂದು ಪ್ರಯತ್ನ ಸಂಸ್ಕ್ರುತ ವ್ಯಾಕರಣ ಶಾಸ್ತ್ರದ ಸಂಕ್ಶಿಪ್ತ ಇತಿಹಾಸ (೨೦೧೪). ಸಾಮಾನ್ಯ ನೆಲೆಯಲ್ಲಿ ಮತ್ತು ಒಟ್ಟು ಸಂಸ್ಕ್ರುತ ವ್ಯಾಕರಣ ಪರಂಪರೆಯನ್ನು ಪರಿಚಯಿಸುವ ಕೆಲವು ಪ್ರಯತ್ನಗಳು ಬಂದಿವೆ.

ನೋಮ್ ಚಾಮಸ್ಕಿ ಜಗತ್ತಿನ ಬಾಶಾವಿಗ್ನಾನವನ್ನು ಹಲವು ಆಯಾಮಗಳಲ್ಲಿ ಆವರಿಸಿಕೊಂಡಿದ್ದರೂ ಕನ್ನಡಕ್ಕೆ ಅವನು ಹೆಚ್ಚು ಅಪರಿಚಿತ. ಚಾಮಸ್ಕಿಯ ಕೆಲವು ಸಿದ್ದಾಂತಗಳನ್ನು ಪರಿಚಯಿಸುವ ಕೆಲವು ಅನುವಾದಗಳನ್ನು ಒಳಗೊಂಡ ಮನುಕುಲದ ಮಾತುಗಾರ ನೋಮ್ ಚಾಮಸ್ಕಿ (೨೦೦೧) ಹೆಸರಿನ ಪುಸ್ತಕ ಪ್ರಕಟವಾಗಿದ್ದಿತು. ಅದರ ಹೊರತಾಗಿ ಹೆಚ್ಚಿನದೇನು ಬಂದಿರಲಿಲ್ಲ. ಕೆ.ವಿ. ನಾರಾಯಣ ಅವರು ಚಾಮಸ್ಕಿಯೊಡನೆ ಎರಡು ಹೆಜ್ಜೆ (೨೦೧೭) ಹೆಸರಿನಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿದರು. ಅದೇ ರೀತಿ ರಾಜಪುರೋಹಿತ ಅವರೂ ಒಂದು ಪುಸ್ತಕವನ್ನು ಬರೆದಿದ್ದಾರೆ (ಅಪ್ರಕಟಿತ).

ಇವುಗಳ ಜೊತೆಗೆ ಕೆಲವು ವಿಶೇಶವಾದ ಇಲ್ಲವೆ ಬಿನ್ನವಾದ ಹಾಗೆಯೆ ಮಹತ್ವದ್ದೆನಬಹುದಾದ ಪುಸ್ತಕಗಳೂ ಪ್ರಕಟವಾಗಿವೆ. ತಮಿಳಿನ ತೊಲ್ಕಾಪ್ಪಿಯಂ ಇದನ್ನು ಜಯಲಲಿತಾ ಅವರು ಅನುವಾದಿಸಿದ್ದಾರೆ (೨೦೧೭). ತತ್ವಗ್ನಾನ ಹಿನ್ನೆಲೆಯಲ್ಲಿ ಜಿ.ಎಂ. ಹೆಗಡೆ ಅವರು ಬಾರತೀಯ ದರ್ಶನಗಳು ಮತ್ತು ಬಾಶೆ (೨೦೧೨) ಎಂಬ ಪುಸ್ತಕವನ್ನು ಮಾಡಿದರು. ಅದರೊಟ್ಟಿಗೆ ಇಂಗ್ಲೀಶಿನ ಬಿಮನ್‌ಕ್ರಿಶ್ಣ ಮತಿಲಾಲ್ ಅವರ The word and the World ಪುಸ್ತಕವನ್ನು ಶಬ್ದ ಮತ್ತು ಜಗತ್ತು (೨೦೧೦) ಎಂದು ಅನುವಾದಿಸಿದರು. ರಾಜೀವ್ ಮಲ್ಹೋತ್ರ ಅವರ The Battle for Sanskrit ಇದನ್ನು ವಿ. ಕ್ರಿಶ್ಣ ಸಂಸ್ಕ್ರುತಕ್ಕಾಗಿ ಹೋರಾಟ (೨೦೧೭) ಎಂದು ಕನ್ನಡಿಸಿದ್ದಾರೆ. ರಹಮತ್ ತರಿಕೆರೆ ಅವರು ಇರ್ಮಾತಿನ ಪಟ್ಯಗಳನ್ನು ಇಟ್ಟುಕೊಂಡು ನುಡಿಸಂಕರ ಸಾಹಿತ್ಯ (೨೦೧೨) ಎಂಬ ಪುಸ್ತಕವನ್ನು ಮಾಡಿದ್ದಾರೆ.

ಈ ಅವದಿಯಲ್ಲಿ ಹಲವಾರು ಸಂಪಾದನೆಗಳು ಪ್ರಕಟವಾಗಿವೆ. ಕನ್ನಡ ಬಾಶಾವಿಗ್ನಾನದ ಹಲವಾರು ಮಹತ್ವದ ಲೇಕನಗಳು ಇಂತಾ ಸಂಪಾದನೆಗಳಲ್ಲಿ ಬರುತ್ತಿವೆ. ಇವು ಬಾಶಾವಿಗ್ನಾನದ ಹಲವಾರು ಒಳಶಾಕೆಗಳಿಗೆ ಸೇರುವ ಲೇಕನಗಳನ್ನು ಒಳಗೊಂಡಿವೆ. ಇವುಗಳಲ್ಲಿ ಪ್ರದಾನವಾದ ಕೆಲವನ್ನು ಇಲ್ಲಿ ಪರಿಚಯಿಸಿದೆ. ಕೆ.ವಿ. ನಾರಾಯಣ ಅವರು ತಮ್ಮ ಕಳೆದ ಕೆಲವು ದಶಕಗಳ ಎಲ್ಲ ಬರಹಗಳನ್ನು ತೊಂಡುಮೇವು ಹೆಸರಿನ ಸಂಪುಟಗಳಲ್ಲಿ ಒಟ್ಟಿಗೆ ಪ್ರಕಟಿಸಿದರು (೨೦೦೯). ಇದರಲ್ಲಿ ಸುಮಾರು ನಾಲ್ಕು ಸಂಪುಟಗಳು ಬಾಶಾವಿಗ್ನಾನದ

ಲೇಕನಗಳು. ಇದರಲ್ಲಿ ಬಿಡಿಬಿಡಿ ಲೇಕನಗಳು, ಮುನ್ನುಡಿ ಮೊದಲಾದವು ಸೇರಿಕೊಂಡಿವೆ. ಅವರ ಸಣ್ಣಸಣ್ಣ ಬರಹಗಳನ್ನು ಒಟ್ಟಿಗೆ ಸೇರಿಸಿ ಎಂಟನೆ ಸಂಪುಟ ಮಾಡಿದ್ದಾರೆ. ವಿ. ಶಿವಾನಂದ (೨೦೧೨) ಬಾಶಾವಿಗ್ನಾನದ ಲೇಕನಗಳನ್ನೂ ಹೀಗೆ ಸಂಗ್ರಹಿಸಿ ಪ್ರಕಟಿಸಿದೆ. ಶ್ರೀಕ್ರಿಶ್ಣಬಟ್ (೨೦೦೯), ಉಪ್ಪಂಗಳ (೨೦೧೧), ರಾಜಪುರೋಹಿತ (೨೦೦೫, ೨೦೦೯) ಮೊದಲಾದವರು ಕಳೆದ ಕೆಲವು ದಶಕಗಳಲ್ಲಿ ವಿವಿದೆಡೆ ಪ್ರಕಟವಾದ ಇಲ್ಲವೆ ಪ್ರಸ್ತುತಪಡಿಸಿದ ತಮ್ಮ ಲೇಕನಗಳನ್ನು ಸೇರಿಸಿ ಸಂಪುಟಗಳನ್ನು ತಂದರು. ತಿರುಮಲೇಶ್ ಅವರು ತುಸು ಮೊದಲು ನಮ್ಮ ಕನ್ನಡ (೨೦೦೬) ಪ್ರಕಟಿಸಿದ್ದರು. ಮುಂದುವರಿಕೆಯಾಗಿ ಇನ್ನಶ್ಟು ಕನ್ನಡ (೨೦೧೧), ಸಮ್ರುದ್ದ ಕನ್ನಡ (೨೦೧೩) ಪುಸ್ತಕಗಳನ್ನು ತಂದಿದ್ದು ಕನ್ನಡದ ರಚನೆಯನ್ನು ಕುರಿತಿರುವ ಹಲವು ಲೇಕನಗಳನ್ನು ಒಳಗೊಂಡಿವೆ. ಕೋಡಗುಂಟಿಯವರ ಹಲವು ಸಂಪುಟಗಳು (೨೦೦೭, ೨೦೧೧, ೨೦೧೭, ೨೦೧೯) ಬಂದಿವೆ. ಓ.ಎಲ್. ನಾಗಬೂಶಣ ಸ್ವಾಮಿ (೨೦೧೩) ಮೊದಲಾಗಿ ಇನ್ನು ಕೆಲವರು ಕಳೆದ ಕೆಲವು ವರುಶಗಳಲ್ಲಿನ ತಮ್ಮ ಲೇಕನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಡಿ. ಲಿಂಗಯ್ಯ ಮತ್ತು ಚಕ್ಕೆರೆ ಶಿವಶಂಕರ್ (೨೦೧೦) ಅವರು ಸ್ತಳನಾಮಗಳ ಅದ್ಯಯನ ಎಂಬ ಹಲವು ಲೇಕನಗಳ ಸಂಪಾದನೆಯನ್ನು ತಂದಿದ್ದಾರೆ.

ಪಿ. ಮಹದೇವಯ್ಯ ಅವರು ದಲಿತರ ಬಾಶೆ (೨೦೦೬) ಹೆಸರಿನ ಪುಸ್ತಕವೊಂದನ್ನು ಸಂಪಾದಿಸಿ ಪ್ರಕಟಿಸಿದ್ದರು. ಇದರಲ್ಲಿ ಬಿನ್ನ ಪ್ರದೇಶಗಳ ದಲಿತರ ಬಾಶೆಯನ್ನು ವರ್ಣನಾತ್ಮಕವಾಗಿ ಪರಿಚಯಿಸುವ ಹಲವು ಲೇಕನಗಳು ಇವೆ. ರೇಣುಕಾ ಕೋಡಗುಂಟಿ ಅವರು ಕನ್ನಡ ಬಾಶಾವಿಗ್ನಾನ ಸಂಶೋದನೆ ಇಂದು (೨೦೧೧) ಎಂಬ ಪುಸ್ತಕವೊಂದನ್ನು ಸಂಪಾದಿಸಿದ್ದಾರೆ. ಮಲ್ಲಿಕಾರ್ಜುನ ಮೇಟಿ ಮೊದಲಾದವರು ಸಂಪಾದಿಸಿರುವ ಕನ್ನಡ ನುಡಿಯ ಆಕರ ಕೋಶ (೨೦೧೭) ಎಂಬುದು ಕನ್ನಡ ಬಾಶೆಯ ರಚನೆಯನ್ನು ವಿಸ್ತಾರನೆಲೆಯಲ್ಲಿ ಪರಿಚಯಿಸುವ ಹಲವರ ಹಲವು ಲೇಕನಗಳನ್ನು ಒಳಗೊಂಡಿದ್ದು ಬಹು ವಿಸ್ತ್ರುತವಾಗಿದೆ.

ಇವುಗಳ ಜೊತೆಗೆ ಕೆಲವು ಮಹತ್ವದ ಮರುಮುದ್ರಣಗಳೂ ಈ ಕಾಲಗಟ್ಟದಾಗ ಬಂದವು. ಅವುಗಳಲ್ಲಿ ಪ್ರಮುಕವಾದ ಕೆಲವನ್ನು ಇಲ್ಲಿ ಮಾತನಾಡಬಹುದು. ಎಸ್.ಎನ್. ಶ್ರೀದರ್ ಅವರ ಅತ್ಯಂತ ಮಹತ್ವದ ವ್ಯಾಕರಣ Kannada (೧೯೯೦). ಇದು ಲಿಂಗ್ವಾ ಪ್ರಶ್ನಾವಳಿ (https://www.eva.mpg.de/lingua/tools-at-lingboard/questionnaire/linguaQ.php) ಆದರಿತ ಜಗತ್ತಿನ ಪ್ರದಾನ ಬಾಶೆಗಳ ವರ್ಣನಾತ್ಮಕ ವ್ಯಾಕರಣ ಸರಣಿಯ ಮೊದಲ ಮತ್ತು ಮಹತ್ವದ ಪುಸ್ತಕ. ಜಗತ್ತಿನಾದ್ಯಂತ ಈ ಪುಸ್ತಕ ಮನ್ನಣೆಯನ್ನು ಪಡೆದುಕೊಂಡಿದೆ. ಇದರ ಬಾರತೀಯ ಪ್ರಕಟಣೆ ೨೦೦೮ರಲ್ಲಿ ಆಯಿತು. ಅದರಂತೆ ಹಲವರು ಕನ್ನಡಕ್ಕೆ ಅನುವಾದಿಸಿದ ಶ್ರೀದರ್ ಅವರ ಕೆಲವು ಲೇಕನಗಳ ಸಂಕಲನ ಇಂದಿನ ಕನ್ನಡ ರಚನೆ ಮತ್ತು ಬಳಕೆ (೧೯೯೫) ಎಂಬ ಪುಸ್ತಕ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದ್ದಿತು. ಇದು ಈಗ ಮತ್ತೆ ಮರುಮುದ್ರಣ ಕಂಡಿದೆ (೨೦೦೯). ಶೆಲ್ಡನ್ ಪೊಲಾಕ್ ಅವರ ಲೇಕನಗಳ ಅನುವಾದವಾದ ವಿಶ್ವಾತ್ಮಕ ದೇಶಬಾಶೆ (ಮೊಮು. ೨೦೦೩, ಮಮು. ೨೦೧೫) ನಡುಗನ್ನಡಕ್ಕೆ ಸಂಬಂದಿಸಿದ ಸಾಂಪ್ರದಾಯಿಕವಾದರೂ ಒಂದೆ ಪುಸ್ತಕ ಮಾನ್ವಿ ನರಸಿಂಗ ರಾವ್ ಅವರದು (೨೦೧೧) ಮರುಮುದ್ರಣ ಕಂಡಿವೆ. ಹಲವು ವ್ಯಾಕರಣಗಳು ಮರುಮುದ್ರಣ ಕಂಡಿವೆ. ವಿಲಿಯಂ ಕೇರಿ (ಮೊಮು. ೧೮೧೭. ಮಮು. ೨೦೧೮) ಪಂಜೆ ಮಂಗೇಶರಾಯ (ಮೊಮು.೦೦೦೦, ಮಮು.೦೦೦೦), ಬಿ. ಮಲ್ಲಪ್ಪ (ಮೊಮು. ೧೯೧೮, ಮಮು.೨೦೧೧), ಕುಶಾಲಪ್ಪ ಗವುಡ (೨೦೦೭,೨೦೧೪) ಮೊದಲಾದವು. ತೀ.ನಂ. ಶ್ರೀಕಂಟಯ್ಯನವರ ಮದ್ಯಮ ವ್ಯಾಕರಣ ನಿರಂತರ ಮರುಮುದ್ರಣವನ್ನು ಕಾಣುತ್ತಿದೆ. ಶಬ್ದಮಣಿದರ್ಪಣದ ವಿವಿದ ಪ್ರಕಟಣೆಗಳು ನಿರಂತರ ಮರುಮುದ್ರಣ ಆಗುತ್ತಿವೆ.

ಹಲವು ನಿಗಂಟುಗಳು ಈ ಕಾಲದಲ್ಲಿ ಪ್ರಕಟವಾಗಿವೆ. ಇದರಲ್ಲಿ ಒರ್ಮಾತಿನ (ಏಕಬಾಶಿಕ), ಇರ್ಮಾತಿನ (ದ್ವಿಬಾಶಿಕ), ಪಲಮಾತಿನ (ಬಹುಬಾಶೀಕ) ಮತ್ತು ಹಲವು ವಿಶಿಶ್ಟ ನಿಗಂಟುಗಳು ಬಂದಿವೆ.

ಕನ್ನಡ ಸಾಹಿತ್ಯ ಪರಿಷತ್ತು ಬಹುಹಿಂದೆ ಮಾಡಿದ್ದ ಸಂಕ್ಷಿಪ್ತ ಕನ್ನಡ ನಿಗಂಟನ್ನು ವಿಸ್ತರಿಸಿ ಕನ್ನಡ–ಇಂಗ್ಲೀಶ್ ನಿಗಂಟನ್ನು (೨೦೧೧) ಈಗ ಪ್ರಕಟಿಸಿದೆ. ಪ್ರಶಾಂತ್ ಮಾಡ್ತ ಅವರು ಕನ್ನಡ ಪದನಿದಿ ಎಂಬ ಸಮಾನಾರ್ತಕ ಪದಗಳ ಕೋಶವೊಂದನ್ನು ಮಾಡಿದ್ದಾರೆ (೨೦೦೭). ಸಿ.ಎಸ್. ರಾಮಚಂದ್ರ ಅವರು ಕನ್ನಡದಲ್ಲಿ ಅನ್ಯಬಾಶಾ ಪದನಿಶ್ಪತ್ತಿ ಕೋಶ ಎಂಬ ಅಪರೂಪದ ನಿಗಂಟೊಂದನ್ನು ಮಾಡಿದ್ದಾರೆ (೨೦೧೨). ಹಾಗೆಯೆ ಕನ್ನಡ–ಇಂಗ್ಲೀಶ್ ಪದೋತ್ಪತ್ತಿ ಕೋಶ ಎಂಬ ಬ್ರುಹತ್ತಾದ ನಿಗಂಟನ್ನು ಯು. ಉಚಿಡಾ ಮತ್ತು ಬಿ.ಬಿ. ರಾಜಪುರೋಹಿತ ಅವರು ಸಿದ್ದಪಡಿಸಿದ್ದಾರೆ (೨೦೧೩).

ಕ್ರಿಶ್ಣ ಅವರ ಕನ್ನಡ–ಕನ್ನಡ ನಿಗಂಟು ಮೂರು ಸಂಪುಟಗಳಲ್ಲಿ ಪ್ರಕಟವಾಯಿತು. ಬಸವಾರಾದ್ಯ (೨೦೦೫) ಮತ್ತು ಪಿ.ವಿ. ನಾರಾಯಣ (೨೦೦೭) ಅವರು ಹಳೆಗನ್ನಡ ನಿಗಂಟುಗಳನ್ನು ಪ್ರಕಟಿಸಿದ್ದಾರೆ. ಶ. ಶೆಟ್ಟರ್ ಅವರು ಮೊದಲ ಸಹಸ್ರಮಾನದ ಕನ್ನಡ ಶಾಸನಗಳು (ಅಪ್ರಕಟಿತ), ಕವಿರಾಜಮಾರ್ಗ (ಅಪ್ರಕಟಿತ), ಇತರ ಮೊದಲ ಸಹಸ್ರಮಾನದ ಸಾಹಿತ್ಯ ಕ್ರುತಿಗಳ ನಿಗಂಟನ್ನು ತಯಾರಿಸುತ್ತಿದ್ದಾರೆ. ಮಹೇಂದ್ರ ಹರಿಹರ ಅವರು ಕವಿರಾಜಮಾರ್ಗದ ಬಾಶೆ ಮತ್ತು ಪದಸೂಚಿ (೨೦೧೨) ಪ್ರಕಟಿಸಿದ್ದಾರೆ ಹಾಗೆಯೆ ರಾಜಪ್ಪ ದಳವಾಯಿ ಅವರೂ ಕವಿರಾಜಮಾರ್ಗ ನಿಗಂಟು (ಅಪ್ರಕಟಿತ) ತಯಾರಿಸಿದ್ದಾರೆ. ಬಸವರಾಜ ಕೋಡಗುಂಟಿ ಅವರು ಕನ್ನಡದ ಆರಂಬದ ಶಾಸನಗಳ ನಿಗಂಟನ್ನು ತಯಾರಿಸುತ್ತಿದ್ದಾರೆ. ಸಂಗಮೇಶ ಸವದತ್ತಿಮಟ ವಚನಗಳ ವರ್ಣನಾತ್ಮಕ ಪದಕೋಶ (೨೦೦೯), ಮಡಿವಾಳ ಸ್ವಾಮಿ ಮತ್ತು ಆರ್.ಎಸ್. ಗುಂಜಾಳ ಅವರು ಬಸವಣ್ಣನವರ ವಚನಗಳ ಪದ ಪ್ರಯೋಗ ಕೋಶ (೨೦೧೦) ಶ್ರೀನಿವಾಸ ಹಾವನೂರ ಮತ್ತು ವಿ. ಕ್ರಿಶ್ಣ ಅವರು ಕನಕದಾಸರ ಕೀರ್ತನೆಗಳ ಪದ ಪ್ರಯೋಗ ಕೋಶ (೨೦೧೦), ರಾಜಪುರೋಹಿತ ಅವರು ಬೇಂದ್ರೆ ನಿಗಂಟು (೨೦೧೧), ನುಡಿಕಟ್ಟು ಕೋಶ (೨೦೧೧), ಜಿ. ಕ್ರಿಶ್ಣಪ್ಪ ಅವರು ಬೇಂದ್ರೆ ಕಾವ್ಯ ಪದನಿರುಕ್ತ (೨೦೧೮), ನಾವಡ ಅವರು ಗೋವಿಂದ ಪಯ್ ನಿಗಂಟು (೨೦೧೧), ಕೋಡಗುಂಟಿ ಶಬ್ದಮಣಿದರ್ಪಣದ ನಿಗಂಟನ್ನು (ಅಪ್ರಕಟಿತ) ತಯಾರಿಸಿದ್ದಾರೆ. ಕನ್ನಡ ಒಳನುಡಿಗಳಿಗೆ ಸಂಬಂದಿಸಿದ ಹಲವು ನಿಗಂಟುಗಳೂ ಬಂದಿವೆ. ಕನ್ನಡ ಒಳನುಡಿ ಕೋಶ ಎಂಬ ವಿಶಿಶ್ಟ ಯೋಜನೆಯೊಂದನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಬಾಶಾದ್ಯಯನ ವಿಬಾಗ ಮಾಡಿದೆ. ಹಲವು ಕನ್ನಡ ಒಳನುಡಿಗಳನ್ನು ಒಳಗೊಂಡ ಬ್ರುಹತ್ ನಿಗಂಟು ಇದಾಗಿದೆ. ಇತರ ಕನ್ನಡ ಒಳನುಡಿಗಳ ನಿಗಂಟು ತಯಾರಿಸುವ ಕೆಲಸವೂ ಈ ಕಾಲಗಟ್ಟದಲ್ಲಿ ನಡೆಯಿತು. ಬೀದರ್ ಕನ್ನಡ ನಿಗಂಟು (೨೦೧೦), ಅರೆಬಾಸೆ–ಕನ್ನಡ ನಿಗಂಟು (೦೦೦೦), ಮಿಸ್ಕಿ ಕನ್ನಡ – ಕನ್ನಡ ನಿಗಂಟು (ಪ್ರಗತಿಯಲ್ಲಿ) ಮೊದಲಾದವು.

ಕೆಲವು ಇರ್ಮಾತಿನ ನಿಗಂಟುಗಳೂ ಬಂದಿವೆ. ಶಂಕರಬಟ್ಟರು ಇಂಗ್ಲೀಶ್ ಪದಗಳಿಗೆ ಕನ್ನಡದ್ದೇ ಪದಗಳು (೨೦೦೭) ಮತ್ತು ಇತರರೊಂದಿಗೆ ಸಂಸ್ಕ್ರುತ–ಕನ್ನಡ ಪದನೆರಕೆ (೨೦೧೫ಇ), ಸಂಸ್ಕ್ರುತ ಪದಗಳಿಗೆ ಕನ್ನಡದ್ದೆ ಪದಗಳು (೨೦೧೭ಈ) ಎಂಬ ಅಪರೂಪದ ನಿಗಂಟುಗಳನ್ನು ತಯಾರಿಸಿದರು. ತಮಿಳು–ಕನ್ನಡ (೨೦೦೬), ತೆಲುಗು–ಕನ್ನಡ (೨೦೦೫), ಕನ್ನಡ–ತುಳು (೨೦೧೧), ಮೊದಲಾದ ನಿಗಂಟುಗಳು ಬಂದಿವೆ. ಇತ್ತೀಚೆಗೆ ಪ್ರಾಕ್ರುತ–ಕನ್ನಡ ನಿಗಂಟು (೨೦೧೯) ಬಂದಿದೆ. ಪಲಮಾತಿನ ಕೆಲವು ನಿಗಂಟುಗಳೂ ಬಂದಿವೆ. ಮಲಯಾಳಂ–ಇಂಗ್ಲೀಶ್–ಕನ್ನಡ ಮತ್ತು ಕನ್ನಡ–ಇಂಗ್ಲೀಶ್–ಮಲಯಾಳಂ (ನಾಯರ್. ೨೦೧೧).

ಕನ್ನಡ ವಿಶ್ವವಿದ್ಯಾಲಯದ ಲಂಬಾಣಿ ಅದ್ಯಯನ ಕೇಂದ್ರದ ಬಾಗವಾಗಿ ಲಂಬಾಣಿ ಅದ್ಯಯನಗಳು ನಡೆಯುತ್ತಿವೆ. ಲಂಬಾಣಿ–ಕನ್ನಡ ನಿಗಂಟಿನ ತಯಾರಿಕೆ ನಡೆಯುತ್ತಿದೆ. ಮಯ್ಸೂರಿನ ಬುಡಕಟ್ಟು ಅದ್ಯಯನ ಸಂಸ್ತೆಯಿಂದ ಡುಂಗ್ರಿ ಗರಾಸಿಯಾ–ಕನ್ನಡ, ಹಕ್ಕಿಪಿಕ್ಕಿ–ಕನ್ನಡ ಮೊದಲಾದ ಕೆಲವು ಬುಡಕಟ್ಟು ಬಾಶೆಗಳ ನಿಗಂಟುಗಳು ಬಂದಿವೆ. ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಅಳಿವಿನಂಚಿನ ಬಾಶೆಗಳ ಕೇಂದ್ರವು ಕೆಲವು ಆಯ್ದ ಅಳಿವಿನಂಚಿನಲ್ಲಿರುವ ಬಾಶೆಗಳ ಪಲಮಾತಿನ ನಿಗಂಟನ್ನು ತಯಾರಿಸಿದೆ (ಅಪ್ರಕಟಿತ).

ಕನ್ನಡ ಬಾಶಾವಿಗ್ನಾನ ಪಾರಿಬಾಶಿಕ ಪದಗಳ ವಿವರಣಾತ್ಮಕ ನಿಗಂಟೊಂದನ್ನು ಸಿ.ಎಸ್. ರಾಮಚಂದ್ರ ಮತ್ತು ಕೆ.ಎಸ್. ನಾಗರಾಜ ಅವರು ಪ್ರಕಟಿಸಿದರು (೨೦೧೧). ಇದನ್ನು ತುಸು ಬದಲಾವಣೆಗಳೊಂದಿಗೆ ಆನಂತರ ಕೆ.ಎಸ್. ನಾಗರಾಜ ಅವರು ಮತ್ತೆ ಪ್ರಕಟಿಸಿದರು (೨೦೧೬). ಇಂಗ್ಲೀಶ್–ಕನ್ನಡ ನುಡಿಗಟ್ಟು ಕೋಶ (೨೦೧೨) ಬಂದಿದೆ.

ಕ್ಲಾಸಿಕಲ್ ಮಾನ್ಯತೆಯನ್ನು ಪಡೆದುಕೊಂಡದ್ದರ ಬಗೆಗೆ ಕೆಲವು ಪುಸ್ತಕಗಳು, ಅದನ್ನು ನೆಲೆಯಾಗಿಟ್ಟುಕೊಂಡು ಕೆಲವು ಸಂಪಾದನೆಗಳು ಮೊದಲಾದವು ಬಂದಿವೆ.

ಕಳೆದ ಸುಮಾರು ಹತ್ತು ವರುಶಗಳು ಕನ್ನಡ ಬಾಶಾದ್ಯಯನಕ್ಕೆ ಮತ್ತು ಕರ್ನಾಟಕದ ಬಾಶಾದ್ಯಯನ ಚಟುವಟಿಕೆಗಳಿಗೆ ಅತ್ಯಂತ ಮಹತ್ವದ ವರುಶಗಳು. ಮಯ್ಸೂರಿನ ಬಾರತೀಯ ಬಾಶಾ ಸಂಸ್ತಾನದೊಳಗೆ ಸ್ತಾಪಿತವಾಗಿದ್ದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅದ್ಯಯನ ಕೇಂದ್ರ ಈ ವರುಶಗಳಲ್ಲಿ ಸಕ್ರಿಯವಾಗಿದ್ದು ಹಲವು ಚಟುವಟಿಕೆಗಳನ್ನು ಮಾಡುತ್ತಿದೆ. ಕೆಲವು ಸಂಶೋದನಾ ಯೋಜನೆಗಳನ್ನೂ ಮಾಡುತ್ತಿದೆ. ಇದು ಸ್ವತಂತ್ರ ಸಂಸ್ತೆಯಾಗಿ ರೂಪುಗೊಳ್ಳುತ್ತಿದೆ. ಯುಜಿಸಿ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಕ್ಲಾಸಿಕಲ್ ಬಾಶೆಗಳ ಅದ್ಯಯನ ಸಂಸ್ತೆಗಳನ್ನು ಶುರು ಮಾಡುವುದಕ್ಕೆ ಅನುವು ಮಾಡಿಕೊಟ್ಟಿದೆ. ಅದರಡಿಯಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ ಇಲ್ಲಿ ಶಾಸ್ತ್ರೀಯ ಕನ್ನಡ ಅದ್ಯಯನ ಸಂಸ್ತೆ ಶುರು ಆಗಿದೆ. ಇದೆ ವಿಶ್ವವಿದ್ಯಾಲಯದಲ್ಲಿ ಯುಜಿಸಿಯ ಅಳಿವಿನಂಚಿನ ಬಾಶೆಗಳ ಮೇಲಿನ ಕೆಲಸಗಳಿಗಾಗಿ ಶುರು ಮಾಡಿದ ಯೋಜನೆಯಡಿಯಲ್ಲಿ ಕರ್ನಾಟಕದ ಅಳಿವಿನಂಚಿನ ಬಾಶೆಗಳ ಮತ್ತು ಬಾರತದ ಕರಾವಳಿ ಬಾಶೆಗಳ ಅದ್ಯಯನ ಸಂಸ್ತೆ ಶುರು ಆಗಿದೆ. ಕರ್ನಾಟಕ ಸರಕಾರದ ಅನುದಾನದಿಂದ ಕನ್ನಡ ವಿಶ್ವವಿದ್ಯಾಲಯದಲ್ಲಿ ಲಂಬಾಣಿ ಬಾಶಾದ್ಯಯನ ಕೇಂದ್ರ ಆರಂಬವಾಗಿದೆ. ಈಗಿನ ಆಂದ್ರಪ್ರದೇಶದ ಕುಪ್ಪಂನಲ್ಲಿ ಆರಂಬವಾಗಿದ್ದ ದ್ರಾವಿಡ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಬಾಗ, ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅದ್ಯಯನ ಪೀಟ, ಇತ್ತೀಚೆಗೆ ಆರಂಬವಾದ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ, ಕಾಸರಗೋಡಿನಲ್ಲಿ ಕನ್ನಡ ವಿಬಾಗ ಆರಂಬವಾಗಿವೆ. ಕರ್ನಾಟಕ ಸರಕಾರದ ಬುಡಕಟ್ಟು ಅದ್ಯಯನ ಸಂಸ್ತೆ, ಮಯ್ಸೂರು ಬುಡಕಟ್ಟುಗಳ ಸಾಮಾಜಿಕ, ಆರ್ತಿಕ ಕೆಲಸಗಳ ಜೊತೆಗೆ ಬಾಶಿಕ ಅದ್ಯಯನಗಳನ್ನೂ ಪ್ರೋತ್ಸಾಹಿಸುತ್ತಿದೆ.

ಅನುವಾದ – Translation

ಅರೋರಾ ಲಕ್ಷ್ಮಿ ನಾರಾಯಣ. ೧೯೯೨. ಭಾಷಾಂತರ: ಇತ್ತೀಚಿನ ಪ್ರವೃತ್ತಿಗಳು. *ಮಾನ*. ಹಾ.ಮಾ. ನಾಯಕ ಸಂಬಾವನಾ ಗ್ರಂಥ. ಸಂ. ಎಸ್.ಎಲ್. ಬೈರಪ್ಪ.

ಕಾರ್ಲೋಸ್ ಎಸ್. ಬಹುಭಾಷಿಕತ್ವ ಮತ್ತು ಭಾಷಾಂತರ: ರಾಷ್ಟ್ರೀಯತೆ ಹಾಗೂ ಸಂಸ್ಕೃತಿಗಳ ಮರುರೂಪಣೆ. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 52–64.

ಕೃಷ್ಣಕುಮಾರ ಸಿ. ಪಿ, ಕನ್ನಡದಲ್ಲಿ ಭಾಷಾಂತರಗಳು. ಕ.ಲಾ.ಪ ಶರತ್ ಪ್ರಕಾಶನ ಮೈಸೂರು. 1972, 54–63

ಕೃಷ್ಣಕುಮಾರ್ ಸಿ.ಪಿ.–ಅನುವಾದಗಳು. (ತಲೆತಿರುಕ ಯೋಧ–ದೊರೆಮಗಳು–ಇರಾನಿನ ವೀರರು) ಬ್ರಹ್ಮಗಿರಿ. ಪೂರ್ವೋಕ್ತ. ಪು. 232–242

ಕೆದಿಲಾಯ ಎ. ಶಂಕರ್. (ಅನುವಾದ). ೧೯೭೩, Sabdamanidarpana. *A.O.R.* ಪು. ೧೦+೪೭೪.

ಕೊಟ್ರಶೆಟ್ಟಿ ಎಂ. ಬಿ. ಸಂಸ್ಕೃತ ಕಾವ್ಯ ನಾಟಕಗಳ ಭಾಷಾಂತರ–ರೂಪಾಂತರಗಳು. ವಿಮಾರ್ಶಾತ್ಮಕ ಲೇಖನಗಳು. ಕನ್ನಡ ಅಧ್ಯಯನ ಪೀಠ. ಕನ್ನಡ ವಿ.ವಿ. ಧಾರವಾಡ. 1976. ಪು. 102–119

ಗಣೇಶ ಕೆ. ಆರ್. ಭಾಷಾಂತರ ಕೃತಿಗಳು. ಕೌಸ್ತುಭ. ಪು. 243–248

ಗಿರಿದರ ಪಿ.ಪಿ. ಹಲನುಡಿತನ ಮತ್ತು ಅನುವಾದ: ಒಂದು ಟಿಪ್ಪಣಿ. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 7–17

ಜಯಂತಿಬಾಯಿ ಎಂ. ನಾಗವರ್ಮ ಭಾಷಾಂತರದ ಪಿತಾಮಹ. ಪ್ರಬುದ್ಧಕರ್ನಾಟಕ. ಮಾರ್ಚ 1982. ಪು. 51–66

ಜೋಸೆಫ್ ಕೊಯಿಪಲ್ಲಿ. ಕೇರಳದ ಭಾಷಾಂತರಿಕೆ: ಮಲಯಾಳಂ ಮತ್ತು ಬಹುಭಾಷಿಕತೆ. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 250.

ತಿರುಮಲೇಶ್ ಕೆ.ವಿ. ೨೦೦೬. ಭಾಷೆ ಮತ್ತು ಭಾಷಾಂತರ. *ನಮ್ಮ ಕನ್ನಡ*. ಅಭಿನವ ಪ್ರಕಾಶನ, ಬೆಂಗಳೂರು. ಪು. ೪೧–೪೫.

ನಾರಾಯಣ ಕೆ.ವಿ. ೨೦೦೧. ಭಾಷಾಂತರ : ಸಾಂಸ್ಕೃತಿಕ ನೆಲೆಗಳು. *ಮತ್ತೆ ಬಾಷೆಯ ಸುತ್ತಮುತ್ತ*. ಬೆಂಗಳೂರು. ವಿಶ್ವವಿದ್ಯಾಲಯ ಬೆಂಗಳೂರು. ಪು. ೧೭೦–೧೭೫.

ನಾರಾಯಣ ಕೆ.ವಿ. ೨೦೦೧. ಭಾಷಾಂತರದ ಭಾಷೆಯಾಗಿ ಕನ್ನಡ. *ಮತ್ತೆ ಬಾಷೆಯ ಸುತ್ತಮುತ್ತ.* ಬೆಂಗಳೂರು. ವಿಶ್ವವಿದ್ಯಾಲಯ ಬೆಂಗಳೂರು. ಪು. ೧೬೦–೧೬೯.

ನೀಲಾದ್ರಿ ಶೇಖರ್ ದಾಶ್. ಹಿಂದಿ–ಬಾಂಗ್ಲಾ ಪರಸ್ಪರ ಭಾಷಾಂತರ ಪ್ರಯೋಗ ಸಂಗ್ರಹ: ಹಳೆಯ ಭಾಷಾಂತರಕ್ರಿಯೆಯಲ್ಲಿ ಹೊಸ ಚಿಗುರು. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 154–191.

ಪಾಟೀಲ ಚಂದ್ರಶೇಖರ. ಸಮುದ್ರಕ್ಕೆ ಸವಾರರು: ಭಾಷಾಂತರದ ಕೆಲವು ಸಮಸ್ಯಗಳು. ಸಾಕ್ಷಿ19. 1973. 69–79

ಪ್ರಧಾನ ಗುರುದತ್ತ. ೧೯೭೬. ಭಾಷಾಂತರ ಉದ್ಯಮ. *ಮಾನವಿಕ ಕರ್ನಾಟಕ.* ೬–೪.

ಬಾಬುರಾವ್ ಕಾ. ಒಂದು ಭಾಷಾಂತರದ ಕಥೆ. ಕನ್ನಡನುಡಿ. 31–4–1968

ಬಾಯಿ ಎಂ. ಜಯಂತಿ. ೧೯೮೨. ನಾಗವರ್ಮ–ಭಾಷಾಂತರ ಪಿತಾಮಹ. *ಪ್ರಬುದ್ಧ ಕರ್ನಾಟಕ.* ೬೩–೪.

ಮಹೇಶ್ವರಪ್ಪ. ಬಾಷಾಂತರ ಮತ್ತು ಕನ್ನಡ ಸಾಹಿತ್ಯ. ಕ. ನು. 1–4–1972, ಪು, 9–12

ಮಹೇಶ್ವರಪ್ಪ. ೧೯೭೩. *ಭಾಷಾಂತರ ಪ್ರವೇಶಿಕೆ.* ರವೀಂದ್ರ ಪುಸ್ತಕಾಲಯ, ಕಾರ್ಗಂ, ಸಾಗರ.

ಮುಗಳಿ ರಂ.ಶ್ರೀ. ಭಾಷಾಂತರ ಕಲೆ. *ಸಂಭಾವನೆ.* ಕ್ರ. ೩೭. . ಪು. ೪೪೯–೪೫೪

ಮುಗುಳಿ ರಂ. ಶ್ರೀ. ಬಾಷಾಂತರ ಕಲೆ. ಸಂಭಾವನೆ. ಬಿ. ಎಂ. ಶ್ರೀ ಸಂಭಾವನೆ ಗ್ರಂಥ. 1941

ಶಿವರುದ್ರಪ್ಪ ಜಿ.ಎಸ್. ಅನುವಾದದ ಸಮಸ್ಯೆಗಳು. *ಸಾಧನೆ.*. ೮–೩.

ರಾಜ್‌ಕುಮಾರ್. ದಲಿತ ಸಾಹಿತ್ಯದ ಅನುವಾದ: ವಿಮರ್ಶಾತ್ಮಕ ನೋಟ. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 100–114.

ರಾಮ ಎಂ. 2002. problems of translation Kannadato Malayalam and voice verse some Problems From The Paits of View of Linguistic and Cultural Spets 30ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಧಾರವಾಡ.

ರಾಮರಾವ್ ಎಂ. ಅನುವಾದ–ಇಂಗ್ಲೀಷ್ ಸಾಹಿತ್ಯ. ಪ್ರಬುದ್ಧ ಕರ್ನಾಟಕ. ಚಿನ್ನದ ಸಂಚಿಕೆ, ಕಲಾ

ರಾವ್ ಎಚ್. ಎಂ. ನಾಗರಾಜ. ೧೯೮೨. ಶಾಸನಾನುವಾದ ಕೆಲವು ಸಮಸ್ಯೆಗಳು. *ಮಾನವಿಕ ಕರ್ನಾಟಕ.* ೧೨–೪.

ಎಸ್.ಸಿರಾಜ್ ಅಹಮದ್. ಭಾರತದ ಬಹುಭಾಷಿಕ ಸನ್ನಿವೇಶ ಮತ್ತು ಅನುವಾದ. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 1–4

ವೆಂಕಟೇಶ ಅಯ್ಯಂಗಾರ್ ಮಾಸ್ತಿ. ಭಾಷಾಂತರ–ರೂಪಾಂತರ. ಜೀನವನ. 24

ಸುಬ್ಬರಾವ್ ಜಿ.ವಿ. (ಅನು.) ಶಾರದಾಪ್ರಸಾದ್ ಎನ್.ಎಸ್. ೧೯೮೨. ಶಾಸನಗಳ ಯತಾರ್ಥ ಭಾಷಾಂತರ. *ಮಾನವಿಕ ಕರ್ನಾಟಕ.* ೧೨–.

ಹರಿಶಂಕರ ಎಚ್. ಎಸ್. ೧೯೯೨. ರಷ್ಯನ್ ಕೃತಿಗಳ ಕನ್ನಡ ಅನುವಾದಗಳು; ಒಂದು ಪರಿಶೀಲನೆ. *ಮಾನ.* ಹಾ.ಮಾ. ನಾಯಕ ಸಂಬಾವನಾ ಗ್ರಂಥ. ಸಂ. ಎಸ್.ಎಲ್. ಬೈರಪ್ಪ.

ಹರಿಶಂಕರ ಎಚ್.ಎಸ್. ೧೯೮೧. ಭಾಷಾಂತರದಲ್ಲಿ ಪರ್ಯಾಯ ಪದಗಳು. *ಮಾನವಿಕ ಕರ್ನಾಟಕ.* ೧೨–೧.

ಹರಿಶಂಕರ ಎಚ್.ಎಸ್. ೧೯೮೨. ಏಕಕಾಲಿಕ ಭಾಷಾಂತರ. *ಮಾನವಿಕ ಕರ್ನಾಟಕ.* ೧೨–.

ಹರಿಶಂಕರ್ ಎಚ್.ಎಸ್. ೧೯೯೨. ರಶ್ಯದ ಕೃತಿಗಳ ಅನುವಾದಗಳು: ಒಂದು ಪರಿಶೀಲನೆ. *ಮಾನ.* ಹಾ.ಮಾ. ನಾಯಕ ಸಂಬಾವನಾ ಗ್ರಂಥ. ಸಂ. ಎಸ್.ಎಲ್. ಬೈರಪ್ಪ.

Other. ಅರ್ಜುನದೇವ ಎನ್. ಪತ್ರಿಕೆಗಳು–ಭಾಷಾಂತರ. ಕನ್ನಡ ನುಡಿ. 14/15,15–9–1980. ವಿ.ಸಂ.

ಇತರ – Other

ಅಂಗಡಿ ಎಸ್. ಎಸ್. ಭಾಷಾಕ್ಷೇತ್ರ ಕಾರ್ಯ. ಸಮಾಜ ಪುಸ್ತಕಾಲಯ, ಧಾರವಾಡ. 1996

ಅಂಗಡಿ ಎಸ್.ಎಸ್. ೧೯೯೬. *ಭಾಷಾ ಕ್ಷೇತ್ರಕಾರ್ಯ.* ಶರ್ಮಾ ಪುಸ್ತಕಾಲಯ, ಧಾರವಾಡ.

ಅಂಗಡಿ ಎಸ್.ಎಸ್. ಶಬ್ದಮಣಿದರ್ಪಣದ ಒಂದು ವೃತ್ತಿಯ ಪಾಠ ಮತ್ತು ಅರ್ಥವಿಚಾರ. ಕನ್ನಡ ಗ್ರಂಥಸಂಪಾದನೆ ಬಂಧ–ವಿನ್ಯಾಸ. ಕನ್ನಡಸಾಹಿತ್ಯ ಪರಿಷತ್ತು ಬೆಂಗಳೂರು, 2007, ಪು. 42–44.

ಅಂಗಡಿ ಎಸ್.ಎಸ್. ೨೦೦೦. ಎಶ್ಟು ಭಾಷೆಗಳಿವೆ? *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ಅಂಗಡಿ ಎಸ್.ಎಸ್. ೨೦೦೦. ಎಶ್ಟು ಜನ ಭಾಷಿಕರು. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ಅಂಗಡಿ ಎಸ್.ಎಸ್. ೨೦೦೩. ಭಾಷಾದ್ಯಯನಕ್ಕೆ ಎಂ. ಚಿದಾನಂದ ಮೂರ್ತಿ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಅಂಗಡಿ ಎಸ್.ಎಸ್. ೨೦೦೩. ಭಾಷೆ ಮತ್ತು ನಿಘಂಟುವಿನ ಅಧ್ಯಯನಕ್ಕೆ ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಅಂಗಡಿ ಎಸ್.ಎಸ್. ೨೦೦೩. ಕನ್ನಡ ಭಾಷಾಕ್ಷೇತ್ರಕ್ಕೆ ಡಾ. ಎ.ವಿ. ನಾವಡ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಅಣ್ಣಾರಾವ್ ಪಡೆಪ್ಪ ಚೌಗಲೆ. ಮಲ್ಲಿಕಾರ್ಜುನ ಮತ್ತು ಅವನ ಮಗ ಕೇಶಿರಾಜ ಇವರು ಜೈನರೇ, ಸ್ಮಾರ್ತ ಬ್ರಾಹ್ಮಣರಲ್ಲ. ಪ್ರಬುದ್ಧಕನಾಟಕ. 31–3/4–1950. ಪು. 151–160 (ಸಮದಾನದ ಮರುಮಾತು–ಎನ್ ಅನಂತರಂಗಚಾರ್, ಪೂರ್ವೋಕ್ತ. ಪು. 161–162)

ಅನಂತನಾರಾಯಣ ಎಚ್.ಎಸ್. ೧೯೭೨. ಕೆಲ್ಟಿಕ್ ಭಾಷೆಗಳು. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಅನಂತಪದ್ಮನಾಬಯ್ಯ ಎಂ.ಎಸ್. Kannada akshara samskarana. Kannada Nudi 1:4, p. 29.

ಅಪ್ಪಾಜಿಗೌಡ. ಶಬ್ದಮಣಿದರ್ಪಣದ ಶೃಂಗಾರ. ವಿಮರ್ಶಾಸುಧೆ. 1979

ಅಲ್ಟೆಡ್ ಎಂ. 1928. Maharastra and Kannada. Indian Antiquiry.

ಅಯ್ಯಂಗಾರ ಮಾಸ್ತಿ ವೆಂಕಟೇಶ. ೧೯೬೦, ೮೯. *ನಮ್ಮ ನುಡಿ*. ಬೆಂಗಳೂರು. ಪು. ೮+೨೮೨.

ಅಯ್ಯಂಗಾರ ಎಚ್. ಶೇಶ. ೧೯೪೦. State of Kannada Language from The Early Times to The 13th century A.D. *A.I.O.C.* (sam). ೧೦.

ಅಯ್ಯಂಗಾರ್ ಮಾಸ್ತಿ ವೆಂಕಟೇಶ. ತಾಯ್ನುಡಿಯು ತಮ್ಮಡಿ. ಕನ್ನಡ ಸಾಹಿತ್ಯ ಪರಿಷತ್ತು. 29–1/2–1944

ಅರೋರಾ ಲಕ್ಷ್ಮೀ ನಾರಾಯಣ. ೨೦೦೦. ಗುಂಪು ಸೇರದ ಭಾಷೆಗಳು. *ಭಾಷೆ*. ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ಅಶೋಕ ಕುಮಾರ ಬಿ. ಎಸ್. ಮತ್ತು ಎಚ್. ವಿ. ಲತಾ. ರಾಚನಿಕವಾದ ಮತ್ತು ನಿರಚನವಾದ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. 2000

ಆರಾಧ್ಯ ಡಿ.ವಿ. ೧೯೬೩. Kannada lipigala yoogastshema. Prajaavani, 29-12-1963, Saahityapuravani, p.8.

ಆಂಡ್ರ್ಯೂಕುಟಿ ಎ.ಪಿ. (ಅನು: ಡಾ.ಹೇಮಾದೇವಿ ಬಿ.ಎನ್) ಭೌಗೋಳೀಕರಣ ಮತ್ತು ಭಾಷೆ. ಸಂ. ಮೇಟಿ ಮಲ್ಲಿಕಾರ್ಜುನ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 336.

ಉದಯಕುಮಾರ್. ಉತ್ಪಾದಕತೆಯಾಗಿ ಅನುವಾದ: ಮಲೆಯಾಳಂ ಸಾಹಿತ್ಯ ಕ್ಷೇತ್ರದ ಸ್ಥಾಪನಾ ದೃಶ್ಯಗಳು. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 191–213.

ಉಪ್ಪಂಗಳ ರಾಮಭಟ್ಟ. ಶಬ್ದಮಣಿದರ್ಪಣದಲ್ಲಿ ಕಾವ್ಯಬಿಂಬ. ಉಡುಪಿ. 1996. ಪು. 23–31

ಉಪಾದ್ಯಾಯ ಯು.ಪಿ. ೧೯೭೦. ಆಸ್ಟ್ರಿಕ್ ಭಾಷಾಪರಿವಾರ. *ಕನ್ನಡ ವಿಶ್ವಕೋಶ ಸಂ–೨.* ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಉಪಾದ್ಯಾಯ ಯು.ಪಿ. ೧೯೭೦. ಇಂಡಿಯನ್ ಲಿಂಗ್ವಿಸ್ಟಿಕ್ ಸೊಸೈಟಿ. *ಕನ್ನಡ ವಿಶ್ವಕೋಶ ಸಂ–೨.* ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಉಪಾದ್ಯಾಯ ಯು.ಪಿ. ೧೯೭೦. ಎಮಿನೋ ಎಂ.ಬಿ. *ಕನ್ನಡ ವಿಶ್ವಕೋಶ ಸಂ–೩.* ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಉಪಾದ್ಯಾಯ ಯು.ಪಿ. ೧೯೭೨. ಕಾಸಿ ಭಾಷೆ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಉಪಾದ್ಯಾಯ ಯು.ಪಿ. ೧೯೭೨. ಕುರುಖ್ ಭಾಷೆ. *ಕನ್ನಡ ವಿಶ್ವಕೋಶ ಸಂ–೪.*

ಉಪಾದ್ಯಾಯ ಯು.ಪಿ. ಮತ್ತು ಉಪಾದ್ಯಾಯ, ಪಿ.ಸುಶೀಲಾ. ೧೯೭೩. *ಮಲೆಯಾಳ ಭಾಷೆ ಮತ್ತು ಸಾಹಿತ್ಯ.* ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಉಪಾದ್ಯೆ ಆ.ನೇ. ದೇಶಿ ಕೋಶಗಳಲ್ಲಿನ ಕನ್ನಡ ಮಾತುಗಳು.

ಉಪಾಧ್ಯಾಯ ಸುಶೀಲಾ ಪಿ. ಭೂತಾರಾಧನೆ ಮತ್ತು ಅದರಲ್ಲಿ ಶಬ್ದಸಂಪತ್ತು. *ತುಳುವ.* ಜುಲೈ–ಸೆಪ್ಟಂಬರ್ 1982. ಪು. 190–

ಉಮಾಕಾಂತ ಸಿ. ಕನ್ನಡ ಲಿಪಿ ಮತ್ತು ಅದರ ಸುಧಾರಣೆ. *ಸಂಕ್ರಮಣ.* ಏಪ್ರಲ್ –ಮೇ 1983. ಪು. 9–23

ಎಚ್ಚೆಸ್ಕೆ. ೨೦೦೦. *ಆಡಳಿತ ಕನ್ನಡ.* ಚೇತನ ಬುಕ್ ಹೌಸ್.

ಎಚ್.ಎಸ್.ಕೆ. ೧೯೭೩. *ಭಾರತದ ಭಾಷಾ ಸಮಸ್ಯೆ.* ಗಾಂಧಿ ಭವನ, ಮಾನಸ ಗಂಗೋತ್ರಿ, ಮೈಸೂರು

ಎಮಿನೊ ಎಂ.ಬಿ. ೧೯೭೨. ಕೊಲಾಮಿ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಎಮಿನೊ ಎಂ.ಬಿ. ೧೯೭೨. ಕೊತ ಕನ್ನಡ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕಮಲಾಕರ ಕಡವೆ. ರಾಷ್ಟ್ರೀಯತೆ, ಮುದ್ರಣ ಬಂಡವಾಳಶಾಹಿ ಹಾಗೂ ಬಹುಭಾಷಿಕತೆಯ ಅನಾಕರ್ಷಣೆ. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 64–80.

ಕರ್ಕಿ ಡಿ.ಎಸ್. Kannaada lipi soundarya. Kannada Nudi 9:25, p. 103. (Kannada)

ಕಲಬುರ್ಗಿ ಎಂ.ಎಂ. ಕೇಶಿರಾಜ ಕಂಡ ಅನುಪಲಬ್ಧ ಭಾರತಗಳು. ಪ್ರಬುದ್ಧಕರ್ನಾಟಕ. 54–4–1973. ಪು. 3–14. ಮಾರ್ಗ–1, ನರೇಶ ಅಂಡ್ ಕಂಪನಿ, ಬೆಂಗಳೂರು. 1977. ಪು. 140–154

ಕಲಬುರ್ಗಿ ಎಂ.ಎಂ. ಶಬ್ದಮಣಿದರ್ಪಣದ ಅರ್ಥವೃತ್ತಿ ಮತ್ತು ಅನ್ವಯವೃತ್ತಿ. ಕರ್ನಾಟಕ ಭಾರತಿ. 1–1–ನವೆಂಬರ್,1968. ಪು. 139–146, ಮರ್ಗ–2,ನರೇಶ ಅಂಡ್ ಕಂಪನಿ,ಬೆಂಗಳರು. 1988. ಪು. 566–573

ಕಲ್ಯಾಣಿ ಸಂಗಮೇಶ. ೨೦೧೬. ಮೋಡಿ ಲಿಪಿಯ ಚಾರಿತ್ರಿಕ ಮಹತ್ವ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ೧೨+೭೫.

ಕಪಾಡಿಯಾ ಎಚ್.ಆರ್. ೧೯೩೫. A Note on Ksa and Jna. Abori. ೧೭. ಪು. ೨೮೯–೨೯೬.

ಕಬ್ಬಿಗರಾಯ. (J N.) Mohenjodaarooda Gitralipi (The Pictorial Script of Mohenjodaro), Jiivan 17:9, 1957, Pp.. 336,18:3, 1957, p. 91. (Kannada)

ಕಬ್ಬಿಗರಾಯ. Kabbigaraya. Kannada bhaashe akkaragalenitu? Jaya Karnaataka 6:2. (Kannada)

ಕಿಶೋರ್ ರಾಜಶ್ರೀ. ೨೦೦೩. ಕನ್ನಡ ಭಾಷಾ ಸಂಪದ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಕಿರಣ್ ಕುಮಾರ ಕೆ. ಇಂಗ್ಲಿಶು ಭಾಷಾ ಕಲಿಕೆ ಮತ್ತು ಉದ್ಯೋಗ ಮಾರುಕಟ್ಟೆ. ಸಂ. ಮೇಟಿ ಮಲ್ಲಿಕಾರ್ಜುನ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 89–95.

ಕುಂದಣಗಾರ ಕೆ. ಜಿ. ವೈಯಾಕರಣ ಭೀಮ ಅಥವಾ ಭೀಮಸೇನ. ಶಿವಾನುಭವ. 15–6 ಮಾರ್ಚ್ 1941. ಪು. 217–220. ಕುಂದಣ ಪು. 101–104. ಪ್ರೋ. ಕೆ.ಜಿ. ಕುಂದಣಗಾರ ಅವರ ಲೇಖನ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999. ಪು. 565–568

ಕುಂದಣಗಾರ ಕೆ. ಜಿ. ಕೇಶಿರಾಜ ಜೈನನಲ್ಲ, ಬ್ರಾಹ್ಮಣನು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. 19-1 ಏಪ್ರಿಲ್ 1934. ಪು. 30–37. ಪ್ರೋ. ಕೆ.ಜಿ. ಕುಂದಣಗಾರ ಅವರ ಲೇಖನ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999. ಪು. 588–596

ಕುಂದಣಗಾರ ಕೆ. ಜಿ. ಕೇಶಿರಾಜ ಜೈನನೇ?. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. 18–1–ಏಪ್ರಿಲ್ 1933. ಪು. 59–75. ಪ್ರೋ. ಕೆ.ಜಿ. ಕುಂದಣಗಾರ ಅವರ ಲೇಖನ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999. ಪು. 569–587

ಕುಪ್ಪುಸ್ವಾಮಿ ಬಿ. ಅರ್ಥಮಾಪನೆ. ತೀ.ನಂ.ಶ್ರೀ ಸಂಸಾರಮಾರ್ಗ, ಬೆಂಗಳೂರು. 1976. ಪು. 525–533

ಕುಲಕರ್ಣಿ ಜಿ. ಪ್ರಹ್ಲಾದ. Dravidarige lipi iralillave? Jaya Karnaataka 3:4, Pp.. 280-282. (Kannada)

ಕುಳ್ಳಿ ಜೆ.ಎಸ್. ೧೯೭೦. ಇಂಡೋಆರ್ಯನ್ ಭಾಷೆಗಳು. ಉರ್ದು ಭಾಷೆ. *ಕನ್ನಡ ವಿಶ್ವಕೋಶ ಸಂ.–೨*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕುಳ್ಳಿ ಜೆ.ಎಸ್. Kannada akshara paddatiya meele sanskritad aprabhava. Karnaataka bhaarati 1;1, Pp.. 176-182. (Kannada)

ಕುಳ್ಳಿ ಜೆ.ಎಸ್. Kannada bhaasheyalli ‘bindhu’. Karnaataka bhaarati 2:1, Pp.. 64-70.

ಕೂಡಿಗೆ ಶ್ರೀಕಂಠ. ಐದು ಜನಪದಶಬ್ದಗಳ ರೂಢಿ ಮತ್ತು ಬಳಕೆ. (ಕೆರಕ, ಕುರುತಾಪಣೆ, ಹುಲಿಸು, ಹರ್ಷೇವು, ಮುಯ್) ಅಧ್ಯಯನ. ಪೂರ್ವೋಕ್ತ. ಪು. 404–410

ಕೃಷ್ಣ ಎಂ.ಎಚ್. ೧೯೩೫. Prehistoric pictographs from South India. Aioc (Sum.) 8. ಪು. ೯೩

ಕೃಷ್ಣ ಮೈ.ಹ. 1941. ಕನ್ನಡ ಲಿಪಿ. *ಕನ್ನಡ ನುಡಿ*. 3–47–ಆ. 1941–374.

ಕೃಷ್ಣಶಾಸ್ತ್ರಿ ಎ. ಆರ್. ಕನ್ನಡಕ್ಕಿರುವ ಸ್ಥಾನ ಮಾನ ಸಂಬಂಧಗಳು. ಕನ್ನಡ ಸಾಹಿತ್ಯ ಪರಿಷತ್ತು. 26–3–1941

ಕೃಷ್ಣಮೂರ್ತಿ ಬದ್ರಿರಾಜು. ೧೯೭೨. ಕೊಂಡ. *ಕನ್ನಡ ವಿಶ್ವಕೋಶ ಸಂ.–೫*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕೆಂಪೇಗೌಡ ಕೆ. ೧೯೭೨. ಕುವಿ ಭಾಷೆ. *ಕನ್ನಡ ವಿಶ್ವಕೋಶ ಸಂ–೪.*

ಕೆಂಪೇಗೌಡ ಕೆ. ೧೯೭೨. ಕ್ರುತಕ ಭಾಷೆಗಳು. *ಕನ್ನಡ ವಿಶ್ವಕೋಶ ಸಂ.–೫*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕೆಂಪೇಗೌಡ ಕೆ. ೧೯೭೨. ಕುಈ ಭಾಷೆ. *ಕನ್ನಡ ವಿಶ್ವಕೋಶ ಸಂ.–೫*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕೆಂಪೇಗೌಡ ಕೆ. ೧೯೭೨. ಕಾಕೇಸಿಯನ್ ಭಾಷಾ ಪರಿವಾರ. *ಕನ್ನಡ ವಿಶ್ವಕೋಶ ಸಂ–೪.*

ಕೆಂಪೇಗೌಡ ಕೆ. ೧೯೭೨. ಕೊಡಗು. *ಕನ್ನಡ ವಿಶ್ವಕೋಶ ಸಂ.–೫*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕೆಂಪೇಗೌಡ ಕೆ. ೧೯೭೨. ಕ್ಷೇತ್ರಕಾರ್ಯ (ಭಾಷಾವಿಜ್ಞಾನ). *ಕನ್ನಡ ವಿಶ್ವಕೋಶ ಸಂ.–೫*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕೇಶವಭಟ್ಟ ಟಿ. 'ಅರ್ಕಾವೊತ್ತು–ಅರ್ಕಾರೊತ್ತು' ಸ್ಪಷ್ಟಿಕರಣ ಎಲ್ಲಿದೆ?. ಕನ್ನಡನುಡಿ. 52–21/22–1989

ಕೇಶವಶರ್ಮ ಕೆ. 2000. ರಚನೆ–ನಿರಚನೆ. ಅಭಿನವಪ್ರಕಾಶನ, ಬೆಂಗಳೂರು.

ಕೋಕನ್ ಎಂ. ವೈ. ಮತ್ತು ಮೀರ್ ಮಹಮದ್ ಹುಸೇನ್. ೧೯೭೦. ಉರ್ದು ಭಾಷೆ. *ಕನ್ನಡ ವಿಶ್ವಕೋಶ ಸಂ.–೨*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಕೋಡಗುಂಟಿ ಬಸವರಾಜ. ೨೦೦೩. ಕನ್ನಡದಲ್ಲಿ ಒಂದು ಕುತೂಹಲಕಾರಿ ಕ್ರುತಿ 'ಮಕ್ಕಳ ಭಾಷೆ'. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಕೋಡಗುಂಟಿ ಬಸವರಾಜ. ೨೦೧೧. ಲಿಪಿ ಸುದಾರಣೆ ಮತ್ತು ಪರಂಪರೆ. *ವಿಜಯ ಕರ್ನಾಟಕ* ೨೮–೮–೨೦೧೧. ಮತ್ತು ೨೦೧೮. ಮಾತೆಂಬುದು. ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ. ಪು.

ಗಾಯಿ ಜಿ.ಎಸ್. ೧೯೭೦. ಈಜಿಪ್ಷನ ಭಾಷೆ. *ಕನ್ನಡ ವಿಶ್ವಕೋಶ ಸಂ–೨.* ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಗಾಯಿ ಜಿ.ಎಸ್. ೧೯೭೧. Kannada lipi. In Kannada vishwa koosha, Vol.ume 3 edited by D.Javare Gowda Mysore: University of Mysore, 1971, Pp.. 807-808. (Kannada)

ಗುಂಡಾಜೋಯಿಸ ಕೆಳದಿ. ಕನ್ನಡ ಮೋಡಿ ಲಿಪಿ. *ಮಣಿಹ.* ಫ. ಗು. ಹಳಕಟ್ಟಿ ಸಂಭಾವನಾ ಗ್ರಂಥ. ಸಂ. ಎಂ. ವಿ. ಸೀತರಾಮಯ್ಯ ಮತ್ತು ಆರ್. ಶೇಷಶಾಸ್ತ್ರಿ. ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. 1982. 385–391

ಗೌಡ ಸೋಮಶೇಖರ. ೧೯೮೪. ಶ್ರೀಯವರು ಮತ್ತು ಲಿಪಿ ಸಂಸ್ಕರಣ, *ಪ್ರಬುದ್ಧ ಕರ್ನಾಟಕ.* ? .

ಗೌಡ ಸೋಮಶೇಖರ. ೧೯೮೪. ಜೆ.ಎ. ಪಿರ್ಥಮನ್. *ಕನ್ನಡ ವಿಶ್ವಕೋಶ*

ಗೌಡ ಸೋಮಶೇಖರ. ೧೯೯೫. ದೇಜಗೌ ಮತ್ತು ಕನ್ನಡ. *ಅಮೃತವರ್ಷ.*

ಗೌಡ ಸೋಮಶೇಖರ. ೧೯೯೮. ಬಕ್ತಿ ಅಬಿವ್ಯಕ್ತಿ ಮತ್ತು ಭಾಷೆ. *ಪ್ರಸಾದ.*

ಗೌಡ ಸೋಮಶೇಖರ. ೨೦೦೩. ಕನ್ನಡ ಭಾಷಾವಿಜ್ಞಾನಕ್ಕೆ ಹಾ.ಮಾ.ನಾ. ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಗ್ರೀಯರ್‌ಸನ್ ಜಿ.ಎ. ಸಂ. ೧೯೦೬. Kanarese. *Linguistics Survey of India*. ಸಂ. ೪. ಪು. ೫೬೨–೪೦೫. ಕೊಲ್ಕತ್ತಾ.

ಚಂದ್ರಶೇಖರ ಬಿ.ಎಸ್. ೨೦೦೩. ಪ್ರಾದೇಶಿಕ ಭಾಷೆಗಳು ಮತ್ತು ದರ್ಮ. ಪ್ರಜಾವಾಣಿ ದೈನಿಕ. ೨೧–೦೪–೨೦೦೩.

ಚಂದ್ರಯ್ಯ ಬಿ.ಎನ್. ೧೯೭೦. ಎಸ್ಪರ್ ಸನ್ ಆಟೊ. *ಕನ್ನಡ ವಿಶ್ವಕೋಶ ಸಂ–೩.* ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಚಂದ್ರಯ್ಯ ಬಿ.ಎನ್. ೧೯೭೨. ಕೃಷ್ಣಮಾಚಾರ್ಯ, ಶ್ರೀರಂಗಪಟ್ಟಣದ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಚನ್ನಪ್ಪ ಎಸ್. ೨೦೦೧ (ಮೂ. ಮು). *ನಮ್ಮನಾಡು ನಮ್ಮನುಡಿ.* ಮಕ್ಕಳ ಲೋಕ, ಗಂಗೋತ್ರಿ ಬಡಾವಣೆ, ಮೈಸೂರು.

ಚಿಟಗುಪ್ಪ ಬೀಮರಾವ್. ೧೯೭೨. *ಕವಿರಾಜಮಾರ್ಗ ಪ್ರಶಸ್ತಿ.* ಮನ್ವಂತರ. ಸಂ. ಜೆ.ಬಿ. ಜೋಶಿ, ಧಾರವಾಡ.

ಚಿದಂಬರ ದೀಕ್ಷಿತ್. 1999. ಕನ್ನಡ ಭಾಷಾ ಮಿಮಾಂಸೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಜಯಪ್ಪ ಕೆ.ವಿ. ೨೦೦೩. ಡಾ. ಸಂಗಮೇಶ ಸವದತ್ತಿಮಠ ಅವರ ವಿಶಿಷ್ಟ ಪಿ.ಎಚ್.ಡಿ. ಪ್ರಬಂಧ. Harihara's Ragale's-A Linguistic Analysic. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಜಯಂತ ಸುರತ್ಕಲ್. ಕೇಶಿರಾಜ ಜೈನನೇ?. ಕನ್ನಡನುಡಿ. 14–5, ಮೇ, 1951. ಪು. 154

ಜಾಗೀರದಾರ ಸೀತಾರಾಮ್. ೧೯೭೬. ಅಮರಕೋಶದ ಒಬ್ಬ ಪ್ರಾಚೀನ ಕನ್ನಡ ವ್ಯಾಕ್ಯಾತ. *ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ*. ೬೧–೨.

ಜಾಗೀರದಾರ. ೨೦೦೧. *ಕವಿರಾಜಮಾರ್ಗ*, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಜಾಗಿರದಾರ್ ಸೀತಾರಾಮ. 1988. ಕನ್ನಡದ 'ಅರ್ಕಾವೊತ್ತು'. *ಕನ್ನಡ ನುಡಿ*. 51–11/12–ಜೂ. 1988–13.

ಜೋಷಿ ಎಸ್. ಬಾ. ಕಂನುಡಿಯ ಜೀವಾಳ. ಸಮಾಜ ಪುಸ್ತಕಾಲಯ, ಧಾರವಾಡ. 1973 (ತೃ. ಮು)

ಜೋಶಿ ಜೆ.ಬಿ. ೧೯೭೨. *ಭಾರತೀಯ ಶಬ್ದವ್ಯುತ್ಪತ್ತಿಯಲ್ಲಿ ಸ್ಫೋಟದ ಸ್ಥಾನ*. ಮನ್ವಂತರ ಪ್ರಕಾಶನ, ಧಾರವಾಡ.

ಜ್ಞಾನಾನಂದ ಜಿ. 1989. ಕಾರ್ಖಾನೆಗಳಲ್ಲಿ ಕನ್ನಡ. *ಕನ್ನಡ ನುಡಿ*. 52–15/16–ಆ. 1989–4.

ತರೀಕೆರೆ ರಹಮತ್. ೨೦೧೨. *ನುಡಿ ಸಂಕರ ಸಾಹಿತ್ಯ*. ೦೦೦೦.

ತಾರಾನಾಥ್ ಎನ್.ಎಸ್. ೨೦೦೩. ಎಚ್.ಎಸ್. ಬಿಳಿಗಿರಿ: ಭಾಷಾವಿಜ್ಞಾನಕ್ಕೆ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ತಾತಾಚಾರ್ಯ ಆರ್. ಕಿತ್ತೀಳೆಯೂ ಕನ್ನಡವೂ. ಕನ್ನಡ ಸಾಹಿತ್ಯ ಪರಿಷತ್ತು. 1–3–1916

ತಿರುಮಲೇಶ್ ಕೆ.ವಿ. ೨೦೧೩. ಕನ್ನಡ ಲಿಪಿ ವಿಚಾರ. *ಸಮೃದ್ಧ ಕನ್ನಡ*. ಅಭಿನವ ಪ್ರಕಾಶನ, ಬೆಂಗಳೂರು. ಪು. ೧೬೮–೧೮೧.

ತುಡಮೆ ದನರಾಜ ಗಾದಗಿ. ೨೦೦೩. "ಭಾಷಾಲೇಕ": ಒಂದು ಅವಲೋಕನ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ತೇಜಸ್ವಿ ಕೆ.ಪಿ. ಪೂರ್ಣಚಂದ್ರ. Bhaashe mattu saahitagalige sambandhisida endu tatva. Lahiri 3, Pp.. 42-47.

ದಂಡಿಗಿಮಟ ಶಶಿಕಲಾ. ೨೦೦೩. ಭಾಷಾದ್ಯಯನ ಕ್ಷೇತ್ರಕ್ಕೆ ಡಾ. ಆರ್. ಸಿ. ಹಿರೇಮಟರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ದಿಬ್ಬದ ಶಾಂತಿನಾತ. ೨೦೦೩. ಭಾಷಾವಿಜ್ಞಾನ ಕ್ಷೇತ್ರಕ್ಕೆ ಡಾ. ಹಂ.ಪ ನಾಗರಾಜಯ್ಯ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ದೇವರ ಕೊಂಡಾರೆಡ್ಡಿ, ೨೦೦೦. ಲಿಪಿ ಮತ್ತು ಬರವಣಿಗೆಯ ಉಗಮ, *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ದೇವರ ಕೊಂಡಾರೆಡ್ಡಿ. ಲಿಪಿ ಮತ್ತು ಬರವಣಿಗೆಯ ಉಗಮ. (ಸಂ). ಕೆ. ವಿ ನಾರಾಯಣ. ೨೦೦೦.

ದೇವರಕೊಮಡಾರೆಡ್ಡಿ. ೨೦೦೨. *Lipiya Huttu Mattu Belavanige*. Kannada Puataka Pradikara. Banglore.

ದೇವರಕೊಂಡಾರೆಡ್ಡಿ. ೨೦೦೨,ಓ. *ಲಿಪಿಯ ಹುಟ್ಟು ಮತ್ತು ಬೆಳವಣಿಗೆ.* ಕನ್ನಡ ಪುಸ್ತಕ ಪ್ರಾಧಿಕರ.

ನರಸಿಂಹಾಚಾರ್ ಆರ್. ಕರ್ನಾಟಕ: ಪ್ರಾಚೀನತೆ, ಮಹಿಮೆ, ವ್ಯುತ್ಪತ್ತಿ, ಲಿಪಿ. *ಕರ್ನಾಟಕ ಕವಿಚರಿತೆ–೧.* ಪು.

ನಾಗಬೂಶಣ ಸಿ. ೨೦೦೩. ಭಾಷಾವಿಜ್ಞಾನ ಕ್ಷೇತ್ರಕ್ಕೆ ಕೃಷ್ಣ ಪರಮೇಶ್ವರ ಬಟ್ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ನಾಗರಾಜಯ್ಯ ಹಂ. ಪ. ಕನ್ನಡ ಲಿಪಿಯ ಸುದಾರಣೆ. ಜೀವನ. ಅಗಷ್ಟ್ 1974. ಪು. 2–4

ನಾಗರಾಜಯ್ಯ ಹಂ.ಪ. ೧೯೬೮. *ಭಾರತದ ಭಾಷಾ ಸಮಸ್ಯೆ.* ಹಿಂದ್ ವಿದ್ಯಾರ್ತಿ ಯುವಕ ಸಮ್ಮೇಳ, ಬೆಂಗಳೂರು.

ನಾಗರಾಜಯ್ಯ ಹಂ.ಪ. ೧೯೮೦. *ಭಾಷಾವಿಜ್ಞಾನಿಗಳು.* ಪ್ರಗತಿ ಪ್ರಿಂಟರ್ಸ್ ಆಯಿಂಡ್ ಪಬ್ಲಿಶರ್ಸ್, ಬೆಂಗಳೂರು.

ನಾಗರಾಜಯ್ಯ ಹಂ.ಪ. ೧೯೮೦. *ಕಮ್ಮಟದ ಕಿಡಿಗಳು.* ೨೯೮, ವಾಗ್ದೇವಿ ಎಂಟರ್ ಪ್ರೈಸಸ್, ಮೈಸೂರು.

ನಾಗರಾಜಯ್ಯ ಹಂ.ಪ. Kannada lipia moola mattu vikaasa. Gurudeeva 9:8.

ನಾಯಕ ಸದಾನಂದ. Lipi sanskarnadalli shaastriya drustiya avashakate. Vagbuushana 3:10-11, Pp.. 229-223.

ನಾಯಕ ರಾಜೇಂದ್ರ. ೨೦೦೩. ಕನ್ನಡ ಭಾಷಾದ್ಯಯನ ಕ್ಷೇತ್ರಕ್ಕೆ ಡಾ. ವಿಲ್ಯಂ ಮಾಡ್ತರವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ನಾಯಕ ಹಾ.ಮಾ. Navagannadu lipi. Kannada Parbha 25-5-1970, p. 4

ನರಸಿಂಹಯ್ಯ ಡಿ.ಎನ್. ೧೯೫೬. *ಶಬ್ದವಿಹಾರ.*

ನಾರಾಯಣ ಕೆ.ವಿ. (ಸಂ.). ೨೦೦೦. *ಭಾಷೆ* (ವಿಶ್ವಕೋಶ). ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೧೦+೩೬೮.

ನಾರಾಯಣ ಕೆ.ವಿ. ೨೦೦೦ ಸಂವಹನ ವ್ಯವಸ್ಥೆಗಳು. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಭಾಷೆಯ ಮಾಂತ್ರಿಕತೆ. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಭಾಷೆಯ ಕೆಲಸಗಳು. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಭಾಷೆಯಲ್ಲಿ ಸರಿ ತಪ್ಪು. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಯಾವಕುಲ, ಯಾವದೇಶ. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಜಗದ್ವ್ಯಾಪಿ ಭಾಷೆಗಳು. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಎಲ್ಲಾ ಭಾಷೆಗಳೂ ಸಮಾನ. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಕೃತಕ ಭಾಷೆಗಳು. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೦. ಗುಂಪು ಸೇರದ ಭಾಷೆಗಳು. *ಭಾಷೆ.* ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ನಾರಾಯಣ ಕೆ.ವಿ. ೨೦೦೧. ಮತ್ತೊಂದು ಮಾಹಿತಿ ಕ್ರಾಂತಿ. *ಮತ್ತೆ ಬಾಷೆಯ ಸುತ್ತಮುತ್ತ*. ಬೆಂಗಳೂರು. ವಿಶ್ವವಿದ್ಯಾಲಯ ಬೆಂಗಳೂರು. ಪು. ೨೫–೨೮.

ಪಟ್ಟಾಭಿರಾಮಯ್ಯ ಕೆ. 1947. ಲಿಪಿ ಸುಧಾರಣೆಯ ಅಗತ್ಯವಿದೆಯೇ?. *ಕನ್ನಡ ನುಡಿ*. 9–23–ಮಾ. 1947–93.

ಪಾಂಡುರಂಗಾಚಾರ್ ಕೆ. ೧೯೭೨. ಕೊರಿಯನ್ ಭಾಷೆ. *ಕನ್ನಡ ವಿಶ್ವಕೋಶ ಸಂ.–೫*. ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಪಾಟೀಲ್ ವೀರಭದ್ರಯ್ಯ ಗದಗಯ್ಯ. ಕರ್ನಾಟಕದ ಮಹತ್ವವು ಏಕೆ?. ಕನ್ನಡ ಸಾಹಿತ್ಯ ಪರಿಷತ್ತು. 14–3–1929

ಪಾಟೀಲ್ ಶ್ರೀರಾಮ್ ಅರ್ಕಾವಲಿ. (Patil, Shriram. Arkaavali) (E) Yaaredaata. Kannada Nudi 4:44, p. 321.

ಪಾಟೀಲ್ ಜಿ. ಅನಸೂಯಾ. ೨೦೦೩. ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಶಂ.ಬಾ. ಜೋಶಿ ಅವರ ಕಾಣಿಕೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಪಾಟೀಲ್ ಜಿ.ಎಂ. ೧೯೬೮. Kannada varnamaaleyalli sonne. Journal of The Karnatak University 12, 1968, Pp.. 229-223.

ಪಾಟೀಲ್ ಎಚ್. ಗವಿಸಿದ್ದಪ್ಪ. ೨೦೦೩. ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಡಾ. ಸಂಗಮೇಶ ಸವದತ್ತಿಮಠ ಅವರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಪಾಟೀಲ ಸದಾನಂದ. ೨೦೦೩. ಧ್ವನಿ ವಿಜ್ಞಾನದ ಮಾರ್ಗಕಾರ ಡಾ. ಬಿ.ಬಿ. ರಾಜಪುರೋಹಿತ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಪಾಟೀಲ ಜಿ. ಅನಸೂಯ. ೨೦೦೩. ಕನ್ನಡದ ಒಂದು ಮೇರು ಕೃತಿ **"ತೌಲನಿಕ ದ್ರಾವಿಡ ಭಾಷಾ ವಿಜ್ಞಾನ"**. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಪಾರ್ಥಸಾರಥಿ ಬಿ. ೨೦೦೬. *ಕನ್ನಡದಲ್ಲಿ ಆಡಳಿತ*. ಸಪ್ನಾ ಬುಕ್ ಹೌಸ್, ಬೆಂಗಳೂರು.

ಪಾವಟೆ ಚೆನ್ನಕ್ಕ. ೨೦೦೩. ಭಾಷಾದ್ಯಯನ ಕ್ಷೇತ್ರಕ್ಕೆ ಡಾ. ಎಂ.ಎಂ. ಕಲಬುರ್ಗಿಯವರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಪುಟ್ಟಯ್ಯ ಬಿ. ಶ್ರೀಕಂಠಯ್ಯನವರು ಕನ್ನಡ ಲಿಪಿಕರಣವೂ. ಸಂಭಾವನೆ. ಬಿ. ಎಂ. ಶ್ರೀ ಸಂಭಾವನೆ ಗ್ರಂಥ. 1941

ಪುಟ್ಟಯ್ಯ ಬಿ. Shiri Kanthayya navaruu-Kannada lipi sanskraanavuu. In 'Sambhaavane': B.M.Shri Kanthayya Felicitation Vol.ume, Bangalore, 1941, Pp.. 44-47. (Kannada)

ಪುಟ್ಟಯ್ಯ ಬಿ. Shri Kanthayya navavuu-Kannada ipi snakaranavoo.In 'Sambhaavane': B M Shri Kanthayya Felicitation Vol.ume, Bangalore, 1941, Pp. 44-47 (Kannada)

ಪುಟ್ಟಯ್ಯ ಬಿ.ಎಂ. ಶ್ರೀಕಂಠಯ್ಯನವರೂ ಕನ್ನಡಲಿಪಿ ಸಂಸ್ಕರಣವೂ. *ಸಂಭಾವನೆ.* ಕ್ರ. ೩೭ .... ಪು. ೪೪–೪೭.

ಪುಟ್ಟಣ್ಣ ಎಂ,ಎಸ್, ದ ಕಂಡಿಶನ್ ಆಫ್ ಅವರ್ ಕನ್ನಡ. ಐರಿಷ್ ಪ್ರಕ್ಸ 1918

ಪುಟ್ಟಣ್ಣ ಎಂ. ಎಸ್. ೧೯೭೬. ನಮ್ಮ ಕನ್ನಡದ ಸ್ಥಿತಿ ಅನು. ಸುಜಾತ ಎಚ್. ಎಸ್. *ಪ್ರಬುದ್ಧ ಕರ್ನಾಟಕ,* ೫೮–೨, ಮತ್ತು ೨೦೦೧. *ಕನ್ನಡ ಸಾಹಿತ್ಯ ಮೀಮಾಂಸೆ.* ಸಂ. ರಹಮತ್ ತರಿಕೆರೆ.

ಪುಟ್ಟಣ್ಣ ಎಂ.ಎಸ್. ೧೯೧೮. The condition of our Kannada. Irish praqs. 1918

ಪುಟ್ಟಣ್ಣ ಎಂ.ಎಸ್. ೧೯೧೮. The Condition of our Kannada. Irish Press;

ಪುಣಿಂಚತ್ತಾಯ ವೆಂಕಟರಾಜ. ೨೦೦೧. ತುಳು ಲಿಪಿ. ಕರ್ನಾಟಕ ತುಳು ಅಕಾಡೆಮಿ, ಮಂಗಳೂರು.

ಪುರುಶೋತ್ತಮ ಜಿ. ೧೯೮೮. Sequencing and orientation difficulties in reading Kannada script Perceptual and Motor Skills66:1, 1988, p. 10.

ಪೂಜಾರ ವಿ.ಜಿ. ೨೦೦೩. ಭಾಷಾವಿಜ್ಞಾನ ಕ್ಷೇತ್ರಕ್ಕೆ ಡಾ. ಕೆ. ಕುಶಾಲಪ್ಪಗೌಡ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಪೆರ್ಲ ಕೃಷ್ಣಭಟ್ಟ. 1998. ಭಾಷಾಶುದ್ಧಿ. ಕರ್ನಾಟಕ ಸಂಘ ಪುತ್ತುರು, ದಕ್ಷಿಣ ಕನ್ನಡ.

ಪೊಲಾಕ್ ಶೆಲ್ಡನ್. ೨೦೦೦. *ದೇಶ ಭಾಷಾ ನಿರ್ಮಾಣ.* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೊಲಾಕ್ ಶೆಲ್ಡನ್. ೨೦೦೦. *ದೇಶಭಾಷಾ ನಿರ್ಮಾಣ.* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೈ ಎಂ. ಗೋವಿಂದ. ೧೯೭೨. ಕಿಟ್ಟೆಲ್ ಪರ್ಡಿನೆಂಡ್. *ಕನ್ನಡ ವಿಶ್ವಕೋಶ ಸಂ–೪.*

ಪ್ರಸಾದ್ ಕೆ. ಜಿ. ನಾರಾಯಣ. ೨೦೦೩. ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಪ್ರೊ. ಬಿ. ರಾಮಚಂದ್ರರಾವ್ ಅವರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಪ್ರತಿಭಾ ವಿ. ಆರ್. ಪತ್ರಿಕೆ ಮತ್ತು ಕನ್ನಡ ಭಾಷೆ.ಉದಯವಾಣಿ. ದೀಪಾವಳಿ ವಿಶೇಷಾಂಕ. 1980. ಪು. 218–219

ಪ್ರದಾನ ಗುರುದತ್ತ. ೧೯೭೨. ಕಾಪ್ಟಿಕ್ ಭಾಷೆ ಮತ್ತು ಸಾಹಿತ್ಯ. *ಕನ್ನಡ ವಿಶ್ವಕೋಶ ಸಂ–೪.*

ಪ್ರದಾನ ಗುರುದತ್. ೧೯೮೬. ಭಾಷೆಗಳು. *ಪ್ರಬುದ್ಧ ಕರ್ನಾಟಕ.* ೬೮–೧.

ಬಗವತಿ ಶಂ. ಸರಸ್ವತಿ ದೇವಿ. ೨೦೦೩. ಭಾಷಾವಿಜ್ಞಾನ ಕ್ಷೇತ್ರಕ್ಕೆ ಡಾ.ರಾಜೇಶ್ವರಿ ಮಹೇಶ್ವರಯ್ಯ ಅವರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಬಸವರಾಜ ಪಿ. ಬರವಣಿಗೆಯಲ್ಲಿ 'ರೇಫದ' ತಪ್ಪು ಬಳಕೆ. ಕನ್ನಡನುಡಿ. 48–15–1985

ಬಸವರಾಜ ಪಿ. 1985. ಬರವಣಿಗೆಯಲ್ಲಿ 'ರೇಫ'ದ ತಪ್ಪು ಬಳಕೆ. *ಕನ್ನಡ ನುಡಿ*. 48–15–ಆ. 1985–5.

ಬರೋತಿ. ೧೯೭೦. ಇಂಡೋಯುರೋಪಿಯನ್ ಭಾಷೆಗಳು. ಉರ್ದು ಭಾಷೆ. *ಕನ್ನಡ ವಿಶ್ವಕೋಶ ಸಂ.–೨.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಬಟ್ ಎಂ. ಮರಿಯಪ್ಪ. ೧೯೫೭. Problem of Meaning. Annals of Oriental Research, Madras, 13, 1957.

ಬಟ್ ಎಂ. ಮರಿಯಪ್ಪ. ೧೯೬೭. Nimma lipi. In Kannada Sanskruti. Bangalore: Karnaataka Sahaakari Prakaashana, 1967, Pp.. 268-272. (Kannada)

ಬಟ್ ಟಿ. ಕೇಶವ. Vattrasuli. Sharana Saahitya, 25:11 (Rajata sanchika.)

ಬಾಸ್ಕರ ಟಿ.ಎಂ. ೨೦೦೩. ಜನಪದ ಭಾಷಾತಜ್ಞರಾಗಿ ಡಾ.ಸಂಗಮೇಶ ಸವದತ್ತಿಮಠ ಅವರು ಬರೆದ ವಿಶಿಷ್ಟ ಲೇಕನಗಳ ಕೃತಿ: 'ಜನಪದ ಭಾಷಾಸಮೀಕ್ಷೆ'. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಬಾಬು ಡಿ. ಪಾಂಡುರಂಗ. ೨೦೦೩. ಭಾಷಾವಿಜ್ಞಾನಕ್ಕೆ ಡಾ. ಡಿ.ಎನ್. ಶಂಕರಬಟ್ ಅವರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಬಾಬು.ಡಿ.ಪಾಂಡುರಂಗ. ೨೦೦೯. ಸುಜ್ಞಾನಮೂರ್ತಿ. ಬಿ. ತಂತ್ರಜ್ಞಾನ ಮತ್ತು ಸಮಾಜ. *ಭಾಷಾತಂತ್ರಜ್ಞಾನ.* ಸಂ. ಸಾಂಬಮೂರ್ತಿ. ಪ್ರಗತಿ ಪ್ರಿಂಟ್ ಕಮ್ಯುನಿಕೆಷನ್ಸ್, ಬೆಂಗಳೂರು. ಪು. ೫೨–೫೫.

ಬಿಳಿಗಿರಿ ಎಚ್ ಎಸ್. ಪ್ರಾಸಸ್ಥಾನದಲ್ಲಿ ಶಬ್ದವಿಕಾರ. ಶ್ರೀಕಂಠತೀರ್ಥ. ಪೂರ್ವೋಕ್ತ. ಪು. 492–501

ಬಿಳಿಗಿರಿ ಎಚ್.ಎಸ್. ೧೯೯೫. Praasastanadalli shabadavikaara. In 'Varasegalu'.. ಕನ್ನಡ ಸಂಘ, ಬೆಂಗಳೂರು. ಪು, ೧೧೨–೧೨೧

ಬಿಳಿಗಿರಿ ಎಚ್.ಎಸ್. ೧೯೯೫. Praasastanadalli shabadavikaara. In 'Varasegalu'. Bangalore: Kannada Sangha, 1995, Pp.. 112-121. (Kannada)

ಬಿಮಲ್‌ಕೃಷ್ಣ ಮತಿಲಾಲ್. (ಅನು.) ಎಂ.ಎಂ. ಹೆಗಡೆ. ೨೦೧೦. *ಅಕ್ಷರ ದರ್ಶನ ಶಬ್ದ ಮತ್ತು ಜಗತ್ತು.* ಅಕ್ಷರ ಪ್ರಕಾಶನ ಹೆಗ್ಗೋಡು, ಕರ್ನಾಟಕ.

ಬುರ್ಲಿ ಎಸ್. ಎಸ್ (ಅನು.). ೧೯೯೧. *ಭಾರತದಲ್ಲಿ ಮಾತ್ರುಭಾಷೆಯ ಬೋಧನೆಯ ಬಗ್ಗೆ ಸಲಹೆಗಳು.* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಭಟ್ಟ ಉಪ್ಪಂಗಳ ರಾಮ. ೧೯೮೯. *ಕನ್ನಡ ವ್ಯೆಯಾಕರಣ ಬಟ್ಟಾಕಲಂಕ.* ಅಲಂಕಾರ ಪ್ರಕಾಶನ, ಕುಂಜಿಬೆಟ್ಟು, ಉಡುಪಿ.

ಭಟ್ಟ ಉಪ್ಪಂಗಳ ರಾಮ. ೨೦೧೧. ಭಾಷೆ–ಮಾಧ್ಯಮ. *ಕನ್ನಡ ನುಡಿನಡೆ.* ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ. ಬೆಂಗಳೂರು. ಪು. ೫೫–೬೩.

ಭಟ್ಟ ಉಪ್ಪಂಗಳ ರಾಮ. ೨೦೧೧. 'ಹಿಂದೂ' ಏನೆಂದು. *ಕನ್ನಡ ನುಡಿನಡೆ.* ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ. ಬೆಂಗಳೂರು. ಪು. ೨೯೫–೨೯೭.

ಭಟ್ಟ ಉಪ್ಪಂಗಳ ರಾಮ. ೨೦೧೧. ಶಬ್ದಮಣಿದರ್ಪಣದಲ್ಲಿ ಕಾವ್ಯಬಿಂಬ. *ಕನ್ನಡ ನುಡಿನಡೆ.* ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ. ಬೆಂಗಳೂರು. ಪು. ೮೮–೯೬.

ಭಟ್ಟ ಉಪ್ಪಂಗಳ ರಾಮ. ೨೦೧೧. ವ್ಯದಿಕದ ಬೇರಿನಲ್ಲಿ ಕನ್ನಡದ ಚಿಗುರು. *ಕನ್ನಡ ನುಡಿನಡೆ.* ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ. ಬೆಂಗಳೂರು. ಪು. ೧೩೦–೧೩೫.

ಭಟ್ಟ ಉಪ್ಪಂಗಳ ರಾಮ. ೨೦೧೧. ಮತ್ತೆ ನೆತ್ತದ ಸುತ್ತ. *ಕನ್ನಡ ನುಡಿನಡೆ.* ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ. ಬೆಂಗಳೂರು. ಪು. ೨೬೫–೨೬೮.

ಭಟ್ಟ ಉಪ್ಪಂಗಳ ರಾಮ. ೨೦೧೧. ಹಳಗನ್ನಡ ಛಂದಸ್ಸು. *ಕನ್ನಡ ನುಡಿನಡೆ*. ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ. ಬೆಂಗಳೂರು. ಪು. ೧೨೬–೧೨೯.

ಭಟ್ಟ ಉಪ್ಪಂಗಳ ರಾಮ. ೨೦೧೧. ದ್ರಾವಿಡ ಸಂಸ್ಕೃತ ಛಂದಸ್ಸು. *ಕನ್ನಡ ನುಡಿನಡೆ*. ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ. ಬೆಂಗಳೂರು. ಪು. ೧೩೬–೧೬೦.

ಭಟ್ಟ ಎಸ್. ಶಂಕರನಾರಾಯಣ. 1988. ಕನ್ನಡದಲ್ಲಿ ಈಗ ಇರುವಷ್ಟು ಲಿಪಿ ಸಂಜ್ಞೆಗಳು ಬೇಕೇ. *ಕನ್ನಡ ನುಡಿ.* 50–7/8–ಏ. 1988–18.

ಭಟ್ಟ ಟಿ. ಕೇಶವ. 1989. ಆರ್ (9) ಒತ್ತಿನ ಸಮಿಕ್ಷೆ. *ಕನ್ನಡ ನುಡಿ*. 52–7/8–ಏ. 1989–3.

ಭಟ್ಟ ಟಿ. ಕೇಶವ. 1989. ಕನ್ನಡದಲ್ಲಿ ರೇಫ (ಅರ್ಕಾವೊತ್ತು) ಸ್ಪಷ್ಟೀಕರಣ ಎಲ್ಲಿದೆ?. *ಕನ್ನಡ ನುಡಿ*. 52–21/22–ನ. 1989–2.

ಭಟ್ಟ ಡಿ.ಎನ್. ಶಂಕರ್. ೨೦೦೫,೨೦೦೬,೨೦೦೯. *ಕನ್ನಡ ಬರಹವನ್ನು ಸರಿಪಡಿಸೋಣ.* ಭಾಷಾ ಪ್ರಕಾಶನ, ಮೈಸೂರು. ಪು. ೩೦೪.

ಭಟ್ ಪಿ. ಶ್ರೀಕೃಷ್ಣ. ೨೦೦೩. ಕನ್ನಡ ವ್ಯಾಕರಣಕ್ಕೆ ಪ್ರೊ. ಮರಿಯಪ್ಪ ಭಟ್‌ರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಭಟ್ ಪಾದೇಕಲ್ಲು ವಿಷ್ಣು. ೨೦೦೩. ಭಾಷಾದ್ಯಯನ ಕ್ಷೇತ್ರಕ್ಕೆ ಸೇಡಿಯಾಪು ಕೃಷ್ಣಭಟ್‌ರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಭಟ್ ಪಾದೇಕಲ್ಲು ವಿಷ್ಣು. ೨೦೦೩. ಡಾ. ಯು.ಪಿ. ಉಪಾದ್ಯಾಯ ಮತ್ತು ಭಾಷಾದ್ಯಾಯನ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಭಟ್ ಟಿ. ಕೇಶವ. ೨೦೦೨. ಕನ್ನಡದ ಹಿರಿಮೆ–ಗರಿಮೆ. *ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ*. ೮೦–೨.

ಭಟ್ ಕೃಷ್ಣ ಪರಮೇಶ್ವರ ೨೦೦೦. ಎಲ್ಲಿಯವರು? *ಭಾಷೆ*. ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ಮಂಜುನಾಥ ಎಂ. ಜಿ. ಮತ್ತು ದೇವರಾಜಸ್ವಾಮಿ ಜಿ.ಕೆ. ೧೯೯೯. *ಕನ್ನಡ ಲಿಪಿಶಾಸ್ತ್ರ*. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮಂಜುನಾಥ ಎಂ.ಜಿ., ದೇವರಾಜಸ್ವಾಮಿ ಜಿ.ಕೆ., ೨೫೦೦ಳ, ಕನ್ನಡ ಲಿಪಿಶಾಸ್ತ್ರ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮಂಜುಳಾಕ್ಷಿ ಎಲ್. ಮಹಿಳೆ ಮತ್ತು ಮಾದ್ಯಮ. ಅದೇ

ಮಜನ್ ಮುಲ್ಲಾ. 2002. Knowing Rev. Dr. Perdinand kittel Through The Correspondence. 30ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಧಾರವಾಡ.

ಮಧುಸೂದನ್ ಕೆ.ಎಸ್. ಶಬ್ಧಮಣಿದರ್ಪಣದ ಒಂದು ಪ್ರಯೋಗದ ಆಕರ : ಒಂದು ಪ್ರತಿಕ್ರಿಯೆ. ಸಾಧನೆ.. 19–3/4–1990. ಪು. 209–216

ಮಲ್ಲಾಪುರ ಬಿ.ವಿ. ೧೯೯೧. ಉತ್ತರ ಕರ್ನಾಟಕದ ಭಾಷಾ ಸೊಗಡು. 'ಕನ್ನಡಿಗ' ಪತ್ರಿಕೆ ದೀಪಾವಳಿ ಸಂಚಿಕೆ. ಹುಬ್ಬಳ್ಳಿ. ೧೯೯೧.

ಮಸೂತಿ ನಾಗೇಂದ್ರ. ೨೦೦೩. ಕನ್ನಡ ಭಾಷಾವಿಜ್ಞಾನ ಕ್ಷೇತ್ರದಲ್ಲೊಂದು ಮೈಲಿಗಲ್ಲು 'ಕನ್ನಡ ಭಾಷಾ ಪ್ರಬೇದಗಳು'. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಮಲ್ಲಿಕಾರ್ಜುನ. ಬಿ. ಪತ್ರಕರ್ತರಿಗೆ ಕನ್ನಡ. ಭಾರತೀಯ ಭಾಷಾ ಸಂಸ್ಥಾನ, ಮೈಸೂರು. 1983

ಮಲ್ಲಿಕಾರ್ಜುನ. ಬಿ. ಮತ್ತು ಸದಾನಂದ ಕೆ. ಆರ್. ಬ್ಯಾಂಕಿನವರಿಗೆ ಕನ್ನಡ. ಭಾರತೀಯ ಭಾಷಾ ಸಂಸ್ಥಾನ, ಮೈಸೂರು. 1984

ಮಲ್ಲಿಕಾರ್ಜುನ. ಬಿ. ಆಡಳಿತಗಾರರಿಗೆ ಕನ್ನಡ. ಭಾರತೀಯ ಭಾಷಾ ಸಂಸ್ಥಾನ, ಮೈಸೂರು. 1980

ಮಲ್ಲಿಕಾರ್ಜುನ ಬಿ. ೧೯೮೦. Aadalita gararige Kannada. Mysore: CIIL, 1980. (Kannada)

ಮಲ್ಲಿಕಾರ್ಜುನ ಬಿ. ೧೯೮೫. An introudution to Kannada script – reading and writing. Mysore:CIIL, 1985.

ಮಹಿಮ. ೧೯೭೫. ಇಬ್ಬರು ಪಾಶ್ಚಿಮಾತ್ಯ ದ್ರಾವಿಡ ಭಾಷಾವಿಜ್ಞಾನಿಗರು (ವ್ಯಕ್ತಿ ಚಿತ್ರ). *ಕರ್ನಾಟಕ ಭಾರತಿ*. ೭–೪.

ಮಹಾದೇವಯ್ಯ ಪಿ. ೨೦೦೬. *ದಿನ ದಿನ–೩*. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹದೇವಯ್ಯ ಎಚ್.ಎಂ. ೨೦೦೩. ದ್ರಾವಿಡ ಭಾಷೆಯ ಲಿಪಿಗಳು. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಮಹೇಶ್ವರಯ್ಯ ಎಚ್ ಎಂ. ಕನ್ನಡ ಜಾನಪದದಲ್ಲಿ ಭಾಷಿಕ ಆಟಗಳು. *ಕನ್ನಡಭಾರತಿ*. ಆಗಸ್ಟ್–ನವೆಂಬರ್ 1982. ಪು. 67–73

ಮಳಗೆ ಎಸ್ ಆರ್. ನಮ್ಮ ಭಾಷಾ ಸಮಸ್ಯೆ. ಕನ್ನಡ ಸಾಹಿತ್ಯ ಪರಿಷತ್ತು. 52–2–1967

ಮಾಡ್ತ ವಿಲ್ಯಂ ೧೯೯೩ – ಅಲ್ಪಸಂಖ್ಯಾತ ಭಾಷಾಭಿವೃದ್ಧಿ, ಅದೇ

ಮಾಡ್ತ ವಿಲ್ಯಂ. ಭಾಷಾವಿಜ್ಞಾನ ಮತ್ತು ಜಾನಪದ ವಿಜ್ಞಾನ. ಬೆಳ್ವೊಲ, ಆರ್. ಸಿ. ಹಿರೇಮಠ ಸಂಭಾವನಾ ಗ್ರಂಥ. ಸಂ.ಎಂ. ಎಸ್. ಸುಂಕಾಪುರ, ಎಂ.ಎಂ.ಕಲಬುರ್ಗಿ, ಆರ್. ಸಿ. ಹಿರೇಮಠ ಸನ್ಮಾನ ಸಮಿತಿ. ಕನ್ನಡ ಅಧ್ಯಯನ ಪೀಠ, ಧಾರವಾಡ. ೧೯೮೧. ಪು. ೩೬೯–೩೭೬

ಮಾಡ್ತ ವಿಲ್ಯಂ. ೧೯೭೨. ಕೊಂಕಣಿ ಭಾಷೆ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಮಾಡ್ತ ವಿಲ್ಯಂ. ೧೯೮೭. ನಿರೂಪಕ. *ಕರ್ನಾಟಕ ಭಾರತಿ.* ೨೦–೩.

ಮಾಡ್ತ ವಿಲ್ಯಂ. ೧೯೯೪. *ಪರ್ಡಿನಾಂಡ್ ಕಿಟೆಲ್: ಜೀವನ ಸಾಧನೆ–ಕೋಶ ರಚನೆ.* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾಡ್ತ ವಿಲ್ಯಂ. ೨೦೦೩. ಪರ್ಡಿನಾಂಡ್ ಕಿಟೆಲ್: ಕನ್ನಡ ಭಾಷಾವಿಜ್ಞಾನದ ಪಿತಾಮಹ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಮಾಡ್ತ ವಿಲ್ಯಂ. ಕನ್ನಡ ನಿಘಂಟು ವಿಜ್ಞಾನ ಮತ್ತು ರಚನೆ. *ಸಾಧನೆ.* 26–1–1997. ಪು. 98

ಮಾದವ ಕೆ. Madhavii lipi. Jiivana 3;11, Pp.. 539-540.

ಮಾಳವಾಡ ಸ.ಸ. ೧೯೭೦. 'Ra','La','Ksha' La vichitram, Kannada Saahitya Parishat Patrike 23:2, Pp.. 109-203. (Also Pp.ublished in Sahitya Saangama, Dhaarwad: Jaya Prakaashana, 1970, [[. 405-413.) (Kannada)

ಮುರಳಿಧರ ಎಚ್. ಎನ್. ಆಧುನಿ ಪಾಶ್ಚಾತ್ಯ ಕಾವ್ಯಶಾಸ್ತ್ರದಲ್ಲಿ ವಾಕ್ಯಾರ್ಥ ವಿಶ್ಲೇಷಣೆ–ಒಂದು ಸ್ಥೂಲ ಪರಿಚಯ. *ಸಾಧನೆ.* ಏಪ್ರಿಲ್–ಮೇ 1983. ಪು. 69–82

ಮುರಿಗೆಪ್ಪ ಎ. ೨೦೦೩. ಭಾಷಾವಿಜ್ಞಾನಕ್ಕೆ ಜೆ.ಎಸ್.ಕುಳ್ಳಿ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಮುಗಳಿ ರಂ.ಶ್ರೀ, ೧೯೭೮, *ಕನ್ನಡ ನುಡಿ ತನ್ನ ಕಾಲ ಮೇಲೆ ತಾ ನಿಲ್ಲಬಹುದೆ?.* ಗೋಕಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು.

ಮುಳಿಯ ತಿಮ್ಮಪ್ಪಯ್ಯ. ೧೯೫೮. Kannada akshra maale. In Kannada sahitya mattu Ithara Upanyasagalu. Mysore: T.V. Smaaraka Grantha Maale, 1958, Pp.. 124-137. (Kannada)

ಮೂರೂರು ಚಂದ್ರ, ೨೦೧೧. *ಕನ್ನಡ ಬರವಣಿಗೆ ಪರಿಶ್ಕರಣೆ.* ಮೂರೂರು ಚಂದ್ರ, ಬೆಂಗಳೂರು.

ಮೂರ್ತಿ ಎ.ವಿ. ನರಸಿಂಹ. Kannada lipiya ugama mattu vikaasa. Mysore: Kannada Adyayana Samaste.

ಮೂರ್ತಿ ಎ.ವಿ. ನರಸಿಂಹ. Palatographic fatures of The eVol.ution of Kannada script. In Sahai, Bhagwand (editor). History and Culture B.P.Sinha Felicitation Vol.ume, Delhi: Ramananda Vidya Bhawan, 1987, Pp.. 221-225.

ಮೂರ್ತಿ ಎಂ. ನರಸಿಂಹ. Kannad sankshipta lipi. Kannada Nudi 1:1, Pp. 4-5. (Kannada)

ಮೂರ್ತಿ ಎಂ.ಎನ್.೧೯೭೧. Kannada lipi sudhaarane. Kannada Nudi 1-3-1971,Pp.. 5 and 9; 16-3-1971, Pp.. 2 and 11; 1-4-1971, p.2; 16-4-1971, p.8; 1-5-1971, p.8. (Kannada)

ಮೂರ್ತಿ ಪಂಡಿತ್ ಕೃಷ್ಣ. 1976. ಲಿಪಿ ಸುಧಾರಣೆ. *ಕನ್ನಡ ನುಡಿ.* 39–18–ಸೆ. 1976–14.

ಮೂರ್ತಿ ಮ.ನ. 1971. ಕನ್ನಡ ಲಿಪಿ ಸುಧಾರಣೆ. *ಕನ್ನಡ ನುಡಿ.* 34–5–ಮಾ. 1971–5.

ಮೂರ್ತಿ ಎ.ವಿ. ನರಸಿಂಹ. ೧೯೬೮,೭೫,೯೯. *ಕನ್ನಡ ಲಿಪಿಯ ಉಗಮ ಮತ್ತು ವಿಕಾಸ.* ವಿವೇಕಹಂಸ ಪ್ರಕಾಶನ, ಬೆಂಗಳೂರು.

ಮೂರ್ತಿ ಎಂ. ಚಿದಾನಂದ. ೨೦೦೫,೬. *ಭಾಷಿಕ ಬೃಹತ್ ಕರ್ನಾಟಕ (ನೀಲಗಿರಿಯಿಂದ ನಾಸಿಕ್‌ವರೆಗೆ).* ಸಪ್ನಾ ಬುಕ್ ಹೌಸ್, ಬೆಂಗಳೂರು. ಪು. ೩೦+೪೧೦.

ಮೂರ್ತಿ ಎಂ. ಚಿದಾನಂದ. ಭಾರತೀಯ ಶಬ್ದವ್ಯುತ್ಪತ್ತಿಯಲ್ಲಿ ಸ್ಪೋಟದ ಸ್ಥಾನ. (ಗುರುರಾಜ ಬಿ ಕೋಶಿಯವರ ಕೃತಿ) ಸಾ. ವಾ. 1973. ಬೆಂಗಳೂರು ವಿ. ವಿ. ಬೆಂಗಳೂರು. 1974. ಪು. 318–319

ಮೂರ್ತಿ ಎಂ.ಎಸ್. ಕೃಷ್ಣ. ೧೯೭೨. ಕಡೀ ಬೋಲಿ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಮೂರ್ತಿ ಕೆ. ಭೈರವ. ೧೯೭೦. ಉಕ್ರೇನಿಯನ್ ಭಾಷೆ. ಉರ್ದು ಭಾಷೆ. *ಕನ್ನಡ ವಿಶ್ವಕೋಶ ಸಂ.–೨.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ಮೂರ್ತಿ ಕೆ. ಕೃಷ್ಣ. ೧೯೭೩. *ಪಾಣಿನಿ.* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಮೇಲಿನಮನಿ ಹನಮಂತ. ೨೦೦೩. ಭಾಷಾವಿಜ್ಞಾನ ಕ್ಷೇತ್ರಕ್ಕೆ ಡಾ. ಹೆಚ್.ಎಂ. ಮಹೇಶ್ವರಯ್ಯನವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಮೇಟಿ ಮಲ್ಲಿಕಾರ್ಜುನ್. ಕನ್ನಡ ನಡಿ ಅರಿಮೆಗೆ ಡಿ.ಎನ್.ಎಸ್. ಭಟ್ಟರ ಕೊಡುಗೆ. ಪು. 91–100

ಮೋಗಾ ಕಲ್ಯಾಣರೆಡ್ಡಿ ಮುದರೆಡ್ಡಿ. ೨೦೦೩. ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಡಾ.ಎಚ್.ಎಸ್. ಅನಂತನಾರಾಯಣರವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ರತ್ನಮ್ಮ ಎಸ್. ವೈಕರಣನ ವೈಶಿಷ್ಟ್ಯ. ಸವಿನೆನಪು. (ಟಿ. ಎಸ್. ವೆಂಕಣ್ಣಯ್ಯ ಸಂಸ್ಮರಣ ಸಂಪುಟ) ಮೈಸೂರು. 1986. ಪು. 763

ರವೀಂದ್ರನಾಥ ಕೆ. ೨೦೦೩. ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಡಾ. ಕೆ.ವಿ. ನಾರಾಯಣ ಅವರ ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ರಗುನಾತರಾಯ ಆರ್. Karnataka varnamaaleyacharitraadi vichaara. Kannada Sahitya Parishat Patrike 1:3, Pp.. 255-288 (Kannada)

ರಾಗೌ ೧೯೯೩ – ಎಮಿನೋ ಮತ್ತು ಓರೋ, ಪ್ರ–ಕ

ರಾಗೌ. ೧೯೯೩–೯೪. ಎಮಿನೊ ಮತ್ತು ಬರೊ. *ಪ್ರಬುದ್ಧ ಕರ್ನಾಟಕ (ಅಮೃತ ಸಂಪುಟ).*

ರಾಘವಾಂಕ ಕೆ.ವಿ. ಸ್ಕ್ರಿಪ್ಟ್ ರಿಫಾರ್ಮ ಇನ್ ಕನ್ನಡ. ನಂದಾನೆನಪು, ಉಷಾ ಸಾಹಿತ್ಯ ಮಾಲೆ. ಮೈಸೂರು. 1973. ಪು. 15–20

ರಾಜಪುರೋಹಿತ ಬಿ.ಬಿ. ೨೦೦೩. ಕನ್ನಡ ಭಾಷಾಶಾಸ್ತ್ರಕ್ಕೆ ತೀ. ನಂ. ಶ್ರೀ. ಕೊಡುಗೆ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ರಾಜಪುರೋಹಿತ ಬಿ.ಬಿ. ೨೦೦೩. ಕನ್ನಡ ವರ್ಣಗಳ ಸ್ವರೂಪ, ಲಕ್ಷಣ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ರಾಜಪುರೋಹಿತ. ಬಿ.ಬಿ. ೨೦೦೯. ಸಂಗೀತದಲ್ಲಿ ಭಾಷೆ; ಸಂಗೀತವೆಂಬ ಭಾಷೆ. *ವ್ಯಾ–ಸಾ–ನು–ಭಾ–ವ.* ಪ್ರತಿಕ್ಷಾ ಎಂಟರ್‌ಪ್ರೈಸಸ್ ಮೈಸೂರು. ಪು. ೧೨೧–೧೩೧.

ರಾಜಪುರೋಹಿತ. ಬಿ.ಬಿ. ೨೦೦೯. ಕನ್ನಡದಲ್ಲಿ ಛಂದಸ್ಸಿನ ಪ್ರಯೋಗಗಳು. ವ್ಯಾ–ಸಾ–ನು–ಭಾ–ವ. ಪ್ರತಿಕ್ಷಾ ಎಂಟರ್‌ಪ್ರೈಸಸ್ ಮೈಸೂರು. ಪು. ೧೧೫–೧೨೦

ರಾಜಗೋಪಾಲಾಚಾರ್ಯ ಎಂ. Rangaprasanga: Ondu yaksagaana viveecane. Udipi: Praadeesika jaanapada Rangakalegala Adhyayana Keendra, 1986. (Study of The script and The music in Kannada Yaksagana Plays.)

ರಾಜಗೋಪಾಲ ಟಿ.ಎಸ್. ೧೯೭೩. Kannada lipi huttu, belavanige. Bangalore: IBH, 1973,

ರಾಜಗೋಪಾಲನ್ ಕೆ.ಆರ್. 1966. Statiatical Methods APp.lied to Language Studies. K.s. v. 2.

ರಾಜೇಂದ್ರ ಚೆನ್ನಿ. ವಿಜ್ಞಾನದ ಯಜಮಾನ್ಯ:ಕಳೆದು ಹೋದ ಅವಕಾಶ. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 17–27.

ರಾಬರ್ಟ್ ಎ. ಹಾಲ್. ೧೯೭೦. ಇಟಾಲಿಯನ್ ಭಾಷೆ. *ಕನ್ನಡ ವಿಶ್ವಕೋಶ ಸಂ–೨.* ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ರಾಮಸ್ವಾಮಿ ಎಂ. ೧೯೭೦. ಇಂಗ್ಲಿಶ್ ಭಾಷೆ. ಉರ್ದು ಭಾಷೆ. *ಕನ್ನಡ ವಿಶ್ವಕೋಶ ಸಂ.–೨.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ರಾಮಸ್ವಾಮಿ ಎಂ.ವಿ. Arkaavaliya arivata. Kannada Nudi4:46 p. 333.

ರಾಮಸ್ವಾಮಿ ಚೆ. ೧೯೭೪. ಭಾಷಾವಿಜ್ಞಾನದ ಪ್ರಾಮುಕ್ಯತೆ. *ಕರ್ನಾಟಕ ಭಾರತಿ.* ೭–೨.

ರಾಮಕೃಷ್ಣ ಆರ್. ೧೯೮೪. ಬೆಲ್ಜಿಯಮ್ ದೇಶದ ಭಾಷಾಸಮಸ್ಯೆ. *ಮಾನವಿಕ ಕರ್ನಾಟಕ.* ೧೫–೧.

ರಾಮಕೃಷ್ಣ ಆರ್. ೧೯೮೫. ಸಂಗೀತ ಮತ್ತು ವಿಜ್ಞಾನ. *ಮಾನವಿಕ ಕರ್ನಾಟಕ.* ೧೫–೩.

ರಾಮಕೃಷ್ಣ ಆರ್. ೧೯೮೫. ಸಂಗೀತ ಮತ್ತು ಧ್ವನಿವಿಜ್ಞಾನ. *ಮಾನವಿಕ ಕರ್ನಾಟಕ*. ೧೫–೩.

ರಾಮಕೃಷ್ಣ ಆರ್. ೨೦೦೩. ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಪ್ರೊ. ಕೆ. ಕೆಂಪೇಗೌಡ ಅವರ ಕೊಡುಗೆ. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ರಾಮಚಂದ್ರ ಪಾಟೀಲ್. ಕನ್ನಡದಲ್ಲಿ ರೇಫ (ಅರ್ಕಾವತ್ತು) ಕನ್ನಡನುಡಿ. 52–3/4–1989

ರಾಮಚಂದ್ರ ಸಿ,ಎಸ್ ೧೯೯೩ – ಭಾಷಾ ವಿಜ್ಞಾನ ಸಮೂಹ ಮಾಧ್ಯಮಗಳು, ಪ್ರ–ಕ ೭೫

ರಾಮಚಂದ್ರ ಸಿ.ಎಸ್ ೧೯೯೪ – ಸಮಾಜ ವಿಜದಞಾಆನಗಳು ಭಾಷಾ ವಿಜ್ಞಾನ ಪ್ರ–ಕ ೨೪–೧/೨ ೩/೪

ರಾಮಚಂದ್ರ ಸಿ.ಎಸ್. ೧೯೮೭. Baasaa vijnanadalli ksetra vidhana mattu tantragalu-maanavika Karanataka. Vol.,19-3 & 4, 1987 (in press)

ರಾಮಚಂದ್ರ ಸಿ.ಎಸ್. ೧೯೮೯. ಭಾಷಾವಿಜ್ಞಾನದಲ್ಲಿ ಕ್ಷೇತ್ರವಿದಾನ ಮತ್ತು ತಂತ್ರಗಳು. *ಮಾನವಿಕ ಕರ್ನಾಟಕ*. ೧೯–೨/೩.

ರಾಮಚಂದ್ರ ಸಿ.ಎಸ್. ೧೯೯೦. Vijnaanadalli bhaase-Kannada prabha-1990

ರಾಮಚಂದ್ರ ಸಿ.ಎಸ್. ೧೯೯೩. Vaijyanika bhasasaa adhyayanadalli dvanivijnyana mattu bhautavijnyana-abhijnyana-(Dr.K. Krinshnamurthy felication Vol.ume) 1993

ರಾಮಚಂದ್ರ ಸಿ.ಎಸ್. ೧೯೯೮. Kuvempu sahitya mattu Kannada bhashe-A speech on 21st dec-1998

ರಾಮಚಂದ್ರ ಸಿ.ಎಸ್. ೨೦೦೨. Baashaavijnyanada hinnaleyalli upabhashe mattu upasanskruti : sthula vivechane-published in filication Vol.ume of Dr. D.K.Rajendra-mysore. 2002

ರಾಮಚಂದ್ರ ಸಿ.ಎಸ್. ೨೦೦೩. Language of Kannada Films-Presented at The National Seminar on Language in Movies with Spacial reference to Kannada Language, Organized by R.C. Hirematha's Institute of Kannada Studies, Karanataka University of Dharawar and CiII mysore. 2003

ರಾಮಚಂದ್ರ ಸಿ.ಎಸ್. ೨೦೦೩. Shaala pathya pustakagala rachaneyalli Aree raamanna havale avara bahumukhas karyavaikari-in Felication Vol.ume guru namana. 2003

ರಾಮಚಂದ್ರ ಸಿ.ಎಸ್. Bhasaa vijnyaana mattu Samuhamadyamgalu-prabhuddha Karantaka. (special issue) in press.

ರಾಮಚಂದ್ರ ಸಿ.ಎನ್. ೧೯೯೩–೯೪. ಭಾಷಾವಿಜ್ಞಾನ ಮತ್ತು ಸಮೂಹ ಮಾದ್ಯಮಗಳು. *ಪ್ರಬುದ್ಧ ಕರ್ನಾಟಕ (ಅಮೃತ ಸಂಪುಟ).*

ರಾಮಚಂದ್ರಪ್ಪ ಬರಗೂರು. ೨೦೧೩. ಆಡಳಿತದಲ್ಲಿ ಕನ್ನಡ : ನಿಯಮಗಳ ನಡೆ. *ಕನ್ನಡ ಪ್ರಜ್ಞೆ.* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು. ೧೦೪–೧೧೨.

ರಾಮಚಂದ್ರಪ್ಪ ಬರಗೂರು. ೨೦೧೩. ಉದ್ಯಮ, ಉದ್ಯೋಗ ಮತ್ತು ಕನ್ನಡ. *ಕನ್ನಡ ಪ್ರಜ್ಞೆ.* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು. ೧೧೩–೧೫೫.

ರಾಮಶರ್ಮ ಏ. ಶಬ್ದಮಣಿದರ್ಪಣದ ವೃತ್ತಿ ಕೇಶಿರಾಜನದಲ್ಲ. ಕನ್ನಡಸಾಹಿತ್ಯ ಪರಿಷತ್ಪತ್ರಿಕೆ. 26–1–ಜೂನ್ 1941. ಪು. 56–61

ರಾವ್ ಯು. ರಾಗವೇಂದ್ರ. ೨೦೦೩. ಆರ್ಯ ಭಾಷೆಗಳ ಕುರಿತ ಪ್ರಪ್ರತಮ ತೌಲನಿಕ ಕೃತಿ ಆರ್ಯಭಾಷಾ ವ್ಯಾಸಂಗ. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ರಾವ್ ಜೆ.ಆರ್. ಲಕ್ಷ್ಮಣ. ೧೯೯೨. ಬರವಣಿಗೆಯ ವ್ಯಾಧಿಗಳು. *ಮಾನ.* ಹಾ.ಮಾ. ನಾಯಕ ಸಂಬಾವನಾ ಗ್ರಂಥ. ಸಂ. ಎಸ್.ಎಲ್. ಬೈರಪ್ಪ.

ರಾವ್ ಜಿ. ವರದರಾಜ. ೧೯೭೨. ಕಡಿಯ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ರಾವ್ ಜಿ. ವರದರಾಜ. ೧೯೭೨. ಕೇಶಿರಾಜ. *ಕನ್ನಡ ವಿಶ್ವಕೋಶ ಸಂ.–೫.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.

ರಾವ್ ಟಿ.ಎಸ್. ರಾಮಚಂದ್ರ. ೧೯೫೮. Kannada. In Narasimahan, V K et al (editors) The Languages of India kaleidoscopic survey, Madras: Our India Direction and Publications Pvt Ltd., 1958, Pp.. 42-44.

ರಾಯ ಅ.ನ. ಕೃಷ್ಣ. 1944. ಕನ್ನಡ ಲಿಪಿ ಸಂಸ್ಕರಣ. *ಕನ್ನಡ ನುಡಿ.* 6–22–ಮಾ. 1944–89.

ರೀಟಾ ಕೋಠಾರಿ. ಭಾಷೆಯ ಬಗೆಗಿನ ಪ್ರಶ್ನೆಗಳು. ಸಂ. ಎಸ್. ಸಿರಾಜ್ ಅಹಮದ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. 213–250.

ವರದದಚಾರ್ ಆರ್. 1935. Authorship of Karanatak Sabdanushasan. A.i.o.c. 8.

ವಿದ್ಯಾಶಂಕರ ಎಸ್. ೨೦೦೩. ಬಾಷಾಧ್ಯಯನ ಕ್ಷೇತ್ರಕ್ಕೆ ಆಚಾರ್ಯ ಡಿ ಎಲ್, ಎನ್. ಅವರ ಕೊಡುಗೆ.. *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ವೀರೇಶ ಬಡಿಗೇರ. 2011. ಕನ್ನಡ ಮೋಡಿ ಲಿಪಿ ಸಂರಚನೆ. ಮತ್ತು ಸಂವರ್ಧನೆ. ಪ್ರಸಾರಾಂಗ ಕನ್ನೆ ವಿಶ್ವವಿದ್ಯಾಲಯ, ಹಂಪಿ.

ವಿಶ್ವಾಸ ಎಚ್.ಆರ್. ೨೦೦೬. *ಮತ್ತೆ ಹೊತ್ತಿತು ಹೀಬ್ರೂ ಹಣತೆ.* ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

ವಿಲ್ಯಂ ಮಾಡ್ತ. ಸಂಕೇತಿ ವಿಜ್ಞಾನ ಮತ್ತು ಜಾನಪದ. *ಸಂಶೋಧನ.* ಸಂ. ಲಕ್ಷ್ಮಣ ತೆಲಗಾವಿ.

ವಿಲ್ಯಂ ಮಾಡ್ತ. ೧೯೮೬. ಕ್ಷೇತ್ರಭಾಷಾವಿಜ್ಞಾನ ಉದ್ದೇಶ ಮತ್ತು ವ್ಯಾಪ್ತಿ. *ಕರ್ನಾಟಕ ಭಾರತಿ.* ೧೯–೨.

ವಿಲ್ಯಂ ಮಾಡ್ತ. ೧೯೮೭. ಕ್ಷೇತ್ರ ಭಾಷಾ ವಿಜ್ಞಾನ ಉದ್ದೇಶ ಮತ್ತು ವ್ಯಾಪ್ತಿ. *ಕರ್ನಾಟಕ ಭಾರತಿ.* ೧೯–೩.

ವಿಲ್ಯಂ ಮಾಡ್ತ. ೧೯೯೦. ಕನ್ನಡ ಭಾಷಾ ಸಮಸ್ಯೆಗಳು. *ಕರ್ನಾಟಕ ಭಾರತಿ.* ೧೩–೧.

ವಿಲ್ಯಂ ಮಾಡ್ತ. ೧೯೯೧. ಸಂಕೇತ ವಿಜ್ಞಾನ ಮತ್ತು ಜಾನಪದ. *ಸಂಶೋಧನ.* ಸಂ. ಲಕ್ಷ್ಮಣ ತೆಲಗಾವಿ.

ವಿಲಿಯಂ ಬ್ರಯಿಟ್ ಒ. ೧೯೬೬. Kannada and Telugu Writing. In Daniels, peter T and Bright, William (editors) The World's Writing System New York: Oxford Univrsity Press, 1966, Pp.. 413-419.

ವಿಲಿಯಂ ಬ್ರಯಿಟ್ ಒ. ೧೯೮೮. The Dravidian scrips. In Steever, Sanford B (editor). The Dravidian Languages. London: Routledge, 1998, Pp..40-17. (fro Kannada script see Pp.. 49-59.)

ಯಾಳವಾರ ಸೋಮನಾತ. ೨೦೦೩. ವಿದ್ಯಾರ್ಥಿಗಳಿಗೆ ಉಪಯುಕ್ತ ಕೈಪಿಡಿ **"ಕನ್ನಡ ಭಾಷೆಯ ಸ್ವರೂಪ".** *ಭಾಷಾ ಸಂಗಮ.* ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ವೆಂಕಟಸುಬ್ಬಯ್ಯ ಜಿ. 2010. ಗ್ರಂಥ ಸಂಪಾದನೆಯ ಪ್ರಾಮುಖ್ಯ. ಶಬ್ದ ಮತ್ತು ಅರ್ಥ. ಪು. 29–31

ವೆಂಕಟರಮಣಯ್ಯ ಟಿ.ವಿ. ೧೯೭೩. *ಕನ್ನಡ ಭಾಷಾ ಸಾಹಿತ್ಯ ಲೇಕನ ಸೂಚಿ.* ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ಪು. ೭೬೧+೧೬.

ವೆಂಕಟೇಶಯ್ಯ ಬಿ. ೧೯೪೧. Note on Srinatha's Karnatabhasha. *A.I.O.C.* (Sum.). 11. ಪು. ೨೪೭–೨೪೮.

ವೆಂಕಟೇಶಯ್ಯ ಎಂ.ಈ. ೧೯೭೩. ಹಳಗನ್ನಡ ಶಾಸನಗಳಲ್ಲಿ ವರ್ಣ ಪುನರಾವೃತ್ತಿ. *ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ*. ೫೮–೧.

ವೆಂಕಟೇಶಯ್ಯ ಟಿ. ವಿ. ಕನ್ನಡ ಭಾಷಾ ಸಾಹಿತ್ಯ ಲೇಖನ ಸೂಚಿ. ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, 1953. 761

ವೆಂಕಟೇಶ್ವಯ್ಯ ಎಂ.ಜಿ. 1968. 'ಶಬ್ದಮಣಿ ದರ್ಪಣ'ದಲ್ಲಿ ವೈದ್ಯಕೀಯ ವಿಷಯ ಸುಬ್ಬಣ್ಣ, ಅಂಬೆಸಂಗೆ. *ಕನ್ನಡ ನುಡಿ*. 5'–3/4–ಫೆ. 1988–2.

ಶರ್ಮಾ ಎಚ್. ವಿ. ಶ್ರೀನಿವಾಸ. ಶಬ್ಧಮಣಿದರ್ಪಣದ ಪ್ರಯೋಗದ ಆಕರ. ಸಾಧನೆ.. 22–3/4, ಜುಲೈ–ಡಿಸೆಂಬರ್ 1993. ಪು. 154–155

ಷಡಕ್ಷರಿ. 1942. ತಿದ್ದಿದ ಕನ್ನಡ ಲಿಪಿ. *ಕನ್ನಡ ನುಡಿ*. 5–7–ಡಿ. 1942–40.

ಷೆಲ್ಡನ್ ಪೊಲಕ್. ೨೦೦೦. ದೇಶ ಭಾಷಾ ನಿರ್ಮಾಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಾಸ್ತ್ರಿ ಬಿ. ಶಿವಮೂರ್ತಿ. 1947. ಕನ್ನಡ ಲಿಪಿ ಸುಧಾರಣೆ ಬೇಕೇ?. *ಕನ್ನಡ ನುಡಿ*. 9–22–ಮಾ. 1947–88.

ಶಾಸ್ತ್ರಿ ವೆಂಕಟಾಚಲ ಟಿ.ವಿ. ಮತ್ತು ಜಿ.ಆರ್. ಲಕ್ಷ್ಮಣರಾವ. ೨೦೧೦. *ಕನ್ನಡ ಬರವಣಿಗೆ ದೋಷಗಳು ದೌರ್ಬಲ್ಯಗಳು*. ತಳುಕಿನ ವೆಂಕಣ್ಣಯ್ಯ, ಗ್ರಂಥಮಾಲ, ಮೈಸೂರು.

ಶಾಸ್ತ್ರಿ ಟಿ.ವಿ. ವೆಂಕಟಾಚಲ. ಶಬ್ಧಮಣಿದರ್ಪಣ ಮತ್ತು ಉತ್ತರಕಾಲೀನ. ಬೆಳ್ವೊಲ. (ಆರ್ ಸಿ. ಅಭಿನಂದನ ಗ್ರಂಥ) ಧಾರವಾಡ. 1981. ಪು. 335–343, ಶಾಸ್ತ್ರೀಯ–1, ಸಪ್ನಬುಕ್ ಹೌಸ್, ಬೆಂಗಳೂರು. 1999. ಪು. 400–407

ಶಾಸ್ತ್ರಿ ಟಿ.ವಿ. ವೆಂಕಟಾಚಲ. ೧೯೫೩. Shastri T.V. Venkatachala. Keeshiraajana rasikate. Jiivana 14:1, 1953, Pp.. 95-97.

ಶಾಸ್ತ್ರಿ ಟಿ.ವಿ. ವೆಂಕಟಾಚಲ. ೧೯೭೯. *ಶಬ್ದಾರ್ಥ ವಿಹಾರ*. ಅಪರ್ಣಾ ಪ್ರಕಾಶನ, ಮೈಸೂರು. ಪು. ೮+೧೫೬.

ಶಾಸ್ತ್ರಿ ಟಿ.ವಿ. ವೆಂಕಟಾಚಲ. ೧೯೯೭. Shabdamanidarpanada lakshpadya ondava avidhita aakara. KSPP., 1997.

ಶಾಸ್ತ್ರಿ ಟಿ.ವಿ. ವೆಂಕಟಾಚಲ. 1999. ಶಬ್ಧಮಣಿದರ್ಪಣದ ಒಂದು ಲಕ್ಷ್ಯಪದ್ಯದ ಅವಿದಿತ ಆಕರ. ಶಾಸ್ತ್ರೀಯ–1, ಸ್ವಪ್ನ ಬುಕ್ಹೌಸ್, ಬೆಂಗಳೂರು. 1999. ಪು. 138–139

ಶಾಸ್ತ್ರಿ ಟಿ.ವಿ. ವೆಂಕಟಾಚಲ. ೨೦೦೩. ಭಾಷಾಶಾಸ್ತ್ರ ಅಧ್ಯಯನದ ಸವಾಲುಗಳು. *ಭಾಷಾ ಸಂಗಮ*. ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ. ಸಂ. ಬಸವರಾಜ ಪೋಲಿಸ ಪಾಟೀಲ. ಕಲಬುರಗಿ. ಪು.

ಶಾಸ್ತ್ರಿ ಟಿ.ವಿ. ವೆಂಕಟಾಚಲ. ಕೇಶಿರಾಜನ ರಸಿಕತೆ. ಜೀವನ. 14–3, ಜುಲೈ 1953. ಪು. 95–97

ಶಾಸ್ತ್ರಿ ದೇವುಡು ನರಸಿಂಹ. 1946. ಕನ್ನಡ ಲಿಪಿ ಸಂಸ್ಕರಣ. *ಕನ್ನಡ ನುಡಿ*. 9–11–ಡಿ. 1946–41.

ಶಾಸ್ತ್ರಿ ದೇವುಡು ನರಸಿಂಹ. 1946. ಕನ್ನಡ ಲಿಪಿ ಸಂಸ್ಕರಣ. *ಕನ್ನಡ ನುಡಿ*. 9–20–ಫೆ. 1947–79.

ಶಾಸ್ತ್ರಿಶರ್ಮ ಆರ್. 19361. Life and Work of Kesiraja. Q.j.m.s. 21-1

ಶ್ಯಾಮಸುಂದರ ಕೋಚೆ. ೧೯೮೮. ಭಾಷೆ ಮತ್ತು ಭಾವೈಕ್ಯ. *ಸಾಧನೆ*.. ೧೩–೩/೪.

ಶರ್ಮ ಯ. ಕೃಷ್ಣ. 1988. ಕನ್ನಡದ 'ಅರ್ಕಾವೊತ್ತು'. *ಕನ್ನಡ ನುಡಿ*. 51–11/02–ಮೇ. 1988–13.

ಶಂಕರನಾರಾಯಣ ತೀ. ನಂ. ಜಾನಪದ ಪಾರಿಬಾಷಿಕ ಪದಗಳು. ಕರ್ನಾಟಕ ಜಾನಪದ. ಸಂ. ಜಿ ಎಸ್. ಶಿವರುದ್ರಪ್ಪ. ಬೆಂಗಳೂರು ವಿ. ವಿ. ಬೆಂಗಳೂರು. 1901. ಪು. 251–265

ಶರ್ಮ ಯ. ಕೃಷ್ಣ. ೧೯೮೫. ಸಮಸಂಸ್ಕೃತ ಕಾವ್ಯ ಒಂದು ಟಿಪ್ಪಣಿ. *ಕರ್ನಾಟಕ ಲೋಚನ*. ೩–೧.

ಶರ್ಮ ಎಚ್.ವಿ. ಶ್ರೀನಿವಾಸ. ೨೦೦೨. *ಶಬ್ದಾರ್ಥ ಮರು ಮಂಥನ*. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶರ್ಮಾ ಟಿ.ಟಿ. (Sharna. T T.). ೧೯೭೦. Bhaaratadallia lipigala muula Braahmi. In Vichaara Karnaataka. Bangalore: Puroogami Saahitya Sangha, 1970, p. 217. (Kannada)

ಶರ್ಮಾ ಟಿ.ಟಿ. (Sharna. T T.). ೧೯೭೦. Kannada lipi beereyalla Telugu lipi bereyalla. In Vichaara karnaataka. Bangalore. Puroogami Saahitya Sangha, 1970, p. 129-130. (Kannada)

ಶರ್ಮಾ ಕ್ರಿಶ್ಣ. ೧೯೪೦. Dakshina bhaaratakke one lipi (one script for The whole of South India.) 1:3, 1940, p. 136.

ಶಾರದಾ ಬಿ.ವಿ. ೨೦೦೦. ಸಂಕೇತ ವ್ಯವಸ್ತೆಗಳು, *ಭಾಷೆ*. ಸಂ. ಕೆ.ವಿ. ನಾರಾಯಣ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.

ಶಡಕ್ಕರಯ್ಯ ರು.ಮ. ೧೯೯೮. Kannada lipi. In 'Kanavalli;, sadanand and s (also 'Mahamaarga': Dr M M Kalaburgi Frlicitation Vol.ume Gadad. Viirashaiva Adhyayana Samste 1998, Pp.. 35-46.

ಶಿವಲಿಂಗಯ್ಯ ಜಿ. ಎ. ಕೇಶಿರಾಜನ ಶಬ್ದಮಣಿದರ್ಪಣದ ಮತ್ತೊಂದು ರೂಪದ ಪ್ರತಿ. ಕರ್ನಾಟಕ ಲೋಚನ. 9–1–ಜೂನ್–1997. ಪು. 56–66

ಶಿವಣ್ಣ ಎಸ್. ಶಬ್ದಮಣಿದರ್ಪಣದ ಒಂದು ಪ್ರಯೋಗದ ಆಕರ. ಸಾಧನೆ.. 11–4–1982. ಪು. 157–158, ಬಿಡಿಮುತ್ತು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 2004. ಪು. 302

ಶಿವಣ್ಣ ಎಸ್. ಕೇಶಿರಾಜನ ಪ್ರಯೋಗಗಳ ಆಕರಗಳು. ಪ್ರಬುದ್ಧಕರ್ನಾಟಕ. 52–4–1970. ಪು. 127–142

ಶಿವಾನಂದ ವಿ. ೧೯೯೫. ಸಂಪರ್ಕ ಭಾಷಾ ಯೋಜನೆ. *ಕನ್ನಡ ನುಡಿ*. ಸಂ ೪೮–೧೩.

ಶಿವರುದ್ರಪ್ಪ ಜಿ.ಎಸ್. ೦೦೦೦. ರೀತಿಯ ಸ್ವರೂಪ ಶೈಲಿಯ ಸಮಸ್ಯೆ. *ಕಾವ್ಯಾರ್ಥ ಚಿಂತನ*. ಶಾರದ ಪ್ರಕಾಶನ ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್. ಮತ್ತು ಕೆ.ವಿ. ನಾರಾಯಣ (ಸಂ.). ೧೯೮೦. *ಕಾವ್ಯಾರ್ಥ ಪದಕೋಶ*. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ಪು. ೨೬೮+೮.

ಶಿವರುದ್ರಪ್ಪ ಜಿ.ಎಸ್. ಕನ್ನಡ ಕವಿಗಳ ಭಾಷಾ ಪ್ರಜ್ಞೆ. ಸಾಧನೆ..

ಶೆಲ್ಡನ್ ಪೊಲಾಕ್. ದೇಶ ಭಾಷೆ ನಿರ್ಣಯ. ಕನ್ನಡ ವಿಶ್ವವಿದ್ಯಾಲಯ ಹಂಪಿ. 2000

ಶೆಟ್ಟರ್ ಶ. ೨೦೧೨,೧೪. *ಹಳಗನ್ನಡ* ೦೦೦೦. ಅಭಿನವ ಪ್ರಕಾಶನ, ಬೆಂಗಳೂರು. ಪು. ೨೪+೫೦೬.

ಶ್ರೀನಿವಾಸ ರಂಗಚಾರ್ಯ. ಕೇಶಿರಾಜ ಜೈನನಲ್ಲ, ಬ್ರಾಹ್ಮಣನು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. 17–3–ಅಕ್ಟೋಬರ 1932. ಪು. 205–225

ಶ್ರೀನಿವಾಸ ಟಿ. ರಂಗಾಚಾರ್ಯ. ೧೯೩೬. Kannada athava Karnaataka muuladarsa. Mysore

ಶ್ರೀಕಂಟಯ್ಯ ಬಿ.ಎಂ. ೧೯೧೧. Kannada Matu Tale Ettuva Bage, Vaagbushana. 19-5-1911

ಶ್ರೀಕಂಟಯ್ಯ ಎಸ್. ೧೯೨೮. Kannada passages in Exyrhyncus Papyri, No. 413, Bangalore: Mythic Society, 1928.

ಶ್ರೀಕಂಠಯ್ಯ ಬಿ. ಎಂ. ೧೯೧೧. ಕನ್ನಡ ಮಾತು ತಲೆಯೆತ್ತುವ ಬಗೆ. *ವಾಗ್ಭೂಷಣ*, ೧೬–೫೫ ಮತ್ತು ೨೦೦೧. *ಕನ್ನಡ ಸಾಹಿತ್ಯ ಮೀಮಾಂಸೆ*. ಸಂ. ರಹಮತ್ ತರಿಕೇರೆ.

ಶ್ರೀಕಂಠಯ್ಯ ಬಿ.ಎಂ. ೧೯೪೦. Presidentiol and Address. Kannada Section. *A.I.O.C.* T.vapati,. ೧೦.

